ಸೋಮವಾರ, ಜೂನ್ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 162 | ಪುಟ 14
www.prajavani.net
prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ ‘ವಿಡಿಯೊ ಎಡಿಟಿಂಗ್’ ಕೌಶಲಕ್ಕಿದೆ ಹಲವು ಅವಕಾಶ



ಸಂಖ್ಯೆ-ಸುದ್ದಿ
ಉದ್ಯೋಗ ಖಾತರಿಗೆ ಕತ್ತರಿ

15ರಂದು ಸೌರಾಷ್ಟ್ರ-ಕಛ್ ದಾಟಲಿರುವ ‘ಬಿಪರ್‌ಜಾಯ್’ 11

ಪಕ್ಷ ‘ತೊರೆಯದ’ ಪೈಲಟ್ 11

ರಾಜ್ಯದಲ್ಲಿ 2011ರಿಂದ 2021ರವರೆಗೆ 812 ಮಂದಿ ಮೃತ; ಕೆಎಸ್‌ಡಿಎಂಎ

ಸಿಡಿಲಾಘಾತವೇ ದೊಡ್ಡ ಹಂತಕ 7

ಕೆಕೆಆರ್‌ಡಿಬಿ, ಸಂಘದ ಮೇಲೆ ಆರೋಪ: ಇಂದಿನಿಂದ ಪರಿಶೀಲನೆ

# ‘ಕಲ್ಯಾಣ’ ಹಣ ದುರ್ಬಳಕೆ?

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದ ‘ಕಲ್ಯಾಣ’ಕ್ಕೆಂದು ರಾಜ್ಯ ಸರ್ಕಾರ ನೀಡಿದ್ದ ಅನುದಾನವನ್ನು ನಿಯಮಗಳನ್ನೆಲ್ಲ ಗಾಳಿಗೆ ತೂರಿ, ಅಕ್ರಮವಾಗಿ ಬಳಕೆ ಮಾಡಿರುವುದನ್ನು ಲಭ್ಯ ದಾಖಲೆಗಳ ಆಧಾರದಲ್ಲಿ ಪತ್ತೆ ಮಾಡಿರುವ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಮುಖ್ಯಮಂತ್ರಿ ಸಚಿವಾಲಯಕ್ಕೆ ಸಲ್ಲಿಸಲು ವರದಿ ಸಿದ್ಧಪಡಿಸಿದೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) 2022–23ನೇ ಸಾಲಿನಲ್ಲಿ ₹ 3,000 ಕೋಟಿ ನೀಡಲಾಗಿದ್ದು, ಹಳೆ ಬಾಕಿಯೂ ಸೇರಿ ₹ 3,683.59 ಕೋಟಿಯಲ್ಲಿ ಮಾರ್ಚ್ 2023 ರವರೆಗೆ ಶೇ 43ರಷ್ಟು ಮಾತ್ರ ವೆಚ್ಚವಾಗಿದೆ. ಒಟ್ಟು ಹಣದಲ್ಲಿ ಶೇ 60 ರಷ್ಟು ಕೂಡಾ ವೆಚ್ಚ ಆಗಿಲ್ಲ. ಅಲ್ಲದೆ, ನಿಯಮಬಾಹಿರವಾಗಿ ಅನುದಾನ ಬಳಕೆ ಮಾಡಲಾಗಿದೆ ಎಂದು ಈ ವರದಿಯಲ್ಲಿ ಆರೋಪಿಸಲಾಗಿದೆ.

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ₹ 300 ಕೋಟಿಯ ಕ್ರಿಯಾ ಯೋಜನೆಗೆ 2020ರಲ್ಲಿ ಸರ್ಕಾರ ಅನುಮೋದನೆ ನೀಡಿತ್ತು. 2020-21 ಮತ್ತು 2021-22ನೇ ಸಾಲಿನಲ್ಲಿ ತಲಾ ₹ 100 ಕೋಟಿಯಂತೆ ಒಟ್ಟು ₹ 200 ಕೋಟಿ ಒದಗಿಸಲಾಗಿದೆ. ಆದರೆ, ಸಂಘವು ಸರ್ಕಾರದ ಆದೇಶವನ್ನು ಧಿಕ್ಕರಿಸಿ, ಬೇಕಾಬಿಟ್ಟಿ ವೆಚ್ಚ ಮಾಡಿರುವ ಬಗ್ಗೆಯೂ ಉಲ್ಲೇಖಿಸಲಾಗಿದೆ.

7ನೇ ಪುಟ ನೋಡಿ

## ‘ಅನುದಾನ ಬಳಕೆಯಲ್ಲಿ ಅಕ್ರಮ ನಡೆದಿದೆ’



ಕಾನೂನುಗಳನ್ನು ಗಾಳಿಗೆ ತೂರಿ ಕೆಕೆಆರ್‌ಡಿಬಿ ಮತ್ತು ಸಂಘದಲ್ಲಿ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಅತ್ಯಂತ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಸಂವಿಧಾನದ 371ಜೆ ಅಡಿ ಕಾನೂನು ತಿದ್ದುಪಡಿ ಮಾಡಿ ನೀಡಿದ ಅನುದಾನವನ್ನು ದುರ್ಬಳಕೆ ಮಾಡಿರುವುದು ಕಣ್ಣಿಗೆ ಕಾಣುತ್ತದೆ. ಒಂದೇ ಟೆಂಡರ್ ಅನ್ನು 33 ಬಾರಿ ಕರೆದಿರುವುದೂ ನನ್ನ ಗಮನಕ್ಕೆ ಬಂದಿದೆ. ಸಂಘ ರಚಿಸಿರುವುದೇ ಕಾನೂನುಬಾಹಿರ. ಅಂಥದ್ದರಲ್ಲಿ, ಆ ಸಂಘಕ್ಕೆ ₹ 300 ಕೋಟಿಗೆ ಅನುಮೋದನೆ ನೀಡಿರುವುದು ಯಾವ ಕಾರಣಕ್ಕೂ ಒಪ್ಪುವಂಥದ್ದಲ್ಲ. ಸಂವಿಧಾನ ಮತ್ತು ಕಾನೂನು ಉಲ್ಲಂಘಿಸಿ ಅನುದಾನ ಬಳಕೆ ಮಾಡಿರುವುದು ತನಿಖೆಯಿಂದ ಬಹಿರಂಗವಾಗಿ, ತಪ್ಪಿತಸ್ಥರಿಗೆ ಶಿಕ್ಷೆ ಖಚಿತ.

**ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ



**ಕೆಕೆಆರ್‌ಡಿಬಿ ಮತ್ತು ಸಂಘದಲ್ಲಿ ನಿಯಮ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಾಣಿಸಿದೆ. ಏನೇನು ಲೋಪಗಳಾಗಿವೆ ಎಂದು ಪರಿಶೀಲಿಸಿ, ವರದಿ ನೀಡಲು ತನಿಖಾ ತಂಡ ರಚಿಸಲಾಗಿದೆ**

**ಡಿ. ಸುಧಾಕರ್,** ಯೋಜನೆ ಮತ್ತು ಸಾಂಖ್ಯಿಕ ಸಚಿವ

| ಕೆಕೆಆರ್‌ಡಿಬಿ | ಕಲ್ಯಾಣ ಸಂಘ |
|---|---|
| ₹ 3,683.59 ಕೋಟಿ<br>2022–23ನೇ ಸಾಲಿಗೆ ಲಭ್ಯವಿದ್ದ ಅನುದಾನ | ₹ 300 ಕೋಟಿ<br>2020ರಲ್ಲಿ ಅನುಮೋದನೆ ನೀಡಿದ್ದ ಕ್ರಿಯಾಯೋಜನೆ ಮೊತ್ತ |
| ₹ 1,584.31 ಕೋಟಿ<br>(ಶೇ 43) ಆಗಿರುವ ವೆಚ್ಚ | ₹ 200 ಕೋಟಿ<br>2020–21, 2021–22ರಲ್ಲಿ ಒದಗಿಸಿದ ಮೊತ್ತ |
| ಆರೋಪ– ಕೆಟಿಪಿಪಿ ಕಾಯ್ದೆ ಉಲ್ಲಂಘನೆ, ನಿಯಮಬಾಹಿರವಾಗಿ ವೆಚ್ಚ | ಆರೋಪ– ಸರ್ಕಾರದ ಆದೇಶ ಉಲ್ಲಂಘಿಸಿ ಬೇಕಾಬಿಟ್ಟಿ ವೆಚ್ಚ |

## ಕೆಕೆಆರ್‌ಡಿಬಿ ಮೇಲಿನ ಆರೋಪ

- ‘ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವ–2022’ಕ್ಕೆ ₹ 3.30 ಕೋಟಿ ವೆಚ್ಚಕ್ಕೆ ಅನುಮತಿ. ₹ 4 ಕೋಟಿ ವೆಚ್ಚ
- ಸರ್ಕಾರದ ಅನುಮತಿ ಪಡೆಯದೆ, ಮಂಡಳಿಯ ಬಡ್ಡಿ ಹಣದಲ್ಲಿ ಕಲಬುರಗಿ ಉತ್ಸವಕ್ಕೆ ₹ 4 ಕೋಟಿ ತಮ್ಮ ಹಂತದಲ್ಲೇ ಮಂಜೂರು
- ಕೆಟಿಪಿಪಿ ಕಾಯ್ದೆ ಅನ್ವಯ ವೆಚ್ಚ ಮಾಡದೆ, ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ ಅನುದಾನಕ್ಕಿಂತ ಹೆಚ್ಚು ಬಳಕೆ
- ಬಸ್ ಖರೀದಿಗೆ ಪ್ರಾದೇಶಿಕ ನಿಧಿಯಿಂದ (ಆರ್‌ಎಫ್) ₹ 45 ಕೋಟಿ ಬಳಸಬೇಕೆಂಬ ಸೂಚನೆ ಧಿಕ್ಕರಿಸಿ, ಕೊಪ್ಪಳ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ನೀಡಿದ್ದ ₹ 48.75 ಕೋಟಿ ಬಳಕೆ
- ಮುಖ್ಯಮಂತ್ರಿಯ ವಿವೇಚನೆಯಲ್ಲಿ ಸಿದ್ಧಪಡಿಸಿ ಅನುಮೋದಿಸಿದ್ದ ಕ್ರಿಯಾ ಯೋಜನೆ ಬದಲಿಸಿ, ತಮ್ಮ ಹಂತದಲ್ಲಿ 37 ಪಿಎಚ್‌ಸಿಗಳಿಗೆ ಅನುಮೋದನೆ
- ಆರು ಪಿಎಚ್‌ಸಿಗಳನ್ನು ಸಿಎಚ್‌ಸಿಗಳಾಗಿ ಮೇಲ್ದರ್ಜೆಗೇರಿಸಲು ₹ 7 ಕೋಟಿ ನಿಗದಿಪಡಿಸಿದ್ದರೂ, ಪ್ರತಿ ಪಿಎಚ್‌ಸಿಗೆ ₹ 3.50 ಕೋಟಿಯಂತೆ 21 ಕೋಟಿ ಕಾಮಗಾರಿಗೆ ಅನುಮೋದನೆ

7ನೇ ಪುಟ ನೋಡಿ



‘ಶಕ್ತಿ’ ಯೋಜನೆಗೆ ಚಾಲನೆ ನೀಡಿದ ಬಳಿಕ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಿಳೆಯೊಬ್ಬರಿಗೆ ಉಚಿತ ಬಸ್ ಪ್ರಯಾಣದ ಟಿಕೆಟ್ ನೀಡಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

ಮಹಿಳೆಯರಿಗೆ ಸರ್ಕಾರಿ ಬಸ್ ಪ್ರಯಾಣ ಉಚಿತ

# ‘ಶಕ್ತಿ’ ಇನ್ನು ‘ಗ್ಯಾರಂಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆಡಳಿತ ‘ಕೈ’ಗೆ ಸಿಕ್ಕಿದರೆ ಐದು ‘ಗ್ಯಾರಂಟಿ’ಗಳನ್ನು ಈಡೇರಿಸುವ ಭರವಸೆ ನೀಡಿದ್ದ ಕಾಂಗ್ರೆಸ್, ಈ ಪೈಕಿ ಮಹಿಳೆಯರಿಗೆ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ ‘ಶಕ್ತಿ’ ಯೋಜನೆಗೆ ಭಾನುವಾರ ಚಾಲನೆ ನೀಡಿತು.

ಆ ಮೂಲಕ, ಇನ್ನು ಮುಂದೆ ರಾಜ್ಯದಾದ್ಯಂತ ಮಹಿಳೆಯರು, ವಿದ್ಯಾರ್ಥಿನಿಯರು ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು. ಆದರೆ, ಐಷಾರಾಮಿ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶ ಇಲ್ಲ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಾರಿಗೆ ಇಲಾಖೆ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಜನೆಗೆ ಚಾಲನೆ ನೀಡಿದರು. ಯೋಜನೆಯ ಲಾಂಛನ ಮತ್ತು ‘ಶಕ್ತಿ ಸ್ಮಾರ್ಟ್ ಕಾರ್ಡ್’ ಮಾದರಿಯನ್ನು ಅನಾವರಣಗೊಳಿಸಿದರು. ಬಳಿಕ ಐವರು ಮಹಿಳೆಯರಿಗೆ ಸಾಂಕೇತಿಕವಾಗಿ ಈ ಕಾರ್ಡ್‌ಗಳನ್ನು ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇದ್ದರು.

‘ಸಮಾಜದಲ್ಲಿ ಅರ್ಧದಷ್ಟಿರುವ ಮಹಿಳೆಯರು ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಅಲ್ಪಸಂಖ್ಯಾತರು, ಮಹಿಳೆಯರು ಅವಕಾಶಗಳಿಂದ, ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಮಹಿಳೆಯರಿಗೆ ಶಕ್ತಿ ತುಂಬಿದಾಗ ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಕ್ರಮೇಣ ಅಳಿಸಲು ಸಾಧ್ಯ. ಆ ಉದ್ದೇಶದಿಂದ ಈ ಯೋಜನೆಯ ಮೂಲಕ ಶಕ್ತಿ ತುಂಬಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟರು.

6ನೇ ಪುಟ ನೋಡಿ

## ಪ್ರಮುಖ ಅಂಶಗಳು

- ರಾಜ್ಯದೊಳಗೆ ಪ್ರಯಾಣಕ್ಕೆ ಮಾತ್ರ ಅನ್ವಯ
- ಗುರುತಿನ ಚೀಟಿ ಪರಿಶೀಲಿಸಿ ಶೂನ್ಯ ಟಿಕೆಟ್ ವಿತರಣೆ
- ಇಟಿಎಂನಲ್ಲಿ ದೋಷ ಕಂಡುಬಂದರೆ ಪಿಂಕ್ ಟಿಕೆಟ್ ವಿತರಣೆ
- ಮುಂಗಡ ಬುಕಿಂಗ್ ಸೌಲಭ್ಯದ ಬಸ್‌ಗಳಲ್ಲಿ ಆಸನ ಕಾಯ್ದಿರಿಸಲು ಅವಕಾಶ
- ಶೂನ್ಯ ಟಿಕೆಟ್ ಅಥವಾ ಶಕ್ತಿ ಸ್ಮಾರ್ಟ್ ಕಾರ್ಡ್ ದತ್ತಾಂಶ ಆಧರಿಸಿ ನಿಗಮಗಳಿಗೆ ಸರ್ಕಾರದಿಂದ ಹಣ
- ಸೇವಾ ಸಿಂಧುವಿನಲ್ಲಿ ಜೂನ್ 15 ರಿಂದ ಸ್ಮಾರ್ಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸಬಹುದು. 3 ತಿಂಗಳ ಒಳಗೆ ಕಾರ್ಡ್ ವಿತರಣೆ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

**ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದಲೂ ಬಿಜೆಪಿ ಸುಳ್ಳಿನ ಮಹಾಪೂರವನ್ನೇ ಹರಿಸಿತು. ನಾವು ವಿಚಲಿತರಾಗದೆ ಮೊದಲ ಗ್ಯಾರಂಟಿ ‘ಶಕ್ತಿ’ಗೆ ಚಾಲನೆ ನೀಡಿದ್ದೇವೆ**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

ಒಳ ಪುಟಗಳಲ್ಲಿ

ಅಮೆಜಾನ್ ಕಾಡಿನಲ್ಲಿ ಹಣ್ಣು, ಬೇರು ತಿಂದು ಬದುಕಿದ್ದ ಮಕ್ಕಳು 10



ಸಿಡಿಲಿಗೆ ಇಬ್ಬರು ಸಾವು, ನಾಲ್ವರಿಗೆ ಗಾಯ 7

ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಜುಲೈ 29 ರಿಂದ 7



ಕರ್ನಾಟಕ ಸೇರಿ 7 ರಾಜ್ಯಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಅಧಿಕ

# ಶಾಲೆ ಅರ್ಧಕ್ಕೆ ಬಿಟ್ಟವರ ಸಂಖ್ಯೆ ಹೆಚ್ಚು

ನವದೆಹಲಿ (ಪಿಟಿಐ): 2021-22ರಲ್ಲಿ ಕರ್ನಾಟಕದಲ್ಲಿ ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ಅರ್ಧಕ್ಕೆ ಬಿಟ್ಟವರ ಪ್ರಮಾಣ ಶೇ 14.6ರಷ್ಟಿತ್ತು. ಇದು, ಅದೇ ಅವಧಿಯಲ್ಲಿದ್ದ ರಾಷ್ಟ್ರೀಯ ಸರಾಸರಿಗಿಂತ (ಶೇ 12.5) ಅಧಿಕ ಎಂಬ ಅಂಶ ತಿಳಿದುಬಂದಿದೆ.

ಕರ್ನಾಟಕವಲ್ಲದೇ ಗುಜರಾತ್, ಬಿಹಾರ, ಅಸ್ಸಾಂ ಹಾಗೂ ಪಂಜಾಬ್‌ನಲ್ಲಿ ಕೂಡ ಶಾಲೆಯನ್ನು ಅರ್ಧಕ್ಕೆ ಬಿಟ್ಟ ಮಕ್ಕಳ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಅಧಿಕ ಇದೆ ಎಂದು ‘ಯೋಜನಾ ಅನುಮೋದನೆ ಮಂಡಳಿ’ (ಪಿಎಬಿ) ಸಭೆಯ ಟಿಪ್ಪಣಿಯಲ್ಲಿ ಹೇಳಲಾಗಿದೆ.

2023-24ನೇ ಸಾಲಿನಲ್ಲಿ ‘ಸಮಗ್ರ ಶಿಕ್ಷಣ’ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲು ಶಿಕ್ಷಣ ಸಚಿವಾಲಯ ಕಳೆದ ಮಾರ್ಚ್ ಹಾಗೂ ಮೇನಲ್ಲಿ ಪಿಎಬಿ ಸಭೆ ನಡೆಸಿತ್ತು. 2030ರ ವೇಳೆಗೆ ಶಾಲೆಗಳಲ್ಲಿ ‘ಒಟ್ಟು ದಾಖಲಾತಿ ಪ್ರಮಾಣ’ (ಜಿಇಆರ್) ಶೇ 100ರಷ್ಟಾಗಬೇಕು ಎಂಬ ಗುರಿಯನ್ನು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಹೊಂದಿದೆ. ಆದರೆ, ಶಾಲೆಯನ್ನು ಅರ್ಧಕ್ಕೆ ಬಿಡುವ ಈ ವಿದ್ಯಮಾನ ನಿಗದಿತ ಗುರಿ ಸಾಧನೆಗೆ ಅಡ್ಡಿಯಾಗಲಿದೆ ಎಂದು ಕೇಂದ್ರ ಸರ್ಕಾರ ಅಭಿಪ್ರಾಯಪಟ್ಟಿದೆ.

ದೆಹಲಿ ಹಾಗೂ ಪಶ್ಚಿಮ ಬಂಗಾಳದಲ್ಲಿ ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ಅರ್ಧಕ್ಕೆ ಬಿಟ್ಟವರ ಕುರಿತ ಮಾಹಿತಿ ಈ ಸಭೆಯ ಟಿಪ್ಪಣಿಯಲ್ಲಿ ಇಲ್ಲ. ಆದರೆ, ಪಶ್ಚಿಮ ಬಂಗಾಳದಲ್ಲಿ 2020-21ರಲ್ಲಿ ಹಾಗೂ 2021-22ರಲ್ಲಿ ಪೂರ್ವ ಪ್ರಾಥಮಿಕ ಹಂತದಲ್ಲಿ ಶಾಲೆಯನ್ನು ಅರ್ಧಕ್ಕೆ ಬಿಡುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಪ್ರೌಢಶಾಲಾ ಹಂತದಲ್ಲಿ ಈ ಪ್ರಮಾಣ ಹೆಚ್ಚುವುದನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಟಿಪ್ಪಣಿಯಲ್ಲಿ ಹೇಳಲಾಗಿದೆ.

## ಟಿಪ್ಪಣಿಯ ಪ್ರಮುಖ ಅಂಶಗಳು



- ದೇಶದಲ್ಲಿ ಶೇ 33ರಷ್ಟು ಹೆಣ್ಣು ಮಕ್ಕಳು ಶಾಲೆಯನ್ನು ಅರ್ಧಕ್ಕೆ ಬಿಡಲು ಮನೆಗೆಲಸವೇ ಕಾರಣ ಎಂದು ಯುನಿಸೆಫ್ ನಡೆಸಿದ ಸಮೀಕ್ಷೆ ಹೇಳುತ್ತದೆ.
- ಪಾಲಕರೊಂದಿಗೆ ಕೂಲಿ ಕೆಲಸ ಅಥವಾ ಇತರರ ಮನೆಗಳಲ್ಲಿ ದುಡಿಯುವ ಸಲುವಾಗಿ ಮಕ್ಕಳು ಶಾಲೆಗೆ ಹೋಗುವುದನ್ನು ನಿಲ್ಲಿಸುತ್ತಾರೆ ಎಂದೂ ವರದಿಯಲ್ಲಿ ಹೇಳಲಾಗಿದೆ

**ಶಾಲೆ ಅರ್ಧಕ್ಕೆ ಬಿಟ್ಟವರ ಪ್ರಮಾಣ (2021–22ನೇ ಶೈಕ್ಷಣಿಕ ವರ್ಷ)**

| ರಾಜ್ಯ | ಪ್ರಮಾಣ (ಶೇಕಡಾವಾರು) |
|---|---|
| ಮೇಘಾಲಯ | 21.7 |
| ಬಿಹಾರ | 20.46 |
| ಅಸ್ಸಾಂ | 20.3 |
| ಗುಜರಾತ್ | 17.85 |
| ಪಂಜಾಬ್ | 17.2 |
| ಆಂಧ್ರಪ್ರದೇಶ | 16.7 |

ಆಧಾರ: ಯೋಜನಾ ಅನುಮೋದನೆ ಮಂಡಳಿ, ಶಿಕ್ಷಣ ಸಚಿವಾಲಯ

## ನವಜಾತ ಶಿಶುಗಳ ಶ್ರವಣ ತಪಾಸಣೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವಜಾತ ಶಿಶುಗಳಿಗೆ ಕಡ್ಡಾಯವಾಗಿ ಶ್ರವಣ ತಪಾಸಣೆ ನಡೆಸಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಆರಂಭಿಕ ಹಂತದಲ್ಲಿಯೇ ಶ್ರವಣ ಸಮಸ್ಯೆ ಪತ್ತೆ ಹಚ್ಚಿ, ಚಿಕಿತ್ಸೆ ನೀಡಿದಲ್ಲಿ ಶ್ರವಣ ದೋಷದ ಸಮಸ್ಯೆಯನ್ನು ತಡೆಯಬಹುದು. ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನವಜಾತ ಶಿಶುಗಳಿಗೆ ಕಡ್ಡಾಯವಾಗಿ ಶ್ರವಣ ತಪಾಸಣೆ ನಡೆಸಬೇಕು. ಸಮಸ್ಯೆ ಇದ್ದಲ್ಲಿ ಸೂಕ್ತ ವೈದ್ಯಕೀಯ ನೆರವು ನೀಡಬೇಕು ಎಂದು ಹೇಳಲಾಗಿದೆ.

## ‘ಪ್ರಜಾಪ್ರಭುತ್ವ ಹತ್ತಿಕ್ಕಿದ ಸುಗ್ರೀವಾಜ್ಞೆ’

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಸೇವಾ ವಲಯದ ಮೇಲಿನ ನಿಯಂತ್ರಣ ಕುರಿತು ಸುಗ್ರೀವಾಜ್ಞೆ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ವಾಗ್ದಾಳಿ ನಡೆಸಿದರು. 11

ಯಾವಾಗ ಬಂದೀತು ಬಡ್ಡಿ ಇಳಿಕೆ ಕಾಲ? 10

## ಚಿನಕುರಳಿ

ಪ್ರಕಾಶ್ ಶೆಟ್ಟಿ






ದಾಖಲೆಯ ಸಂಭ್ರಮ... ಪ್ಯಾರಿಸ್‌ನಲ್ಲಿ ಭಾನುವಾರ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದ ಸರ್ಬಿಯಾದ ನೊವಾಕ್ ಜೊಕೊವಿಚ್ ಟ್ರೋಫಿಗೆ ಮುತ್ತಿಕ್ಕಿದರು. ಅವರು 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು –ಎಎಫ್‌ಪಿ ಚಿತ್ರ

ಸುದ್ದಿ 11

# ಬ್ರಿಜ್‌ಭೂಷಣ್ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಲಖನೌ: ಕುಸ್ತಿ ಫೆಡರೇಷನ್ ಮುಖ್ಯಸ್ಥ ಹಾಗೂ ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು ತಮ್ಮ ಸ್ವಕ್ಷೇತ್ರ ಉತ್ತರ ಪ್ರದೇಶದ ಬಹರಾಯಿಚ್ ಜಿಲ್ಲೆಯ ಕೈಸರ್‌ಗಂಜ್‌ನಲ್ಲಿ ಬೃಹತ್ ರ್‍ಯಾಲಿಯನ್ನು ಭಾನುವಾರ ನಡೆಸಿದರು. ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಎದುರಿಸುತ್ತಿರುವ ಅವರ ಬಂಧನಕ್ಕೆ ಒತ್ತಡ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ತಮ್ಮ ಶಕ್ತಿ ಪ್ರದರ್ಶನಕ್ಕಾಗಿಯೇ ಈ ರ್‍ಯಾಲಿ ನಡೆಸಿದ್ದಾರೆ ಎನ್ನಲಾಗುತ್ತಿದೆ.

ಈ ಭಾಗದಲ್ಲಿ ತಮ್ಮ ಶಕ್ತಿ ಕುಂದಿಲ್ಲ ಎನ್ನುವ ಸಂದೇಶವನ್ನು ಬಿಜೆಪಿಗೆ ನೀಡುವ ಉದ್ದೇಶವೂ ಈ ರ್‍ಯಾಲಿಯ ಹಿಂದಿದೆ ಎಂದು ರಾಜಕೀಯ ವಿಶ್ಲೇಷಕರು ಹಾಗೂ ಸಿಂಗ್ ಅವರ ಆಪ್ತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



**ಕೈಸರ್‌ಗಂಜ್ ಲೋಕಸಭಾ ಕ್ಷೇತ್ರದಿಂದಲೇ ನಾನು ಮತ್ತೊಮ್ಮೆ ಲೋಕಸಭೆಗೆ ಸ್ಪರ್ಧಿಸುತ್ತೇನೆ, ಸ್ಪರ್ಧಿಸುತ್ತೇನೆ, ಸ್ಪರ್ಧಿಸುತ್ತೇನೆ**

**ಬ್ರಿಜ್‌ಭೂಷಣ್ ಶರಣ್ ಸಿಂಗ್,** ಸಂಸದ, ಕುಸ್ತಿ ಫೆಡರೇಷನ್ ಅಧ್ಯಕ್ಷ

7ನೇ ಪುಟ ನೋಡಿ

ಚಾಮುಂಡಿ ವನ್ಯಜೀವಿ ಸಂರಕ್ಷಣಾ ಕೇಂದ್ರ: ಅನಾಥ ಆನೆಮರಿಗೆ ಸೋಮು ಆರೈಕೆ

# ಮರುಜೀವ ಪಡೆದ ‘ಕುಸುಮಾಲೆ’

• ಆರ್. ಜಿತೇಂದ್ರ

ಮೈಸೂರು: ‘ಏ... ಬಾ ಇಲ್ಲಿ...’ ಎಂದ ಕೂಡಲೇ ಕುಸುಮಾಲೆ ಓಡಿಬಂದಳು. ತನ್ನ ಪುಟಾಣಿ ಸೊಂಡಿಲಿನಿಂದ ಪ್ರೀತಿಯಿಂದ ಮೂಸುತ್ತ, ನೆಚ್ಚಿನ ಕಲ್ಲಂಗಡಿ ಹಣ್ಣಿಗಾಗಿ ಬೇಡಿಕೆ ಇಟ್ಟು ಖುಷಿಯಿಂದ ಅತ್ತಿಂದಿತ್ತ ಓಡಾಡತೊಡಗಿದಳು.

ಸೋಮುವಿಗೆ ತನ್ನ ಮಗಳ ಜೊತೆಗೇ ಓಡಾಡಿದಷ್ಟು ಖುಷಿ. ಆಕೆಯ ಮೂಕಭಾಷೆಯಲ್ಲೇ ಎಲ್ಲವನ್ನೂ ಅರ್ಥ ಮಾಡಿಕೊಂಡು ಮುದ್ದು ಮಾಡಿದರು, ಮದ್ದು ನೀಡಿ ಅವಳನ್ನು ಸಮಾಧಾನ ಮಾಡಿದರು.

ಮೈಸೂರಿನ ಹೊರವಲಯದ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಇರುವ ಚಾಮರಾಜೇಂದ್ರ ಮೃಗಾಲಯದ ಚಾಮುಂಡಿ ವನ್ಯಜೀವಿ ಸಂರಕ್ಷಣೆ, ರಕ್ಷಣೆ ಹಾಗೂ ಪುನರ್ವಸತಿ ಕೇಂದ್ರದಲ್ಲಿ ಸದ್ಯ 11 ತಿಂಗಳ ಪ್ರಾಯದ ಈ ಕುಸುಮಾಲೆಯೇ ಪ್ರಮುಖ ಆಕರ್ಷಣೆ. ಬಿಳಿಗಿರಿರಂಗನ ಬೆಟ್ಟದಲ್ಲಿ ತಾಯಿಯಿಂದ ಬೇರ್ಪಟ್ಟು ಅನಾಥವಾಗಿದ್ದ ಈ ಮರಿಯಾನೆಗೆ, ಬಿಳಿಗಿರಿರಂಗನ ಎರಡನೇ ಮಡದಿ ‘ಕುಸುಮಾಲೆ’ ಹೆಸರನ್ನೇ ಇಡಲಾಗಿದೆ. ಮೃಗಾಲಯದ ಅಧಿಕಾರಿ–ಸಿಬ್ಬಂದಿಯ ಆರೈಕೆಯಿಂದ ಈಕೆ ಲವಲವಿಕೆಯಿಂದ ಇದ್ದಾಳೆ.

ಈ ಮರಿಯಾನೆ ಅರಣ್ಯ ಇಲಾಖೆಗೆ ಸಿಕ್ಕಾಗ ಒಂದು ತಿಂಗಳಾಗಿತ್ತು. ಆನೆಯಂತಹ ಅತಿಸೂಕ್ಷ್ಮ ಜೀವಿಯ ಪಾಲನೆಯ ಜವಾಬ್ದಾರಿ ಯಾರಿಗೆ ವಹಿಸಬೇಕೆಂಬ ಪ್ರಶ್ನೆ ಎದುರಾದಾಗ ಮೊದಲು ಕಣ್ಣ ಮುಂದೆ ಬಂದಿದ್ದೇ ಸಿಬ್ಬಂದಿ ಸೋಮು ಅಲಿಯಾಸ್ ಸೋಮಶೇಖರ್.

6ನೇ ಪುಟ ನೋಡಿ



ಆನೆ ಮರಿ ಕುಸುಮಾಲೆಗೆ ಬಾಟಲಿಯಲ್ಲಿ ಹಾಲುಣಿಸುತ್ತಿರುವ ಮೃಗಾಲಯದ ಸಿಬ್ಬಂದಿ ಸೋಮಶೇಖರ್ ಪ್ರಜಾವಾಣಿ ಚಿತ್ರ/ಅನೂಪ್ ರಾಘ್.ಟಿ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

## ತಾಯಿಯಾದ ‘ನಯನ’

ಕುಸುಮಾಲೆಗೆ ಸೋಮು ಜೊತೆಗೆ ಆನೆ ಶಿಬಿರದಲ್ಲಿನ ‘ನಯನ’ ಸಹ ತಾಯಿಯಂತೆ ಪೊರೆಯುತ್ತಿರುವುದು ಮತ್ತೊಂದು ವಿಶೇಷ. 12 ವರ್ಷದ ಈ ಹೆಣ್ಣಾನೆ ಕುಸುಮಾಲೆ ಜೊತೆ ಆತ್ಮೀಯ ಒಡನಾಟ ಬೆಳೆಸಿಕೊಂಡಿದ್ದು, ತಾಯಿಗೆ ಮಿಗಿಲಾಗಿ ಆಕೆಗೆ ರಕ್ಷಣೆ ನೀಡುತ್ತಿದ್ದಾಳೆ. ಯಾರಾದರೂ ಆಕೆಯನ್ನು ಮುಟ್ಟಲು ಬಂದರೆ ಸೊಂಡಿಲು ಎತ್ತಿ ಗದರುತ್ತಾಳೆ. ಸದಾ ಜೊತೆಗೇ ಇರಲು ಬಯಸುತ್ತಾಳೆ.

## ನಿರ್ವಹಣೆ ಅವಧಿಯಲ್ಲಿರುವ ವೈಟ್‌ಟಾಪಿಂಗ್ ರಸ್ತೆಗಳಲ್ಲೇ ಬಿಬಿಎಂಪಿಯಿಂದ ಮತ್ತೆ ಕಾಮಗಾರಿ



ಬಳ್ಳಾರಿ ರಸ್ತೆ

# ಹೈ ಡೆನ್ಸಿಟಿ ಕಾರಿಡಾರ್

**₹226 ಕೋಟಿ** ಸರ್ಕಾರ ನಿಗದಿಪಡಿಸಿದ್ದ ವೆಚ್ಚ

**₹237 ಕೋಟಿ** ಗುತ್ತಿಗೆ ನೀಡಿರುವ ಮೊತ್ತ

**11 ತಿಂಗಳು** ಕಾಮಗಾರಿ ಮುಗಿಯಬೇಕಾದ ಅವಧಿ

**ಪ್ಯಾಕೇಜ್ 1**
**₹77.55 ಕೋಟಿ**
- ಬಳ್ಳಾರಿ ರಸ್ತೆಯಿಂದ ಚಾಲುಕ್ಯ ವೃತ್ತದಿಂದ ಹೆಬ್ಬಾಳ
- ಹೊರ ವರ್ತುಲ ರಸ್ತೆಯಿಂದ ಗೊರಗುಂಟೆಪಾಳ್ಯ ಜಂಕ್ಷನ್ ಮೂಲಕ ಕೆ.ಆರ್. ಪುರ

**ಪ್ಯಾಕೇಜ್ 2**
**₹76.69 ಕೋಟಿ**
- **ಹಳೆ ಮದ್ರಾಸ್ ರಸ್ತೆ ಕಾರಿಡಾರ್**– ಟ್ರಿನಿಟಿ ವೃತ್ತ, ಹಲಸೂರು ಕೆರೆ, ಒಎಂಆರ್ ಬೆನ್ನಿಗಾನಹಳ್ಳಿ, ಕೆ.ಆರ್. ಪುರ, ಎನ್‌ಎಚ್–648ರ ಮೂಲಕ ಹೂಡಿ, ಐಟಿಪಿಎಲ್, ಕೆ.ಆರ್. ರೈಲುನಿಲ್ದಾಣದಿಂದ ಮೇಡಿಹಳ್ಳಿ.
- **ಹಳೆ ವಿಮಾನ ರಸ್ತೆ ಕಾರಿಡಾರ್**– ಎಎಸ್‌ಸಿ ಕೇಂದ್ರದಿಂದ ದೊಮ್ಮಲೂರು, ಮಾರತಹಳ್ಳಿ, ಕುಂದಲಹಳ್ಳಿ, ವರ್ತೂರು ಮೂಲಕ ಕಾಡುಗೋಡಿ

**ಪ್ಯಾಕೇಜ್ 3**
**₹83.64 ಕೋಟಿ**
- **ಹೊಸೂರು ರಸ್ತೆ ಕಾರಿಡಾರ್**- ವೆಲ್ಲಾರ ಜಂಕ್ಷನ್‌ನಿಂದ ಕೇಂದ್ರ ರೇಷ್ಮೆ ಮಂಡಳಿ ಮೂಲಕ ಆಡುಗೋಡಿ, ಫೋರಂ ಮಾಲ್–ಮಡಿವಾಳ
- **ಕನಕಪುರ ರಸ್ತೆ ಕಾರಿಡಾರ್**- ಕೆ.ಆರ್. ರಸ್ತೆಯಿಂದ ಬನಶಂಕರಿ–ಸಾರಕ್ಕಿಯಿಂದ ನೈಸ್ ರಸ್ತೆವರೆಗೆ.
- **ಮೈಸೂರು ರಸ್ತೆ ಕಾರಿಡಾರ್**– ಹಡ್ಸನ್ ವೃತ್ತದಿಂದ ಟೌನ್‌ಹಾಲ್, ನಾಯಂಡಹಳ್ಳಿ, ಕೆಂಗೇರಿಯಿಂದ ನೈಸ್ ರಸ್ತೆವರೆಗೆ.
- **ಮಾಗಡಿ ರಸ್ತೆ ಕಾರಿಡಾರ್**– ಹಳೆ ಬಿನ್ನಿಮಿಲ್‌ನಿಂದ ಟೋಲ್‌ಗೇಟ್ ಜಂಕ್ಷನ್, ಜೈಮುನಿರಾವ್ ವೃತ್ತ, ಹೌಸಿಂಗ್ ಬೋರ್ಡ್, ಕಾಮಾಕ್ಷಿಪಾಳ್ಯ, ಶ್ರೀಗಂಧದಕಾವಲ್, ಸುಂಕದಕಟ್ಟೆ, ಅಂಜನಾನಗರದಿಂದ ನೈಸ್ ರಸ್ತೆವರೆಗೆ.
- **ತುಮಕೂರು ರಸ್ತೆ ಕಾರಿಡಾರ್**– ಸಂಗೊಳ್ಳಿರಾಯಣ್ಣ ವೃತ್ತದಿಂದ ಓಕಳಿಪುರಂ, ಡಾ.ರಾಜ್‌ಕುಮಾರ್ ರಸ್ತೆ, ಸೋಪ್ ಫ್ಯಾಕ್ಟರ್ ಜಂಕ್ಷನ್‌ನಿಂದ ಯಶವಂತರಪುರ, ಗೊರಗುಂಟೆಪಾಳ್ಯ ಜಂಕ್ಷನ್

# ಹಳೆ ಕಾಮಗಾರಿಗೆ ಹೊಸ ಹೆಸರು...

• ಆರ್. ಮಂಜುನಾಥ್

ಬೆಂಗಳೂರು: ವೈಟ್‌ಟಾಪಿಂಗ್, ಟೆಂಡರ್ ಶ್ಯೂರ್ ಯೋಜನೆಯಡಿ ಅಭಿವೃದ್ಧಿಯಾಗಿರುವ ರಸ್ತೆಗಳು, ನಮ್ಮ ಮೆಟ್ರೊ ಕಾಮಗಾರಿ ನಡೆಯುತ್ತಿರುವ ರಸ್ತೆಗಳಲ್ಲೇ 'ಹೈ ಡೆನ್ಸಿಟಿ ಕಾರಿಡಾರ್' ಹೆಸರಿನಲ್ಲಿ ಚರಂಡಿ, ಫುಟ್‌ಪಾತ್, ಡಾಂಬರಿಗೆ ₹237 ಕೋಟಿ ವೆಚ್ಚ ಮಾಡಲು ಬಿಬಿಎಂಪಿ ಮುಂದಾಗಿದೆ.

ವಿಧಾನಸಭೆ ಚುನಾವಣೆಗೆ ಮುನ್ನ ತರಾತುರಿಯಲ್ಲಿ ಹೈ ಡೆನ್ಸಿಟಿ ಕಾರಿಡಾರ್ ಟೆಂಡರ್‌ಗೆ ಅನುಮೋದನೆ ಪಡೆಯಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ– 'ಚರಂಡಿ, ಫುಟ್‌ಪಾತ್‌ಗಳ ಸುಧಾರಣೆ ಮತ್ತು ಡಾಂಬರು ಹಾಕುವುದು' ಎಂದು ಹೇಳಲಾಗಿದೆ. ಆದರೆ, ಈಗಾಗಲೇ ಅಭಿವೃದ್ಧಿಯಾಗಿರುವ, ನಿರ್ವಹಣೆಯ ಅವಧಿಯಲ್ಲಿರುವ, ನಮ್ಮ ಮೆಟ್ರೊ ಕಾಮಗಾರಿ ನಡೆಯುತ್ತಿರುವ ರಸ್ತೆಗಳಲ್ಲಿ ಈ ಕಾಮಗಾರಿ ಮಾಡುವ ವಿವರಣೆ ಇದೆ. ಅಲ್ಲದೆ ಇದೇ ರಸ್ತೆಗಳಲ್ಲಿ ಮೇಲ್ಸೇತುವೆ, ಅಂಡರ್‌ಪಾಸ್‌ಗಳ ಯೋಜನೆಯೂ ಇದೆ.

ರಸ್ತೆಗಳಲ್ಲಿ ವಾಹನ ದಟ್ಟಣೆ ನಿವಾರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು 'ಹೈ ಡೆನ್ಸಿಟಿ ಕಾರಿಡಾರ್' ಹೆಸರಿನಲ್ಲಿ 12 ರಸ್ತೆಗಳನ್ನು ಅಭಿವೃದ್ಧಿ ಮಾಡಲು ರಾಜ್ಯ ಸರ್ಕಾರ ಅನುಮೋದನೆ ನೀಡಿತ್ತು. ಆದರೆ, ಟೆಂಡರ್ ಕರೆಯುವಾಗ ಮೂರು ರಸ್ತೆಗಳನ್ನು ಕೈಬಿಟ್ಟು 9 ರಸ್ತೆಗಳನ್ನು ಅಂತಿಮಗೊಳಿಸಲಾಯಿತು. ₹226 ಕೋಟಿ ಅಂದಾಜು ಮೊತ್ತವಾಗಿದ್ದರೂ, ಹೆಚ್ಚಿನ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ.

ಕೆ.ಆರ್. ಪುರದಿಂದ ಗೊರಗುಂಟೆಪಾಳ್ಯ ವರ್ತುಲ ರಸ್ತೆ, ಮೈಸೂರು ರಸ್ತೆಯಲ್ಲಿ ಆಜಾದ್‌ನಗರದಿಂದ ಗಾಳಿ ಆಂಜನೇಯ ದೇವಸ್ಥಾನದವರೆಗೆ, ಹೊಸೂರು ರಸ್ತೆಯಲ್ಲಿ ಸಿಲ್ಕ್ ಬೋರ್ಡ್‌ನಿಂದ ವೆಲ್ಲಾರ ಜಂಕ್ಷನ್, ಫೋರಂ ಮಾಲ್ ಆಡುಗೋಡಿವರೆಗೆ ವೈಟ್‌ಟಾಪಿಂಗ್ ಮಾಡಲಾಗಿದೆ. ಎಲ್ಲೆಲ್ಲಿ ವೈಟ್‌ಟಾಪಿಂಗ್ ಆಗಿದೆಯೋ ಅಲ್ಲೆಲ್ಲ ಪ್ರತಿ 30 ಮೀಟರ್‌ಗೆ ಒಂದು ಕ್ರಾಸ್ ಡಕ್ಟ್ ಹಾಕಲಾಗಿದೆ. ಈಗ 'ಹೈ ಡೆನ್ಸಿಟಿ ಕಾರಿಡಾರ್' ಯೋಜನೆಯಲ್ಲೂ ಅವೇ ಕಾಮಗಾರಿಯನ್ನು ತೋರಿಸಲಾಗಿದೆ. ಫುಟ್‌ಪಾತ್ ನೆಲಹಾಸು ಹಾಗೂ ಚರಂಡಿ ಸೈಡ್‌ವಾಲ್‌ಗಳನ್ನು ಕಿತ್ತು ಮರು ನಿರ್ಮಿಸುವುದಾಗಿ ಕಾಮಗಾರಿ ವಿವರಣೆಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ ವಿಶೇಷ

'ಕಾರಿಡಾರ್ ಯೋಜನೆಯಲ್ಲಿನ ರಸ್ತೆಗಳಲ್ಲಿ ಚರಂಡಿ ಮತ್ತು ಪಾದಚಾರಿ ಮಾರ್ಗಗಳನ್ನು ಸುಧಾರಣೆ ಮಾಡುವ ಕಾಮಗಾರಿ ಇದೆ. ಚರಂಡಿ, ಪಾದಚಾರಿ ಮಾರ್ಗವನ್ನೂ ವೈಟ್‌ಟಾಪಿಂಗ್ ಯೋಜನೆಯಲ್ಲಿ ಅಭಿವೃದ್ಧಿ ಮಾಡಲಾಗಿದೆ. ಅವುಗಳು ನಿರ್ವಹಣೆ ಅವಧಿಯಲ್ಲಿವೆ. ಅದನ್ನೇ ಕಿತ್ತು, ಮತ್ತೆ ಅದೇ ಕೆಲಸವನ್ನು ಮಾಡಲಾಗುತ್ತಿದೆ. ಹಿಂದೆ ಕೆಲಸ ಮಾಡಿ, ನಿರ್ವಹಣೆ ಜವಾಬ್ದಾರಿ ಹೊಂದಿರುವ ಗುತ್ತಿಗೆದಾರರಿಂದಲೇ ಮಾಡಿಸಬಹುದು. ಆದರೆ ಅನಗತ್ಯವಾಗಿ ವೆಚ್ಚ ಮಾಡಲಾಗುತ್ತಿದೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳೇ ಹೇಳುತ್ತಾರೆ.

ಹೈ ಡೆನ್ಸಿಟಿ ಕಾರಿಡಾರ್ ಕಾಮಗಾರಿಯ ನೇತೃತ್ವ ವಹಿಸಿಕೊಂಡಿರುವ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನೂ ಹೊಂದಿರುವ ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ಈ ಬಗ್ಗೆ ಪ್ರತಿಕ್ರಿಯಿಸಲಿಲ್ಲ.



ವೈಟ್‌ಟಾಪಿಂಗ್, ಫುಟ್‌ಪಾತ್, ಬಸ್‌ಬೇಗಳನ್ನು ಒಳಗೊಂಡಿರುವ ಮೈಸೂರು ರಸ್ತೆ

### 2016ರಲ್ಲೇ ಪ್ರಸ್ತಾಪ!

12 ಹೈ ಡೆನ್ಸಿಟಿ ಕಾರಿಡಾರ್‌ಗಳ ನಿರ್ಮಾಣ ಸಂಬಂಧ 2016ರಲ್ಲಿ ಸರ್ಕಾರ ಘೋಷಿಸಿತ್ತು. ಕೆಆರ್‌ಐಡಿಎಲ್‌ಗೆ ಸಾವಿರಕ್ಕೂ ಹೆಚ್ಚು ಕೋಟಿ ವೆಚ್ಚದ ಕಾಮಗಾರಿಯನ್ನು ವಹಿಸಲು ಯೋಜಿಸಲಾಗಿತ್ತು. ತಡೆರಹಿತ ಸಂಚಾರ, ರಸ್ತೆಗಳಲ್ಲಿ ಕ್ಯಾಮೆರಾ ಸೇರಿದಂತೆ ಅತ್ಯಾಧುನಿಕ ವ್ಯವಸ್ಥೆಗಳ ಯೋಜನೆ ಇದಾಗಿತ್ತು. ಆದರೆ, ಇದೀಗ ತರಾತುರಿಯಲ್ಲಿ ಅನುಮೋದನೆಗೊಂಡಿರುವ ಹೈ ಡೆನ್ಸಿಟಿ ಕಾರಿಡಾರ್ ಯೋಜನೆ ಚರಂಡಿ, ಫುಟ್‌ಪಾತ್ ಮರು ಸುಧಾರಣೆಗೆ ಮೀಸಲಾಗಿದೆ.

### ಹೆಸರಿಟ್ಟರಷ್ಟೇ ಸಾಕೇ?

'ಹೈ ಡೆನ್ಸಿಟಿ ಕಾರಿಡಾರ್ ಎಂಬುದನ್ನು ವಿದೇಶಗಳಿಂದ ಆಮದು ಮಾಡಿಕೊಂಡಿರುವುದು. ಅದು ಹೇಗಿರುತ್ತದೆ, ಎಂತಹ ವ್ಯವಸ್ಥೆ ಇರಬೇಕು, ರಸ್ತೆ ಹೇಗಿರಬೇಕು ಎಂಬುದನ್ನೆಲ್ಲ ಅರಿತು, ಸಮಗ್ರವಾಗಿ ಅಳವಡಿಸಿಕೊಳ್ಳಬೇಕು. ಹೆಚ್ಚು ವಾಹನಗಳು ಓಡಾಡುವ ರಸ್ತೆಗಳಲ್ಲಿ ತಡೆರಹಿತ ಸಂಚಾರಕ್ಕೆ ಅನುವು ಮಾಡಿಕೊಡುವುದೇ ಈ ವ್ಯವಸ್ಥೆ. ಆದರೆ, 2 ಕಿ.ಮೀಗೆ ಒಂದು ಸಿಗ್ನಲ್, ಅಕ್ಕಪಕ್ಕ ವಾಹನ ನಿಲುಗಡೆ ಸೇರಿದಂತೆ ಮೂಲಸೌಕರ್ಯವನ್ನು ನೀಡದೆ 'ಹೈ ಡೆನ್ಸಿಟಿ' ಹೆಸರಿನಲ್ಲಿ ಅಭಿವೃದ್ಧಿಯ ಸಬೂಬು ನೀಡುವುದು ಅರ್ಥಹೀನ. ಚರಂಡಿ ಹೂಳೆತ್ತಿ, ಫುಟ್‌ಪಾತ್ ಕಲ್ಲು ತೆಗೆದು ಮತ್ತೆ ಹೊಸ ಕಲ್ಲು ಹಾಕಿದರೆ ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಬಿಲ್ ಮಾಡಿಕೊಳ್ಳಬಹುದು ಅಷ್ಟೇ. ಹೊಸ ಕೆಲಸಕ್ಕಿಂತ ರಸ್ತೆಗಳನ್ನು ನಿರ್ವಹಣೆ ಮಾಡುವುದೇ ಅತಿಮುಖ್ಯ' ಎಂದು ಸಂಚಾರ ತಜ್ಞ ಶ್ರೀಹರಿ ಅಭಿಪ್ರಾಯಪಟ್ಟರು.



ಒಕಳೀಪುರದಿಂದ ರಾಜಾಜಿನಗರ ಪ್ರವೇಶದವರೆಗೆ ಇತ್ತೀಚೆಗೆ ಪೂರ್ಣಗೊಂಡಿರುವ ಮೇಲ್ಸೇತುವೆ, ರಸ್ತೆ

### 27 ದಿನದಲ್ಲೇ ಕಾರ್ಯಾದೇಶ!

ಹೈ ಡೆನ್ಸಿಟಿ ಕಾರಿಡಾರ್‌ಗೆ ಟೆಂಡರ್ ಪ್ರಕಟಣೆಯಿಂದ ಕಾರ್ಯಾದೇಶದವರೆಗಿನ ಎಲ್ಲ ಪ್ರಕ್ರಿಯೆಯನ್ನು ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರ 27 ದಿನಗಳಲ್ಲಿ ಪೂರೈಸಿವೆ. ಮಾರ್ಚ್ 1ರಂದು ಮೂರು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲಾಗಿದ್ದು, 20ರಂದೇ ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನವನ್ನು ಮುಗಿಸಲಾಗಿದೆ. ಹೆಚ್ಚುವರಿ ಮೊತ್ತಕ್ಕೆ ಬಿಡ್ ಮಾಡಿದವರೊಂದಿಗೆ ಸಂಧಾನವನ್ನೂ ನಡೆಸಿ, ರಾಜ್ಯ ಸರ್ಕಾರಕ್ಕೆ ಅನುಮೋದನೆಗೆ ಬಿಬಿಎಂಪಿ ಸಲ್ಲಿಸಿದೆ. ಮಾರ್ಚ್ 23ರಂದು ಸರ್ಕಾರ ಹೆಚ್ಚುವರಿ ಮೊತ್ತದ ಟೆಂಡರ್‌ಗೆ ಅನುಮೋದನೆಯನ್ನೂ ನೀಡಿದೆ. ನಂತರ ಬಿಬಿಎಂಪಿ ಕಾರ್ಯಾದೇಶವನ್ನೂ ನೀಡಿದೆ. 11 ತಿಂಗಳಲ್ಲಿ ಕಾಮಗಾರಿ ಮುಗಿಸಬೇಕೆಂಬ ಷರತ್ತು ಇದೆ.

### ಈಜಿಪುರ ಮೇಲ್ಸೇತುವೆಗೆ ವಿಳಂಬ

ಈಜಿಪುರ ಮೇಲ್ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತು ಮೂರು ವರ್ಷಗಳಿಂದ ನಾಲ್ಕನೇ ಬಾರಿ ಟೆಂಡರ್ ಕರೆಯಲಾಗಿದ್ದರೂ ಅದನ್ನು ಸರ್ಕಾರದ ಅನುಮೋದನೆಗೆ ಬಿಬಿಎಂಪಿ ಎಂಜಿನಿಯರ್‌ಗಳು ಕಳುಹಿಸಿಲ್ಲ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸೂಚನೆ ನೀಡಿದ್ದರೂ ಪ್ರಯೋಜನವಾಗಿಲ್ಲ. 'ಈಜಿಪುರದ ಟೆಂಡರ್ ಇನ್ನೂ ಪರಿಶೀಲನೆಯಲ್ಲಿದೆ' ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳುತ್ತಾರೆ. ಆದರೆ, ಹೈ ಡೆನ್ಸಿಟಿ ಕಾರಿಡಾರ್‌ಗೆ ಮಾತ್ರ ಅತಿತುರ್ತಾಗಿ ಎಲ್ಲ ಪ್ರಕ್ರಿಯೆಯನ್ನೂ ಮುಗಿಸಿದ್ದಾರೆ.

## ಸುದ್ದಿ 2 ನಿಮಿಷ

### 'ಐ ಫಾರ್ ವೈಲ್ಡ್' ಪ್ರದರ್ಶನಕ್ಕೆ ಚಾಲನೆ

ಬೆಂಗಳೂರು: ವಿವಿಧ ಪ್ರಭೇದಗಳು ಹಾಗೂ ವಿವಿಧ ವರ್ಗಗಳ ವನ್ಯಜೀವಿಗಳ ವಿಸ್ಮಯಕಾರಿ ಛಾಯಾಚಿತ್ರಗಳ ಪ್ರದರ್ಶನ 'ಐ ಫಾರ್ ವೈಲ್ಡ್' ಅನ್ನು ಅಡವಿ ಫೌಂಡೇಶನ್ ವತಿಯಿಂದ ಚಿತ್ರಕಲಾ ಪರಿಷತ್ತಿನಲ್ಲಿ ಭಾನುವಾರ ಆಯೋಜಿಸಲಾಗಿತ್ತು.

'ಇದು ಪ್ಯಾನ್-ಇಂಡಿಯಾ ಛಾಯಾಗ್ರಹಣ ಸ್ಪರ್ಧೆಯಾಗಿತ್ತು. ಐದು ವಿಭಾಗಗಳಲ್ಲಿ 200ಕ್ಕೂ ಹೆಚ್ಚು ಛಾಯಾ ಚಿತ್ರಗಳು ಈ ಸ್ಪರ್ಧೆಗೆ ಬಂದಿದ್ದವು. ಪ್ರತಿ ವಿಭಾಗದಲ್ಲಿ ಮೂರು ಛಾಯಾಗ್ರಾಹಕರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ' ಎಂದು ವನ್ಯಜೀವಿ ಸಂರಕ್ಷಣಾಧಿಕಾರಿ ಮತ್ತು ಅಡವಿ ಅಲರ್ಟ್ ಫೌಂಡೇಶನ್ ಸಂಸ್ಥಾಪಕ ಪವನ್ ಜೋಶಿ ಮಾಹಿತಿ ನೀಡಿದರು.

ಕಾಡು ಪ್ರಾಣಿಗಳ ಸೂಕ್ಷ್ಮ ಮತ್ತು ಜಟಿಲತೆ, ಮಾನವ-ಪ್ರಾಣಿ ಸಂಘರ್ಷಕ್ಕೆ ಕಾರಣಗಳು ಈ ಚಿತ್ರಗಳಲ್ಲಿ ಕಾಣುತ್ತವೆ ಎಂದು ವಿಶ್ಲೇಷಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ಮಾತನಾಡಿ, 'ಬಿ.ಆರ್.ಟಿ, ಬಂಡೀಪುರ, ನಾಗರಹೊಳೆ ಮತ್ತು ಭದ್ರಾ ಅರಣ್ಯ ಸಹಿತ ರಾಜ್ಯದ ಎಲ್ಲ ಕಾಡುಗಳು ವನ್ಯಜೀವಿ ಛಾಯಾಗ್ರಾಹಕರಿಗೆ ಪ್ರಶಸ್ತ ಸ್ಥಳವಾಗಿದೆ. ಕಾಡು ಪ್ರಾಣಿಗಳು ಮತ್ತು ಅವುಗಳ ನಡುವೆ ವಾಸಿಸುವ ಅರಣ್ಯವಾಸಿಗಳ ಜೀವನದ ಒಳನೋಟವನ್ನು ಪಡೆಯಲು ಈ ಛಾಯಾಚಿತ್ರ ಪ್ರದರ್ಶನ ಅನುವು ಮಾಡಿಕೊಡುತ್ತದೆ' ಎಂದು ವಿವರಿಸಿದರು.

ವನ್ಯಜೀವಿ ಛಾಯಾಗ್ರಾಹಕ ಅಮೋಘವರ್ಷ, ವನ್ಯಜೀವಿ ಸಂರಕ್ಷಣಾ ಟ್ರಸ್ಟ್ ನ ಅಧ್ಯಕ್ಷ ಮತ್ತು ಸಿಇಒ ಡಾ. ಅನೀಶ್ ಅಂಧೇರಿಯಾ ಇದ್ದರು.

ಜೂನ್ 13ರ ವರೆಗೆ ಈ ಛಾಯಾಚಿತ್ರಗಳ ಪ್ರದರ್ಶನ ಇರಲಿದೆ.

### ಸಮಾಜ ಕಟ್ಟಲು ಅದ್ಭುತ ಅಸ್ತ್ರ ವಿದ್ಯೆ: ಎಸ್.ನಾರಾಯಣ್



ಕೆ.ಆರ್.ಪುರ: ಸಮಾಜವನ್ನು ಕಟ್ಟಲು ವಿದ್ಯೆ ಅದ್ಭುತವಾದ ಅಸ್ತ್ರ ಮತ್ತು ಆಸ್ತಿ ಎಂದು ನಿರ್ದೇಶಕ ಎಸ್. ನಾರಾಯಣ್ ತಿಳಿಸಿದರು.

ಕೆ.ಆರ್. ಪುರ ಸಮೀಪದ ಕುಂದಲಹಳ್ಳಿಯ ಸಿ.ಎಂ.ಆರ್. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎರಡು ದಿನಗಳ ಕಾಲ ನಡೆದ ಸಾಂಸ್ಕೃತಿಕ ವೈವಿಧ್ಯವನ್ನು ಬಿಂಬಿಸುವ 'ಕಲ್ಚರಾ-23' ರಾಷ್ಟ್ರೀಯ ಸಾಂಸ್ಕೃತಿಕ ಮತ್ತು ತಾಂತ್ರಿಕ ಉತ್ಸವದಲ್ಲಿ ಅವರು ಮಾತನಾಡಿದರು.

ವಿದ್ಯೆ ಮತ್ತು ವಿವೇಕದಿಂದ ಬದುಕು ಮೌಲ್ಯಯುತವಾಗುತ್ತದೆ. ವಿದ್ಯಾರ್ಥಿಗಳು ಕಲಿಯುವ ವಯಸ್ಸಿನಲ್ಲಿ ಉತ್ತಮ ಅಭ್ಯಾಸ ರೂಢಿಸಿಕೊಂಡು ಸಾಧನೆ ಕಡೆಗೆ ಗಮನಹರಿಸಬೇಕು. ಸಾಧನೆ ಜೊತೆಗೆ ಪೋಷಕರಿಗೆ ಮತ್ತು ಸಂಸ್ಥೆಗೆ ಕೀರ್ತಿ ತರಬೇಕು ಎಂದರು.

ಎರಡು ದಿನಗಳ ಕಾಲ ನಡೆದ 'ಕಲ್ಚರಾ-23' ಸಾಂಸ್ಕೃತಿಕ ಸಂಭ್ರಮದಲ್ಲಿ 150 ಕಾಲೇಜುಗಳಿಂದ 10,000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ಎಂದು ಸಿ.ಎಂ.ಆರ್.ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಕೆ.ಸಿ.ರಾಮಮೂರ್ತಿ ಮಾಹಿತಿ ನೀಡಿದರು.

ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ. ಜಗನ್ನಾಥ ರೆಡ್ಡಿ, ಟ್ರಸ್ಟಿ ಡಾ.ಕೆ.ಸಿ. ರಾಜು ರೆಡ್ಡಿ, ಪ್ರಾಂಶುಪಾಲ ಡಾ.ಸಂಜಯ್ ಜೈನ್, ಉಪ ಪ್ರಾಂಶುಪಾಲ ಡಾ.ಬಿ.ನರಸಿಂಹ ಮೂರ್ತಿ ಇದ್ದರು.



# ಕಾಯ್ದೆ ವಾಪಸ್‌ಗೆ 'ರೈತಾಗ್ರಹ' 15ರಂದು

ಪ್ರಜಾವಾಣಿ ವಾರ್ತೆ

ಮೈಸೂರು: 'ಬಿಜೆಪಿ- ಆರ್‌ಎಸ್‌ಎಸ್ ಸರ್ಕಾರ ಜಾರಿಗೆ ತಂದಿರುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಮತ್ತು ಜಾನುವಾರು ಹತ್ಯೆ ನಿಷೇಧ ಹಾಗೂ ಸಂರಕ್ಷಣೆ ಕಾಯ್ದೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ಜೂನ್ 15ರಂದು ರಾಜ್ಯ ರೈತ ಸಂಘದಿಂದ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಎದುರು 'ರೈತಾಗ್ರಹ' ಧರಣಿ ನಡೆಸಲಾಗುವುದು' ಎಂದು ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.



ಬಡಗಲಪುರ ನಾಗೇಂದ್ರ

'ಅಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಧರಣಿ ನಡೆಸಿ ಮೂರೂ ಕಾಯ್ದೆಗಳನ್ನು ಮುಂದಿನ ವಿಧಾನಮಂಡಲ ಅಧಿವೇಶದಲ್ಲಿ ವಾಪಸ್ ಪಡೆಯುವಂತೆ ಮತ್ತು ರೈತ ಪರ ನೀತಿಗಳನ್ನು ರೂಪಿಸುವಂತೆ ಹಕ್ಕೊತ್ತಾಯ ಪತ್ರವನ್ನು ಮುಖ್ಯಮಂತ್ರಿಗೆ ಕಳುಹಿಸಲಾಗುವುದು' ಎಂದು ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾಹಿತಿ ನೀಡಿದರು.

'ಕೃಷಿ ಸಂಬಂಧಿತ ಈ ಕಾಯ್ದೆಗಳನ್ನು ಹಿಂದಿನ ಬಿಜೆಪಿ ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗುವಂತೆ ರೂಪಿಸಿದೆ. ಇವು ರೈತ ಕುಲಕ್ಕೆ ಮಾರಕವಾಗಿವೆ' ಎಂದು ದೂರಿದರು.

'ಇವುಗಳನ್ನು ವಾಪಸ್ ಪಡೆಯುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿತ್ತು. ಭರವಸೆಯಂತೆ ನಡೆದುಕೊಳ್ಳಬೇಕು. ರೈತರ ನೆರವಿಗೆ ಬರಬೇಕು' ಎಂದು ಒತ್ತಾಯಿಸಿದರು.

'ಈ ಕಾಯ್ದೆಗಳನ್ನು, ಆಗ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಪ್ರಬಲವಾಗಿ ವಿರೋಧಿಸಿದ್ದರು. ಹೋರಾಟದಲ್ಲೂ ಭಾಗವಹಿಸಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಕೂಡ ದನಿಗೂಡಿಸಿದ್ದರು. ಈಗ ಅವರೇ ಅಧಿಕಾರದಲ್ಲಿರುವುದರಿಂದ ಬದ್ಧತೆ ತೋರಬೇಕು' ಎಂದು ಆಗ್ರಹಿಸಿದರು. ಮುಖಂಡರಾದ ನೇತ್ರಾವತಿ, ಮಂಡಕಳ್ಳಿ ಮಹೇಶ್, ವಿರೂಪಾಕ್ಷಪ್ಪ ಇದ್ದರು.



# ಕಾರು– ಲಾರಿ ಮುಖಾಮುಖಿ ಡಿಕ್ಕಿ; ಮೂವರು ಸಾವು

ಧಾರವಾಡ: ನಗರದ ಹೊರವಲಯದ ಬೈಪಾಸ್ ರಸ್ತೆಯ ಕ್ಯಾರಕೊಪ್ಪ ಸೇತುವೆ ಮಾರ್ಗದಲ್ಲಿ ಭಾನುವಾರ ಬೆಳಗಿನ ಜಾವ ಕಾರು ಮತ್ತು ಲಾರಿ ಮುಖಾಮುಖಿ ಡಿಕ್ಕಿ ಹೊಡೆದು, ಕಾರಿನಲ್ಲಿದ್ದ ಮೂವರು ಸಾವಿಗೀಡಾಗಿದ್ದಾರೆ.

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಹೊಸ ಅಗ್ರಹಾರದ ಪುಟ್ಟೇಗೌಡ (33) ಹಾಗೂ ಹಾಸನ ಜಿಲ್ಲೆಯ ಹೊಳೆನರಸೀಪುರದ ದೀಪಕ್ (27) ಹಾಗೂ ಕ್ಯಾತನಹಳ್ಳಿಯ ಚಂದ್ರೇಗೌಡ (23) ಮೃತರು. 'ಪೀಠೋಪಕರಣ ತರಲು ಮೂವರು ಮುಂಬೈಗೆ ಕಾರಿನಲ್ಲಿ ಸಾಗುತ್ತಿದ್ದಾಗ ಅಪಘಾತ ಸಂಭವಿಸಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



## ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಶ್ರೀ ಚಾರಿಟಬಲ್ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2022–23 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 95 ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 90 ಅಂಕಗಳಿಸಿದ ಕುರುಬ (ಹಾಲು ಮತ) ಸಮಾಜದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸ ಬಹುದು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮ ನಗರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ಜೂನ್ 25 ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಟಿ.ಬಿ. ಬಳಗಾವಿ, ಅಧ್ಯಕ್ಷರು, ಕನಕಶ್ರೀ ಚಾರಿಟಬಲ್ ಟ್ರಸ್ಟ್, ನಂ. 20/31, 6ನೇ ಮುಖ್ಯರಸ್ತೆ, 80 ಅಡಿ ರಸ್ತೆ, ಕೆ.ಎಚ್.ಬಿ. ಕಾಲೊನಿ, 1ನೇ ಹಂತ, ಬಸವೇಶ್ವರನಗರ, ಬೆಂಗಳೂರು- 560079.

ಮಾಹಿತಿಗೆ: 080– 23585684/9483425046ಗೆ ಸಂಪರ್ಕಿಸಬಹುದು.

## ಹಂ.ಪ. ನಾಗರಾಜಯ್ಯಗೆ ‘ಚಿದಾನಂದ ಪ್ರಶಸ್ತಿ’ ಪ್ರದಾನ

# ‘ಕನ್ನಡ ಕೃತಿಗಳು ಭಾಷಾಂತರವಾಗಲಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಮ್ಮ ಮಾತೃ ಭಾಷೆ ಜಾಗತಿಕ ಮಟ್ಟದಲ್ಲಿ ಬೆಳೆಯಲು ಕನ್ನಡದ ಪ್ರಮುಖ ಕೃತಿಗಳು ಇಂಗ್ಲಿಷ್, ಜರ್ಮನ್ ಸೇರಿ ವಿವಿಧ ಭಾಷೆಗಳಿಗೆ ಭಾಷಾಂತರಗೊಳ್ಳಬೇಕು’ ಎಂದು ಸಂಶೋಧಕ ಹಂ.ಪ. ನಾಗರಾಜಯ್ಯ ತಿಳಿಸಿದರು.

ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಚಿದಾನಂದ ಪ್ರಶಸ್ತಿ’ ಸ್ವೀಕರಿಸಿದರು. ₹ 10 ಸಾವಿರ ನಗದು ಇರುವ ಈ ಪ್ರಶಸ್ತಿಯನ್ನು ಸಂಶೋಧಕ ಎಂ. ಚಿದಾನಂದಮೂರ್ತಿ ಹೆಸರಿನಲ್ಲಿ ನೀಡಲಾಗುತ್ತಿದೆ.



ಹಂ.ಪ. ನಾಗರಾಜಯ್ಯ ಅವರಿಗೆ ‘ಚಿದಾನಂದ ಪ್ರಶಸ್ತಿ’ಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಪ್ರದಾನ ಮಾಡಿದರು. ಸುಂಕಂ ಗೋವರ್ಧನ, ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಅಧ್ಯಕ್ಷ ಸಿ.ಯು. ಮಂಜುನಾಥ್ ಹಾಗೂ ಪ್ರೊ.ಎನ್.ಎಸ್. ಸತೀಶ್ ಇದ್ದಾರೆ

‘ಸಾಗರ, ಬೆಟ್ಟಗಳನ್ನು ದಾಟಿ ಕನ್ನಡದ ಕಂಪು ಪಸರಿಸಲು ಕನ್ನಡಿಗರು ಬೇರೆ ಬೇರೆ ಭಾಷೆಗಳಲ್ಲಿ ಪ್ರಾವಿಣ್ಯ ಸಂಪಾದಿಸುವುದು ಮುಖ್ಯ. ಇಂದು ಕರ್ನಾಟಕದಲ್ಲಿರುವಷ್ಟೆ ವಿದೇಶದಲ್ಲಿಯೂ ಕನ್ನಡ ಸಶಕ್ತವಾಗಿದೆ. ಅಲ್ಲಿಗೆ ನಮ್ಮ ಸಾಹಿತ್ಯ ಕೊಂಡೊಯ್ಯಲು ನಾವು ಬೇರೆ ಭಾಷೆಗಳ ಮೇಲೆ ಹಿಡಿತ ಸಾಧಿಸುವುದು ಅಗತ್ಯ. ಈ ನಿಟ್ಟಿನಲ್ಲಿ ನಾನು ಆಂಗ್ಲ ಮಾಧ್ಯಮ ಶಿಕ್ಷಣವನ್ನು ಬೆಂಬಲಿಸುತ್ತೇನೆ. ಆದರೆ, ಆಂಗ್ಲ ಭಾಷೆಯ ಜೊತೆಗೆ ಕನ್ನಡವನ್ನು ಕಾಪಾಡಿಕೊಂಡು ಹೋಗಬೇಕು’ ಎಂದು ಹೇಳಿದರು.

‘ಚಿದಾನಂದ ಮೂರ್ತಿ ಅವರ ಹೆಸರಿನ ಪ್ರಶಸ್ತಿ ಪಡೆಯುತ್ತಿರುವುದು ನನ್ನಲ್ಲಿ ಪುಳಕವನ್ನುಂಟು ಮಾಡಿದೆ. ಅವರು ಕನ್ನಡ ನಾಡಿನ ಮೇರು ವ್ಯಕ್ತಿಯಾಗಿದ್ದು, ಹಲವು ಪ್ರತಿಭೆಗಳನ್ನು ಒಳಗೊಂಡಿರುವ ಸಂಕ್ಷಿಪ್ತ ಬ್ರಹ್ಮಾಂಡ’ ಎಂದರು.

ಅಭಿನಂದನಾ ಭಾಷಣ ಮಾಡಿದ ಪ್ರಾಧ್ಯಾಪಕ ಸುಂಕಂ ಗೋವರ್ಧನ, ‘ಕನ್ನಡದಲ್ಲಿ ಜೈನ ಧರ್ಮದ ಆಳ ಅಗಲವನ್ನು ಹಂ.ಪ. ನಾಗರಾಜಯ್ಯ ಅವರಷ್ಟು ವಿಸ್ತಾರವಾಗಿ ಅರಿತವರು ಮತ್ತು ಬರೆದವರು ಬೇರೆ ಯಾರೂ ಇಲ್ಲ’ ಎಂದು ಪ್ರಶಂಸಿಸಿದರು.

## ಮಾದಕವಸ್ತು– ಭಯೋತ್ಪಾದನೆ: ಬಂಧನ

**ಪೂಂಛ್ (ಪಿಟಿಐ):** ‘ಮಾದಕವಸ್ತು– ಭಯೋತ್ಪಾದನೆ ಪ್ರಕರಣಕ್ಕೆ ಸಂಬಂಧಿಸಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ನಾಲ್ವರನ್ನು ಭಾನುವಾರ ವಶಕ್ಕೆ ತೆಗೆದುಕೊಂಡಿದ್ದಾರೆ. ಅವರಿಂದ ಸುಮಾರು ₹13 ಲಕ್ಷ ವಶಪಡಿಸಿಕೊಳ್ಳಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾದಕವಸ್ತು– ಭಯೋತ್ಪಾದನೆಗೆ ಸಂಬಂಧಿಸಿದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಪೊಲೀಸರು, ಸೇನೆ, ಸಿಆರ್‌ಪಿಎಫ್ ಜಂಟಿ ಕಾರ್ಯಾಚರಣೆ ನಡೆಸುತ್ತಿರುವ ವೇಳೆ ಹಣ ವಶಕ್ಕೆ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ.

ಶಿಕ್ಷಣ ಪುರವಣಿ ಓದಿರಿ

## ನಗರದಲ್ಲಿ ಇಂದು

**ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಜಾಥಾಗೆ ಚಾಲನೆ:** ಸಿದ್ದರಾಮಯ್ಯ, ಸ್ಥಳ: ಮಹಾತ್ಮ ಗಾಂಧಿ ಪ್ರತಿಮೆ, ಎಂ.ಜಿ. ರಸ್ತೆ, ಬೆಳಿಗ್ಗೆ 10.30

**ಕುಂಟ ಕೋಣ ಮೂಕ ಜಾಣ 101ನೇ ಪ್ರಯೋಗದ ಸಂಭ್ರಮದ ಸಮಾರಂಭ:** ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಅಜಯ್ ಸಿಂಗ್, ಬಿ. ಜಯಶ್ರೀ, ಶ್ರೀನಿವಾಸ್ ಜಿ. ಕಪ್ಪಣ್ಣ, ಬಲವಂತರಾವ್ ಪಾಟೀಲ, ಬನಶಂಕರಿ ಅಂಗಡಿ, ಎಲ್.ಬಿ. ಶೇಖ್ ಮಾಸ್ತರ್, ಹುಲಿಕಲ್ ನಟರಾಜ್, ಬಾಣದ ಬಾಲಚಂದ್ರ, ರಾಜೇಂದ್ರ ಕಾರಂತ, ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಆಯೋಜನೆ: ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯ ಸಂಘ, ಜೇವರ್ಗಿ, ಸ್ಥಳ: ಗುಬ್ಬಿ ವೀರಣ್ಣ ರಂಗಮಂದಿರ, ಗಾಂಧಿನಗರ, ಮಧ್ಯಾಹ್ನ 2.30

**‘ಫ್ಲಾರೆನ್ಸ್ ನೈಟಿಂಗಲ್’ ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಯು.ಟಿ. ಖಾದರ್, ದಿನೇಶ್ ಗುಂಡೂರಾವ್, ಶರಣ್ ಪ್ರಕಾಶ್ ಪಾಟೀಲ್, ಉಪಸ್ಥಿತಿ: ಅನಿಲ ಕುಮಾರ್ ಟಿ.ಕೆ., ರಂದೀಪ್ ಡಿ., ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4

**ಪ್ರವಚನ ವಾಹಿನಿ:** ‘ವಿದುರ ನೀತಿ’ ಕುರಿತು ಉಪನ್ಯಾಸ: ಆನಂದ ತೀರ್ಥಾಚಾರ್ ಮಾಳಗಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

**‘ಮೈಸೂರು ಮಲ್ಲಿಗೆ’ ನಾಟಕ ಪ್ರದರ್ಶನ:** ಮೂಲ: ಕೆ.ಎಸ್. ನರಸಿಂಹಸ್ವಾಮಿ, ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಬಿ.ವಿ. ರಾಜಾರಾಂ, ಉಪಸ್ಥಿತಿ: ಟಿ.ಎಸ್. ನಾಗಾಭರಣ, ಆಯೋಜನೆ: ಭಾಗವತರು ನಾಟಕೋತ್ಸವ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7



## ಒಡಿಶಾ: ಹೆಚ್ಚಿದ ಉಷ್ಣಾಂಶ– ಆರೆಂಜ್ ಅಲರ್ಟ್ ಘೋಷಣೆ

**ಭುವನೇಶ್ವರ (ಪಿಟಿಐ):** ಒಡಿಶಾದ ಸುಮಾರು 30 ಸ್ಥಳಗಳಲ್ಲಿ ಭಾನುವಾರ 40 ಡಿಗ್ರಿ ಸೆಲ್ಸಿಯಸ್ ಅಥವಾ ಅದಕ್ಕಿಂತ ಹೆಚ್ಚು ಉಷ್ಣಾಂಶ ದಾಖಲಾಗಿದೆ. ರಾಜ್ಯದಲ್ಲಿ ಬಿಸಿ ಗಾಳಿ ಪರಿಸ್ಥಿತಿ ಎದುರಾಗುವ ಮುನ್ಸೂಚನೆ ಇದ್ದು, ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಆರೆಂಜ್ ಅಲರ್ಟ್ ಘೋಷಿಸಿದೆ.

ರಾಜ್ಯದ ಸಂಬಾಲ್‌ಪುರ, ಸೋನೆಪುರ ಸೇರಿ ಏಳು ಜಿಲ್ಲೆಗಳ ಕನಿಷ್ಠ ಎರಡು ಸ್ಥಳಗಳು ಬಿಸಿ ಗಾಳಿ ಪರಿಸ್ಥಿತಿ ಎದುರಿಸಲಿವೆ ಎಂದು ಐಎಂಡಿ ಎಚ್ಚರಿಕೆ ನೀಡಿದೆ.


















## ಸಫಾರಿಯಲ್ಲಿ ಗಮನ ಸೆಳೆದ ಬಿಳಿ ಜಿಂಕೆ

ಪ್ರಜಾವಾಣಿ ವಾರ್ತೆ

**ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ):** ತಾಲ್ಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಅಂತರಸಂತೆ ವಲಯದ ತಾರಕ ಜಲಾಶಯದ ಹಿನ್ನೀರು ಪ್ರದೇಶದ ರಸೂಲ್ಪೈನ್ ಸಮೀಪ ಬುಧವಾರ ಬೆಳಿಗ್ಗೆ ಸಫಾರಿಯಲ್ಲಿ ಜಿಂಕೆಗಳ ಹಿಂಡಿನ ನಡುವೆ ಬಿಳಿ ಬಣ್ಣದ ಜಿಂಕೆ ಕಾಣಿಸಿಕೊಂಡಿತು. ಮಂಗಳವಾರ ಇದೇ ವಲಯದಲ್ಲಿ ಕಪ್ಪು ಚಿರತೆ ಕಾಣಿಸಿಕೊಂಡಿತ್ತು.

‘ಈ ಜಿಂಕೆ ಮೆಲನಿನ್ (ವರ್ಣದ್ರವ್ಯ) ಹೆಚ್ಚಾಗಿ ಬಿಳಿ ಬಣ್ಣದೊಂದಿಗೆ ಹುಟ್ಟಿದೆ. ಇಂಥ ಪ್ರಾಣಿಗಳು ಕಾಡಿನಲ್ಲಿ ಬದುಕುವುದು ಕಷ್ಟ. ಮಾಂಸಾಹಾರಿ ಪ್ರಾಣಿಗಳಿಗೆ ಬಹಳ ಸುಲಭವಾಗಿ ತುತ್ತಾಗುವ ಸಾಧ್ಯತೆ ಹೆಚ್ಚು’ ಎಂದು ವನ್ಯಜೀವಿ ಛಾಯಾಗ್ರಾಹಕರಾದ ವಿನಯ್ ಮತ್ತು ಉಲ್ಲಾಸ್ ಶ್ಯಾನಭೋಗ್ ಹೇಳಿದರು.

‘ಮೆಲನಿನ್ ಕಡಿಮೆಯಾಗಿ ಕಪ್ಪಾಗಿ ಹುಟ್ಟುವ ಪ್ರಾಣಿಗಳಿಗೆ ಕಾಡಿನಲ್ಲಿ ಬದುಕುವುದು ಸಲೀಸು. ಬೇಟೆಯಾಡುವ ಪ್ರಾಣಿಯಾದರಂತೂ ರಾತ್ರಿ ವೇಳೆ ಬೇಟೆಗೆ ಹೆಚ್ಚು ಅನುಕೂಲವಾಗುತ್ತದೆ’ ಎಂದರು.



ಎಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ವಲಯದ ತಾರಕ ಜಲಾಶಯದ ಹಿನ್ನೀರು ಪ್ರದೇಶದ ರಸೂಲ್ಪೈನ್ ಸಮೀಪ ಜಿಂಕೆ ಗುಂಪಿನಲ್ಲಿ ಬುಧವಾರ ಬೆಳಿಗ್ಗೆ ಸಫಾರಿಯಲ್ಲಿ ಬಿಳಿ ಬಣ್ಣದ ಜಿಂಕೆ ಕಾಣಿಸಿಕೊಂಡಿತು

—ಪ್ರಜಾವಾಣಿ ಚಿತ್ರ: ಸತೀಶ್ ಬಿ ಆರಾಧ್ಯ

## ಅಪಘಾತ: 3 ಸಾವು

**ಚನ್ನಪಟ್ಟಣ:** ತಾಲ್ಲೂಕಿನ ಕೋಲೂರು ಗೇಟ್ ಬಳಿಯ ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಭಾನುವಾರ ಇಂಡಿಕಾ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದರಿಂದ ಚಾಲಕ ಸೇರಿ ಮೂವರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಮೂವರು ಗಂಭೀರವಾಗಿ ಗಾಯಗೊಂಡಿದ್ದು ಸಮೀಪದ ಚಾಮುಂಡೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ತಾಲ್ಲೂಕಿನ ಕೋಡಂಬಳ್ಳಿ ನಿವಾಸಿ ವಿನಯ್ (24), ರಾಮನಗರದ ಮಂಜುನಾಥ ನಗರದ ವಿಜಯ್ (23) ಮದ್ದೂರಿನ ಚಾಲಕ ಮಂಜೇಶ್ (28) ಮೃತರು. ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿ ಗ್ರಾಮದಿಂದ ರಾಮನಗರದ ಕಡೆಗೆ ನಾಲ್ವರು ಸ್ನೇಹಿತರು ಹೋಗುತ್ತಿದ್ದರು. ವೇಗವಾಗಿ ಹೋಗುತ್ತಿದ್ದ ಕಾರು, ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ ಎಂದು ಚನ್ನಪಟ್ಟಣ ಪೊಲೀಸರು ತಿಳಿಸಿದ್ದಾರೆ.

ಡಿಕ್ಕಿ ರಭಸಕ್ಕೆ ಸ್ಥಳದಲ್ಲೇ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ಪಲ್ಟಿಯಾಗಿ 50 ಮೀಟರ್ ದೂರಕ್ಕೆ ಹೋಗಿದ್ದು, ಮುಂಭಾಗ ನಜ್ಜುಗುಜ್ಜಾಗಿದೆ. ಹಿಂಬದಿ ಸೀಟಿನಲ್ಲಿದ್ದ ಇಬ್ಬರಿಗೂ ಗಂಭೀರ ಗಾಯಗಳಾಗಿದ್ದು, ರಸ್ತೆಯಲ್ಲಿ ಪ್ರಜ್ಞಾಹೀನರಾಗಿ ಬಿದ್ದಿದ್ದರು. ಸ್ಥಳೀಯರ ನೆರವಿನಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ತಿಳಿಸಿದ್ದಾರೆ.

### ನಗರದ ಮೂರು ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಇಲಾಖೆ ಪ್ರಯೋಗ

## ಮೊಬೈಲ್‌ನಲ್ಲೇ ಪರೀಕ್ಷಾ ವರದಿ

• ವರುಣ ಹೆಗಡೆ

**ಬೆಂಗಳೂರು:** ಅನಾರೋಗ್ಯ ಸಮಸ್ಯೆಗಳಿಗೆ ನಡೆಸುವ ವಿವಿಧ ಪರೀಕ್ಷೆಗಳ ವರದಿ, ಚಿಕಿತ್ಸೆಯ ವಿವರಗಳನ್ನು ರೋಗಿಗಳು ತಮ್ಮ ಮೊಬೈಲ್ ಫೋನ್‌ಗಳ ಮೂಲಕವೇ ಪಡೆಯುವ ವ್ಯವಸ್ಥೆಯು ನಗರದ ಮೂರು ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ.

ರೋಗಿಗಳು ಸರದಿಯಲ್ಲಿ ಕಾಯುವುದನ್ನು ತಪ್ಪಿಸಲು ಹಾಗೂ ಕಾಗದ ರಹಿತ ವೈದ್ಯಕೀಯ ಸೇವೆಗಳನ್ನು ಒದಗಿಸಲು ಆರೋಗ್ಯ ಇಲಾಖೆಯು ಈ ಯೋಜನೆ ಕೈಗೆತ್ತಿಕೊಂಡಿದೆ. ‘ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್’ನ ಭಾಗ ಇದಾಗಿದ್ದು, ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ ಹಾಗೂ ಸರ್.ಸಿ.ವಿ. ರಾಮನ್ ಆಸ್ಪತ್ರೆಯಲ್ಲಿ ಈ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿ ಮಾಡಲಾಗಿದೆ. ಈಗಾಗಲೇ ವಿಭಾಗವಾರು ಡಿಜಿಟಲೀಕರಣ ಪ್ರಕ್ರಿಯೆ ನಡೆಸಲಾಗುತ್ತಿದೆ. ಈ ಆಸ್ಪತ್ರೆಗಳಲ್ಲಿ ವ್ಯಕ್ತವಾಗುವ ಪ್ರತಿಕ್ರಿಯೆಯನ್ನು ಆಧರಿಸಿ, ರಾಜ್ಯದಾದ್ಯಂತ ಸೇವೆ ವಿಸ್ತರಿಸಲು ಇಲಾಖೆ ಯೋಜನೆ ರೂಪಿಸಿದೆ.

ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಕೆ.ಸಿ.ಜನರಲ್ ಆಸ್ಪತ್ರೆಗೆ ಪ್ರತಿನಿತ್ಯ ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಹೊರರೋಗಿಗಳು ಭೇಟಿ ನೀಡುತ್ತಾರೆ. ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಈ ಸಂಖ್ಯೆ 500ರಿಂದ 600 ಇದೆ. ಅಧಿಕ ಸಂಖ್ಯೆಯಲ್ಲಿ ರಾಜ್ಯದ ವಿವಿಧೆಡೆಯಿಂದ ರೋಗಿಗಳು ಭೇಟಿ ನೀಡುತ್ತಿರುವುದರಿಂದ ಚಿಕಿತ್ಸೆಗೆ ಸರದಿಯಲ್ಲಿ ಹೆಚ್ಚಿನ ಸಮಯ ಕಾಯಬೇಕಾದ ಪರಿಸ್ಥಿತಿಯಿದೆ. ವೈದ್ಯಕೀಯ ಸಿಬ್ಬಂದಿಗೂ ನಿರ್ವಹಣೆ ಸವಾಲಾಗಿದೆ. ನೂತನ ವ್ಯವಸ್ಥೆಯಲ್ಲಿ ರೋಗಿಗಳ ಚಿಕಿತ್ಸಾ ವಿವರವನ್ನು ಡಿಜಿಟಲೀಕರಣ ಗೊಳಿಸುತ್ತಿರುವುದರಿಂದ ಈ ಸಮಸ್ಯೆಗಳಿಗೂ ಪರಿಹಾರ ಸಿಗಲಿದೆ.

**ಖಾಸಗಿ ಕಂಪನಿ ನೆರವು:** ಆಸ್ಪತ್ರೆಗಳಲ್ಲಿನ ವೈದ್ಯಕೀಯ ವ್ಯವಸ್ಥೆಯ ಡಿಜಿಟಲೀಕರಣಕ್ಕೆ ಡ್ರುಕೇರ್ ಮತ್ತು ಏಕಕೇರ್ ಕಂಪನಿಗಳ ನೆರವು ಪಡೆಯಲಾಗುತ್ತಿದೆ. ರೋಗಿಗಳ ಚಿಕಿತ್ಸೆಗೆ ಸಂಬಂಧಿಸಿದ ಮಾಹಿತಿಗಳು ಹಾಗೂ ಪರೀಕ್ಷೆಯ ವರದಿಯನ್ನು ನಿಗದಿತ ಆ್ಯಪ್‌ಗಳು, ವಾಟ್ಸ್‌ಆ್ಯಪ್ ಹಾಗೂ ದೂರವಾಣಿ ಸಂದೇಶದ ಮೂಲಕ ಕಳುಹಿಸಲಾಗುತ್ತದೆ. ಈ ವ್ಯವಸ್ಥೆ ಇಲ್ಲಿನ ಖಾಸಗಿ ಆಸ್ಪತ್ರೆಗಳಿವೆ.

‘ವೈದ್ಯಕೀಯ ದಾಖಲೆಗಳ ಡಿಜೀಟಲೀಕರಣ ಪ್ರಕ್ರಿಯೆ ನಡೆಯುತ್ತಿದೆ. ಪೂರ್ಣಗೊಳ್ಳಲು ಎರಡು ವಾರ ಬೇಕಾಗಬಹುದು. ರೋಗಿಗಳು ‘ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ’ (ಆಭಾ) ಹೊಂದಿದ್ದಲ್ಲಿ ನೋಂದಾಯಿತ ಸಂಖ್ಯೆಯ ಮೂಲಕ ಮೊಬೈಲ್‌ಗಳ ಮೂಲಕವೇ ವರದಿ ನೋಡಬಹುದು. ದೇಶದ ಎಲ್ಲ ಕಡೆ ಚಿಕಿತ್ಸೆ ಪಡೆಯಲು ಇದು ಸಹಕಾರಿಯಾಗಲಿದೆ. ಆರೋಗ್ಯ ಸೇತು ಸೇರಿ ವಿವಿಧ ಆ್ಯಪ್‌ಗಳ ಮೂಲಕ ಈ ಸೇವೆ ಪಡೆದುಕೊಳ್ಳಬಹುದು’ ಎಂದು ಸರ್. ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಧಾಕೃಷ್ಣ ತಿಳಿಸಿದರು.



**ಡಿಜಿಟಲ್ ದಾಖಲಾತಿಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿರುವ ಮೂರು ಆಸ್ಪತ್ರೆಗಳಲ್ಲಿ ನೂತನ ವ್ಯವಸ್ಥೆ ಪರಿಚಯಿಸಲಾಗಿದೆ. ರೋಗಿಗಳಿಗೆ ವೈದ್ಯಕೀಯ ದಾಖಲಾತಿ ಸುಲಭವಾಗಿ ಸಿಗುತ್ತದೆ**

**ಡಿ. ರಂದೀಪ್,** ಆರೋಗ್ಯ ಇಲಾಖೆ ಆಯುಕ್ತ

ಪ್ರಜಾವಾಣಿ ವಿಶೇಷ

### ಎಲ್ಲವೂ ಡಿಜಿಟಲ್ ರೂಪದಲ್ಲಿ ಲಭ್ಯ

‘ರಕ್ತ ಸೇರಿ ವಿವಿಧ ಪರೀಕ್ಷೆಗಳಿಗೆ ಮಾದರಿ ನೀಡಿದ ಬಳಿಕ ರೋಗಿಗಳು ವರದಿಗೆ ಕೆಲ ಗಂಟೆಗಳು ಆಸ್ಪತ್ರೆಯಲ್ಲಿಯೇ ಕಾಯಬೇಕಾಗಿತ್ತು. ನೂತನ ವ್ಯವಸ್ಥೆಯಿಂದ ಆಭಾ ಸಂಖ್ಯೆಯ ಮೂಲಕ ಮೊಬೈಲ್‌ನಲ್ಲಿ ವರದಿ ಪಡೆದುಕೊಳ್ಳಬಹುದು. ವರದಿಯ ಪ್ರತಿ ಇಲ್ಲದೆಯೇ ರೋಗಿಯು ವೈದ್ಯರನ್ನು ಭೇಟಿ ಮಾಡಬಹುದು. ವೈದ್ಯರು ತಮ್ಮ ಕಂಪ್ಯೂಟರ್‌ನಲ್ಲಿ ರೋಗಿಯ ವರದಿಯನ್ನು ಪರಿಶೀಲಿಸಿ, ಚಿಕಿತ್ಸೆ ನೀಡುತ್ತಾರೆ. ಔಷಧಗಳ ವಿವರ, ಚಿಕಿತ್ಸಾ ವರದಿ, ಹೊರರೋಗಿ ಚೀಟಿ ಎಲ್ಲವೂ ಡಿಜಿಟಲ್ ರೂಪದಲ್ಲಿ ದೊರೆಯುತ್ತದೆ’ ಎಂದು ಡಾ. ರಾಧಾಕೃಷ್ಣ ತಿಳಿಸಿದರು.

‘ಈ ವ್ಯವಸ್ಥೆಯಿಂದ ರೋಗಿಯು ಯಾವುದೇ ಆಸ್ಪತ್ರೆಗೆ ತೆರಳಿದರೂ ವೈದ್ಯಕೀಯ ಇತಿಹಾಸ ಪರಿಶೀಲಿಸಿ, ಸುಲಭವಾಗಿ ಚಿಕಿತ್ಸೆ ನೀಡಬಹುದು. ರೋಗಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಸಹ ಈ ವ್ಯವಸ್ಥೆ ಸಹಕಾರಿ ಆಗಲಿದೆ. ಯಾವ ವಯೋಮಾನದವರಿಗೆ ಯಾವೆಲ್ಲ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ ಎಂದು ವಿಶ್ಲೇಷಲು ಸಾಧ್ಯವಾಗುತ್ತದೆ. ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡಬಹುದು. ಎಕ್ಸ್ ರೇ ಫಿಲ್ಮ್ ಸಹ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿ, ರೋಗಿಗಳಿಗೆ ಸುಲಭವಾಗಿ ಸಿಗುವಂತೆ ಮಾಡುವುದೂ ಈ ಯೋಜನೆಯಲ್ಲಿದೆ’ ಎಂದು ಹೇಳಿದರು.

### ಸೇವೆ ಪಡೆಯುವುದು ಹೇಗೆ?

‘ಇ-ಆಸ್ಪತ್ರೆ ವ್ಯವಸ್ಥೆಯಡಿ ಈ ಮೊದಲು ರೋಗಿಗಳ ವೈದ್ಯಕೀಯ ಇತಿಹಾಸವನ್ನು ಡಿಜಿಟಲೀಕರಣ ಮಾಡಲಾಗುತ್ತಿತ್ತು. ಆ ದಾಖಲಾತಿಗಳು ವೈದ್ಯರಿಗೆ ಮಾತ್ರ ಲಭ್ಯವಾಗುತ್ತಿತ್ತು. ನೂತನ ವ್ಯವಸ್ಥೆಯಲ್ಲಿ ರೋಗಿಗಳಿಗೂ ವೈದ್ಯಕೀಯ ದಾಖಲಾತಿ ಲಭ್ಯವಾಗುತ್ತದೆ. ಪರೀಕ್ಷಾ ವರದಿ, ಚಿಕಿತ್ಸಾ ದಾಖಲಾತಿಗಳನ್ನು ಪೋರ್ಟಲ್‌ಗೆ ಅಪ್ಲೋಡ್ ಮಾಡಿದ ಬಳಿಕ ಲಿಂಕ್‌ಗಳನ್ನು ವಾಟ್ಸ್‌ಆ್ಯಪ್, ದೂರವಾಣಿ ಸಂಖ್ಯೆಗೂ ಕಳುಹಿಸುವ ವ್ಯವಸ್ಥೆಯಿದೆ. ಈ ವ್ಯವಸ್ಥೆಗೆ ಒಳಪಡಲು ರೋಗಿಗಳು ಆಧಾರ್ ನಂಬರ್ ನೀಡಿ, ಆಭಾ ಸಂಖ್ಯೆ ಸೃಷ್ಟಿಸಿಕೊಂಡರೆ ವೈದ್ಯಕೀಯ ದಾಖಲಾತಿಗಳನ್ನು ಲಿಂಕ್ ಮಾಡಲಾಗುತ್ತದೆ’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು.

## ‘ಸದನದ ಗೌರವ ಹೆಚ್ಚಿಸಿದ್ದ ಸಿದ್ಧಲಿಂಗಯ್ಯ’

### ಸಿದ್ಧಲಿಂಗಯ್ಯ ಪರಿನಿಬ್ಬಾಣ 2ನೇ ವರ್ಷದ ಸ್ಮರಣಾ ಕಾರ್ಯಕ್ರಮದಲ್ಲಿ ವಿ.ಆರ್. ಸುದರ್ಶನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿದ್ಧಲಿಂಗಯ್ಯ ಅವರು ಯಾವುದೇ ವಿಚಾರ ಇದ್ದರೂ ಅಧ್ಯಯನ ಮಾಡಿ ವಿಧಾನ ಪರಿಷತ್ ಸದನಕ್ಕೆ ಬರುತ್ತಿದ್ದರು. ಅಲ್ಲಿ ಪ್ರಶ್ನೆ ಮಾಡುತ್ತಿದ್ದರು. ಸದನದ ಗೌರವ ಹೆಚ್ಚಿಸಿದ್ದರು ಎಂದು ಕಾಂಗ್ರೆಸ್ ನಾಯಕ ವಿ.ಆರ್. ಸುದರ್ಶನ್ ನೆನಪು ಮಾಡಿಕೊಂಡರು.

ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಬಾಬು ಜಗಜೀವನ ರಾಂ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸಿದ್ಧಲಿಂಗಯ್ಯ ಅವರ ಅಭಿಮಾನಿ ಬಳಗವು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಿದ್ಧಲಿಂಗಯ್ಯ ಪರಿನಿಬ್ಬಾಣ ಎರಡನೇ ವರ್ಷದ ಸ್ಮರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎ.ಕೆ. ಸುಬ್ಬಯ್ಯ, ಎಂ.ಸಿ. ನಾಣಯ್ಯ, ಎಚ್. ನರಸಿಂಹಯ್ಯ ಅವರಂತೆ ಸಿದ್ಧಲಿಂಗಯ್ಯ ಅವರಿಂದಲೂ ಸದನಕ್ಕೆ ಮಹತ್ವ ಬಂತು. ಶಿಕ್ಷಕರ ಸಮಸ್ಯೆಗಿಂತ ಶಿಕ್ಷಣದ ಸಮಸ್ಯೆ ಬಗ್ಗೆ ಧ್ವನಿ ಎತ್ತುತ್ತಿದ್ದರು. ಜನರ ಒಡನಾಟ ಇದ್ದ ಅವರು ಜನರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುತ್ತಿದ್ದರು ಎಂದು ಹೇಳಿದರು.

ಭಾವನೆಗಳನ್ನು ಕೆರಳಿಸುವುದು ಸುಲಭ. ಇದರಿಂದ ಸಂಘರ್ಷಗಳಾಗಬಹುದೇ ಹೊರತು ಜನರ ಬದುಕಿಗೆ ಉಪಯೋಗ ಆಗುವುದಿಲ್ಲ. ಸಿದ್ಧಲಿಂಗಯ್ಯ ಅವರು ಜನಸಾಮಾನ್ಯರ ಬದುಕಿಗಾಗಿ ಹೋರಾಟ ಮಾಡಿದವರು ಎಂದು ಹೇಳಿದರು.

ಸಿದ್ಧಲಿಂಗಯ್ಯ ಅವರ ‘ಅವತಾರ’ಗಳು ಕೃತಿಯನ್ನು ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕಿ ಮಂಗಳಾ ಕುಮಾರಿ ಬಿ.ಎಸ್. ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದ ‘ಅವತಾರಸ್’ ಕೃತಿಯನ್ನು ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಬಿಡುಗಡೆ ಮಾಡಿದರು.

‘ರಾಜ್ಯದಲ್ಲಿ 30 ಸಾವಿರ ಹಳ್ಳಿಗಳಿವೆ. ಕನಿಷ್ಠ 30 ಸಾವಿರ ಗ್ರಾಮ ದೇವತೆಗಳಿವೆ. ಒಂದಕ್ಕೊಂದು ವಿಶಿಷ್ಟವಾದುದು. ಯಾವ ದೇವರನ್ನೂ ಗ್ರಾಮ ದೇವತೆಯನ್ನೂ ಗೇಲಿ ಮಾಡದೇ ಅದನ್ನು ನಂಬುವ ಭಕ್ತರು ಸರಿಯಾದ ರೀತಿಯಲ್ಲಿ ಪೂಜಿಸಲಿ ಎಂಬ ಕಾರಣಕ್ಕೆ ‘ಅವತಾರಗಳು’ ಕೃತಿ ರಚಿಸಿದರು. ಇದು ಈಗಾಗಲೇ 6ನೇ ಮುದ್ರಣ ಕಂಡಿದೆ. ಆದರೆ ಬೇರೆ ಭಾಷೆಗಳಿಗೆ ಹೋಗಿರಲಿಲ್ಲ. ಈಗ ಇಂಗ್ಲಿಷ್‌ಗೆ ಅನುವಾದವಾಗಿರುವುದು ಉತ್ತಮ ಬೆಳವಣಿಗೆ. ಬೇರೆ ಬೇರೆ ಭಾಷೆಗಳಿಗೆ ಹೋಗಬೇಕು’ ಎಂದು ಕಪ್ಪಣ್ಣ ಆಶಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ ಅಧ್ಯಕ್ಷತೆ ವಹಿಸಿದ್ದರು. ರಂಗನಿರ್ದೇಶಕ ಜನಾರ್ದನ (ಜನ್ನಿ), ಕೆಐಎಡಿಬಿ ಮುಖ್ಯ ಎಂಜಿನಿಯರ್ ಸ್ವಾಮಿ ಟಿ.ಆರ್., ಎಸ್‌ಸಿ-ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ. ಶಿವಶಂಕರ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷೆ ಮಾನಸ ಸಿದ್ಧಲಿಂಗಯ್ಯ, ಉಪಾಧ್ಯಕ್ಷೆ ಸಿ. ರಮಾಕುಮಾರಿ, ಅನುವಾದಕಿ ಮಂಗಳಾ ಕುಮಾರಿ ಬಿ.ಎಸ್. ಇದ್ದರು.



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಸಿದ್ಧಲಿಂಗಯ್ಯ ಅವರ ದ್ವಿತೀಯ ವರ್ಷದ ಪರಿನಿಬ್ಬಾಣ ಸ್ಮರಣ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಸಿದ್ಧಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. —ಪ್ರಜಾವಾಣಿ ಚಿತ್ರ

## ಹಾವು ಕಚ್ಚಿ ಪತಿ ಸಾವು, ಪತ್ನಿ ಗಂಭೀರ

**ಬೆಳಗಾವಿ:** ಇಲ್ಲಿನ ವಡಗಾವಿಯ ಅನ್ನಪೂರ್ಣೇಶ್ವರಿ ನಗರದಲ್ಲಿ ಶನಿವಾರ ರಾತ್ರಿ ಮಲಗಿದ್ದ ದಂಪತಿಗೆ ಹಾವು ಕಚ್ಚಿ ಪತಿ ಮೃತಪಟ್ಟಿದ್ದು, ಪತ್ನಿ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾರೆ.

ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಾಣಿಕೊಪ್ಪ ಮೂಲದ ಸಿದ್ದಪ್ಪ ಚಿವಟಗುಂಡಿ (35) ಮೃತರು. ಇವರ ಪತ್ನಿ ನಾಗವ್ವ (28) ಸ್ಥಿತಿ ಚಿಂತಾಜನಕವಾಗಿದೆ. ದಂಪತಿ ಮೂವರು ಮಕ್ಕಳೊಂದಿಗೆ ರಾತ್ರಿ ಊಟ ಮಾಡಿ ಮಲಗಿದ್ದರು. ಹಾವು ಕಚ್ಚಿದ್ದು ಅವರಿಗೆ ಅರಿವಿಗೆ ಬಂದಿಲ್ಲ. ವಿಷವೇರಿದ ಮೇಲೆ ತಂದೆ- ತಾಯಿ ಒದ್ದಾಡುತ್ತಿರುವುದನ್ನು ಕಂಡು ಮಕ್ಕಳು ಎಚ್ಚರಗೊಂಡರು. ಸ್ಥಳೀಯರ ನೆರವಿನಿಂದ ದಂಪತಿಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಸಿದ್ದಪ್ಪ ಮೃತಪಟ್ಟರು.

## ಯುವಕನಿಗೆ ₹26 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

**ಚಿಂತಾಮಣಿ:** ಅರೆಕಾಲಿಕ ಉದ್ಯೋಗದ ಆಮಿಷವೊಡ್ಡುವ ಮೂಲಕ ವ್ಯಕ್ತಿಯೊಬ್ಬರಿಗೆ ₹25.75 ಲಕ್ಷ ವಂಚನೆ ಎಸಗಲಾಗಿದೆ. ಈ ಕುರಿತು ಚಿಕ್ಕಬಳ್ಳಾಪುರದ ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ನಗರದ ಇಡ್ಲಿಪಾಳ್ಯದ ಎಂ.ಮೋಹನ್ ಕುಮಾರ್ ಹಣ ಕಳೆದುಕೊಂಡಿರುವ ಸಂತ್ರಸ್ತ. ‘ಹಣಕಾಸಿನ ವ್ಯವಹಾರಗಳಿಗಾಗಿ ಐಸಿಐಸಿಐ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದು, ಮೇ 28 ರಂದು ನನ್ನ ಮೊಬೈಲ್‌ಗೆ ಅರೆಕಾಲಿಕ ಉದ್ಯೋಗ (ಪಾರ್ಟ್ ಟೈಂ ಜಾಬ್), ಮನೆಯಿಂದಲೇ ಕೆಲಸ (ವರ್ಕ್ ಫ್ರಂ ಹೋಮ್) ಎಂಬ ಸಂದೇಶವು ನನ್ನ ವಾಟ್ಸ್ ಆ್ಯಪ್‌ಗೆ ಬಂದಿತ್ತು. ನಾನು ಆ ಸಂಖ್ಯೆಗೆ ಸಂಪರ್ಕಿಸಿದಾಗ, ನನ್ನ ಮೊಬೈಲ್ ಸಂಖ್ಯೆಯನ್ನು ಟೆಲಿಗ್ರಾಂ ಗ್ರೂಪ್‌ನಲ್ಲಿ ಸೇರಿಸಿಕೊಂಡರು. ಜತೆಗೆ ನನ್ನ ಕೆಲಸದ ಬಗ್ಗೆ ಆಲಿಶಾ ಎಂಬುವರು ಮಾಹಿತಿ ನೀಡಿದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಆರಂಭದಲ್ಲಿ 1ನೇ ಟಾಸ್ಕ್‌ನಲ್ಲಿ ಮೂರು ಯುಟ್ಯೂಬ್ ಚಾನೆಲ್‌ಗಳನ್ನು ಸಬ್ ಸ್ಕ್ರೈಬ್ ಮಾಡಲು ತಿಳಿಸಿ, ಒಂದು ಟಾಸ್ಕ್‌ಗೆ ₹50 ನಂತೆ, ಕೆಲವು ಟಾಸ್ಕ್ ಪೂರ್ತಿಗೊಳಿಸಿದ ನನ್ನ ಖಾತೆಗೆ ₹235 ಜಮೆ ಮಾಡಿದರು. 2ನೇ ಟಾಸ್ಕ್‌ನಲ್ಲಿ ₹1,000 ಕಳುಹಿಸಿದೆ. ಆಗ ನನ್ನ ಖಾತೆಗೆ ₹1,410 ಜಮೆ ಮಾಡಿದರು. ಈ ಮೂಲಕ ಆರಂಭದಲ್ಲಿ ಅಸಲು ಮತ್ತು ಕಮಿಷನ್ ಕೊಟ್ಟು ಆಮಿಷವೊಡ್ಡಿದ್ದರು. ಇದನ್ನು ನಂಬಿದ ನಾನು ₹60,000 ಹೂಡಿಕೆ ಮಾಡಿದ್ದೆ. ಆಗ ನನ್ನ ಖಾತೆಯಲ್ಲಿ ಒಳ್ಳೆಯ ಬ್ಯಾಲೆನ್ಸ್ ಬಂದಿರುವಂತೆ ತೋರಿಸುತ್ತಿತ್ತು ಎಂದು ವಿವರಿಸಿದ್ದಾರೆ’.

‘ಆದರೆ ಖಾತೆಯಿಂದ ಹಣ ತೆಗೆಯಲು ಅವಕಾಶವಿರಲಿಲ್ಲ. ಗ್ರೂಪ್‌ನಲ್ಲಿ ಚಾಟ್ ಮೂಲಕ ವಿಚಾರಿಸಿದಾಗ ಒಂದೇ ಬಾರಿಗೆ ಬರುತ್ತದೆ ಎಂಬ ಉತ್ತರ ಬಂದಿತ್ತು. ಇದನ್ನು ನಂಬಿ 9 ಸಲ ಒಟ್ಟಾರೆ ₹25.73 ಲಕ್ಷ ಹೂಡಿಕೆ ಮಾಡಿದ್ದೆ. ಆದರೆ, ಕೊನೆಗೆ ಅಸಲು ಮತ್ತು ಕಮಿಷನ್ ನೀಡದೆ ವಂಚಿಸಿದ್ದಾರೆ. ಆರೋಪಿಗಳನ್ನು ಪತ್ತೆ ಮಾಡಿ, ನನ್ನ ಹಣ ವಾಪಸ್ ಕೊಡಿಸಬೇಕು’ ಎಂದು ಪೊಲೀಸರಿಗೆ ಕೋರಿದ್ದಾರೆ.

### ಚಿತ್ರಾವಳಿ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸದಾಶಿವನಗರದ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ್ದ ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಖರ್ಗೆ ಅವರೊಂದಿಗೆ ಮಾತುಕತೆ ನಡೆಸಿದರು




ಸಮಾಜಮುಖಿ ವಾರ್ಷಿಕ ಕಥಾ ಸಂಕಲನ ಪುರಸ್ಕಾರವನ್ನು ಕಥೆಗಾರರಾದ ದೀಪಾ ಹಿರೇಗುತ್ತಿ, ಶ್ರೀಹರ್ಷ ಸಾಲಿಮಠ, ಡಾ.ಪ್ರೇಮಲತಾ ಬಿ., ಎಂ.ನಾಗರಾಜ ಶೆಟ್ಟಿ, ದೀಪ್ತಿ ಭದ್ರಾವತಿ ಅವರಿಗೆ ನೀಡಿ ಗೌರವಿಸಲಾಯಿತು. ಸಮಾಜಮುಖಿ ಸಂಪಾದಕ ಚಂದ್ರಕಾಂತ ವಡ್ಡು, ಕವಿ ಎಚ್.ಎಸ್. ಶಿವಪ್ರಕಾಶ್, ಸಾಮಾಜಿಕ ಮಾಧ್ಯಮ ತಜ್ಞೆ ಚೈತ್ರಿಕಾ ನಾಯ್ಕ್ ಹರ್ಗಿ, ನಾಟಕಕಾರ ಜಯರಾಂ ರಾಯಪುರ ಇದ್ದರು













# ಮಹಿಳೆಯರಿಗೆ ಖುಷಿ ತಂದ 'ಶಕ್ತಿ'

## ಬಿಎಂಟಿಸಿ ಬಸ್‌ಗಳು ಭರ್ತಿ • ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರು ಕಡಿಮೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಉಚಿತ ಪ್ರಯಾಣ' ಯೋಜನೆಗೆ ಚಾಲನೆ ಸಿಗುತ್ತಿದ್ದಂತೆ ಮಹಿಳಾ ಪ್ರಯಾಣಿಕರಿಗೆ ಹೂವು ನೀಡಿ ಸ್ವಾಗತಿಸಿದ ಸಾರಿಗೆ ಸಿಬ್ಬಂದಿ. ಸಾಲು ಸಾಲಾಗಿ ಬಂದ ಬಸ್‌ಗಳನ್ನು ಏರಿ ಸೀಟಿನಲ್ಲಿ ಕುಳಿತು ಉಚಿತ ಟಿಕೆಟ್ ಪಡೆದ ಮಹಿಳೆಯರು. ಕೆಲ ಕ್ಷಣಗಳಲ್ಲಿ ಭರ್ತಿಯಾದ ಬಸ್‌ಗಳು. ಹಣವಿಲ್ಲದೇ ದೊರೆತ ಟಿಕೆಟ್ ನೋಡಿ ಖುಷಿಪಟ್ಟು ನಗು ಬೀರಿದ ಹೆಂಗಳೆಯರು.

ನಗರದ ಮೆಜೆಸ್ಟಿಕ್‌ನಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಭಾನುವಾರ ಕಂಡುಬಂದ ದೃಶ್ಯಗಳಿವು. ಉದ್ಯೋಗ, ಮಾರುಕಟ್ಟೆ, ಸಂಬಂಧಿಕರ ಭೇಟಿ ಹಾಗೂ ಇತರೆಡೆ ಹೊರಟಿದ್ದ ಮಹಿಳೆಯರು ಶನಿವಾರ ಮಧ್ಯಾಹ್ನದಿಂದ ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಿದರು.

'ಶಕ್ತಿ' ಯೋಜನೆ ಚಾಲನೆ ಕಾರ್ಯಕ್ರಮವನ್ನು ಸ್ಮರಣೀಯವಾಗಿಸಲು ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ವಿಶೇಷ ತಯಾರಿ ಮಾಡಿಕೊಳ್ಳಲಾಗಿತ್ತು. ಬಸ್ ನಿಲ್ಲುವ ಪ್ಲಾಟ್ ಫಾರ್ಮ್‌ಗಳನ್ನು ಮಾವಿನ ತೋರಣ ಹಾಗೂ ಹೂವುಗಳಿಂದ ಅಲಂಕರಿಸಲಾಗಿತ್ತು. ಕೆಲ ಮಹಿಳೆಯರು, ಯೋಜನೆಗೆ ಚಾಲನೆ ದೊರೆತ ನಂತರ ಬಸ್ ಏರಲು ನಿಲ್ದಾಣಕ್ಕೆ ಬಂದಿದ್ದರು. ಅವರೆಲ್ಲರನ್ನೂ ಸಿಬ್ಬಂದಿ ಸ್ವಾಗತಿಸಿದರು. ನಿಲ್ದಾಣದಲ್ಲಿದ್ದ ಬಸ್ಸಿನ ಮಾದರಿ ಜನರ ಗಮನಸೆಳೆಯಿತು.

**ಬಿಎಂಟಿಸಿ ಬಸ್‌ಗಳಲ್ಲಿ ಸೀಟು ಭರ್ತಿ:** ಬೆಂಗಳೂರು ನಗರದೊಳಗೆ ಸಂಚರಿಸುವ ಬಿಎಂಟಿಸಿ ಬಸ್‌ಗಳಲ್ಲಿ ಮಹಿಳಾ ಸೀಟುಗಳು ಭರ್ತಿಯಾಗಿದ್ದವು. ಹಲವು ಬಸ್‌ಗಳಲ್ಲಿ ಮಹಿಳೆಯರು ನಿಂತುಕೊಂಡು ಸಂಚರಿಸಿದ ದೃಶ್ಯಗಳು ಕಂಡುಬಂದವು.

ಭಾನುವಾರ ರಜೆ ದಿನವಾಗಿದ್ದರಿಂದ ಮಾರುಕಟ್ಟೆ, ಸಂಬಂಧಿಕರ ಭೇಟಿಗೆಂದು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ನಿಲ್ದಾಣಕ್ಕೆ ಬಂದಿದ್ದರು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಮಹಿಳೆಯರ ಸಂಖ್ಯೆ ಕಡಿಮೆ ಇತ್ತು. ಮಧ್ಯಾಹ್ನದ ನಂತರ ಸಂಖ್ಯೆ ಹೆಚ್ಚಾಯಿತು.

ಎಲೆಕ್ಟ್ರಾನಿಕ್ ಸಿಟಿ, ಚಂದಾಪುರ, ಅತ್ತಿಬೆಲೆ, ಬನಶಂಕರಿ, ಬಸವನಗುಡಿ, ಪೀಣ್ಯ, ಯಶವಂತಪುರ, ಜೆ.ಪಿ.ನಗರ, ಸರ್ಜಾಪುರ, ಕುಮಾರಸ್ವಾಮಿ ಲೇಔಟ್, ಜರಗನಹಳ್ಳಿ ಲೇಔಟ್, ಬಿಟಿಎಂ ಲೇಔಟ್, ಹೊಸಕೆರೆಹಳ್ಳಿ, ಚನ್ನಮ್ಮಕೆರೆ ಅಚ್ಚುಕಟ್ಟು, ಸುಮನಹಳ್ಳಿ, ನಾಗರಬಾವಿ ಹಾಗೂ ಇತರೆ ಪ್ರದೇಶಗಳ ಬಸ್‌ಗಳಲ್ಲಿ ಮಹಿಳಾ ಆಸನಗಳು ಭರ್ತಿಯಾಗಿದ್ದವು.

'ಶಕ್ತಿ ಯೋಜನೆ' ಸ್ಟಿಕರ್ ಅಂಟಿಸುವ ಬಸ್‌ಗಳಲ್ಲಿ ಮಾತ್ರ ಉಚಿತ ಪ್ರಯಾಣವೆಂದು ಹೇಳಲಾಗಿತ್ತು. ಆದರೆ, ಎಲ್ಲ ಬಸ್‌ಗಳಿಗೆ ಸ್ಟಿಕರ್ ಅಂಟಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, ಸ್ಟಿಕರ್ ಇಲ್ಲದಿದ್ದರೂ ಎಲ್ಲ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದೆಂದು ಸಿಬ್ಬಂದಿ ಹೇಳಿದರು. ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ಸಿಬ್ಬಂದಿ ವ್ಯವಸ್ಥೆ ಮಾಡಿದ್ದರು. ಹೀಗಾಗಿ, ಮಹಿಳೆಯರ ಉಚಿತ ಪ್ರಯಾಣ ಸುಖಕರವಾಗಿ ಸಾಗಿತು.

ಬಸ್‌ಗಳು ಸಾಗುತ್ತಿದ್ದ ಮಾರ್ಗದಲ್ಲಿದ್ದ ತಂಗುದಾಣಗಳಲ್ಲೂ ಹೆಚ್ಚುಮಹಿಳೆಯರು ನಿಂತಿದ್ದರು. ಅವರೆಲ್ಲರೂ ಬಸ್ ಏರಿ ಉಚಿತವಾಗಿ ಪ್ರಯಾಣಿಸಿದರು. ಬಸ್ ಹತ್ತಿದ್ದ ಸ್ಥಳದಿಂದ ನಿಗದಿತ ಸ್ಥಳಕ್ಕೆ ಟಿಕೆಟ್ ಪಡೆದುಕೊಂಡರು.

**ಕೆಎಸ್‌ಆರ್‌ಟಿಸಿಯಲ್ಲಿ ಕಡಿಮೆ ಮಹಿಳೆಯರು:** ಶಿವಮೊಗ್ಗ, ಹಾಸನ, ತುಮಕೂರು, ದಾವಣಗೆರೆ ಹಾಗೂ ಹೊರ ಜಿಲ್ಲೆಗಳ ಬಸ್‌ಗಳು ಸಾಲಾಗಿ ನಿಲ್ದಾಣದಲ್ಲಿ ನಿಂತುಕೊಂಡಿದ್ದವು. ಆದರೆ, ಮಹಿಳಾ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಕೆಲವರಷ್ಟೇ ಉಚಿತ ಟಿಕೆಟ್ ಪಡೆದು ಪ್ರಯಾಣಿಸಿದರು.

'ದೂರದ ಊರುಗಳಿಗೆ ಪ್ರಯಾಣಿಸುವವರು ಹೆಚ್ಚಾಗಿ ರಾತ್ರಿ ಸಮಯದಲ್ಲಿ ನಿಲ್ದಾಣಕ್ಕೆ ಬರುತ್ತಾರೆ. ಬೆಳಿಗ್ಗೆ ಹಾಗೂ ಮಧ್ಯಾಹ್ನ ಪ್ರಯಾಣಿಕರ ಸಂಖ್ಯೆ ಕಡಿಮೆ ಇರುತ್ತದೆ' ಎಂದು ನಿಲ್ದಾಣದ ಸಿಬ್ಬಂದಿ ಹೇಳಿದರು.

**ಖಾಸಗಿ ಬಸ್‌ಗಳಲ್ಲೂ ಇಳಿಮುಖ:** ನಗರದಿಂದ ಹೊರ ಜಿಲ್ಲೆಗಳಿಗೆ ಹೋಗುವ ಖಾಸಗಿ ಬಸ್‌ಗಳಲ್ಲಿಯೂ ಪ್ರಯಾಣಿಕರ ಸಂಖ್ಯೆ ಇಳಿಮುಖವಾಗಿದೆ. ಶನಿವಾರ ಮಧ್ಯಾಹ್ನದಿಂದ ಖಾಸಗಿ ಬಸ್‌ಗಳು ಖಾಲಿ ಓಡಾಡಿದವು.

ಕಲಾಸಿಪಾಳ್ಯದಿಂದ ಹೊಸಕೋಟೆ, ಕೆ.ಆರ್.ಪುರ, ರಾಮನಗರ, ಕನಕಪುರ, ಮಾಗಡಿ ಸೇರಿದಂತೆ ಹಲವೆಡೆ ಖಾಸಗಿ ಬಸ್‌ಗಳು ಸಂಚರಿಸುತ್ತವೆ. ಶನಿವಾರ ಮಧ್ಯಾಹ್ನ ಹಾಗೂ ಸಂಜೆ, ಒಂದೊಂದು ಬಸ್‌ನಲ್ಲಿ ಪ್ರಯಾಣಿಕರ ಸಂಖ್ಯೆ 10 ದಾಟಲಿಲ್ಲ.

'ಕೆಲಸ ಹಾಗೂ ಮಾರುಕಟ್ಟೆಗೆಂದು ಮಹಿಳೆಯರು ಬಸ್‌ನಲ್ಲಿ ಬರುತ್ತಿದ್ದರು. ವಾಪಸು ನಮ್ಮ ಬಸ್‌ನಲ್ಲಿ ಊರಿಗೆ ಹೋಗುತ್ತಿದ್ದರು. ಆದರೆ, ಉಚಿತ ಪ್ರಯಾಣದ ಕಾರಣಕ್ಕೆ ಸಾರಿಗೆ ಬಸ್‌ಗಳಿಗೆ ಮಹಿಳೆಯರು ಹೋಗಿದ್ದಾರೆ' ಎಂದು ಖಾಸಗಿ ಬಸ್ ಸಿಬ್ಬಂದಿ ಹೇಳಿದರು.

**ಗುರುತಿನ ಚೀಟಿ ಇಲ್ಲದಿದ್ದಕ್ಕೆ ಹಣ:** ಗುರುತಿನ ಚೀಟಿ ಇರದ ಕೆಲ ಮಹಿಳೆಯರು ಬಿಎಂಟಿಸಿ ಬಸ್ ಏರಿದ್ದರು. ಗುರುತಿನ ಚೀಟಿ ಇಲ್ಲವೆಂಬ ಕಾರಣಕ್ಕೆ ಉಚಿತ ಟಿಕೆಟ್ ನೀಡಲು ನಿರಾಕರಿಸಿದ ಚಾಲಕ, ಹಣ ನೀಡುವಂತೆ ಕೋರಿದರು. ಬಳಿಕ, ಮಹಿಳೆಯರು ಹಣ ನೀಡಿ ಟಿಕೆಟ್ ಪಡೆದು ಪ್ರಯಾಣಿಸಿದರು.



ಉಚಿತ ಪ್ರಯಾಣದ 'ಶಕ್ತಿ' ಯೋಜನೆಗೆ ಭಾನುವಾರ ಚಾಲನೆ ದೊರಕಿದ್ದು, ಮಹಿಳಾ ಪ್ರಯಾಣಿಕರು ಸಂಭ್ರಮದಿಂದ ಹೂವನ್ನು ಪಡೆದುಕೊಂಡು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ಉಚಿತ ಪ್ರಯಾಣ ಬೆಳೆಸಿದರು
– ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

### ಟಿಕೆಟ್ ಟಿಕೆಟ್, ಫ್ರಿ ಟಿಕೆಟ್...

ಬಸ್ಸಿನೊಳಗೆ ಕಿಕ್ಕಿರಿದು ಸೇರಿದ್ದ ಪ್ರಯಾಣಿಕರ ನಡುವೆಯೇ ಸಾಗಿದ ನಿರ್ವಾಹಕ, ಮಹಿಳೆಯರ ಗುರುತಿನ ಚೀಟಿಗಳನ್ನು ಪರಿಶೀಲಿಸಿ ಉಚಿತ ಟಿಕೆಟ್ ವಿತರಿಸಿದರು. 'ಟಿಕೆಟ್ ಟಿಕೆಟ್ ಫ್ರಿ ಟಿಕೆಟ್... ಐ.ಡಿ ತೋರಿಸಿ' ಎನ್ನುತ್ತಲೇ ನಿರ್ವಾಹಕ ಮುಂದೆ ಸಾಗಿದರು. ಬಸ್ ನಿಲ್ದಾಣದಿಂದ ಹೊರಡುತ್ತಿದ್ದಂತೆ ಮಹಿಳೆಯರ ಮುಖದಲ್ಲಿ ಖುಷಿ ಇತ್ತು. ಕೆಲವರಂತೂ ಸಂಬಂಧಿಕರಿಗೆ ಕರೆ ಮಾಡಿ, ಉಚಿತ ಟಿಕೆಟ್ ಪಡೆದ ಸಂಭ್ರಮ ಹಂಚಿಕೊಂಡರು. ಕೆಲವರು, ಉಚಿತ ಟಿಕೆಟ್ ಜೊತೆ ತಮ್ಮ ಸೆಲ್ಫಿ ಕ್ಲಿಕ್ಕಿಸಿಕೊಂಡರು.

'ಮಹಿಳೆಯರ ಉಚಿತ ಟಿಕೆಟ್' ಆಯ್ಕೆಯನ್ನು ಸೇರಿಸುವುದಕ್ಕಾಗಿ ಟಿಕೆಟ್ ಉಪಕರಣಗಳನ್ನು ತಾಂತ್ರಿಕ ವಿಭಾಗದವರಿಗೆ ನೀಡಲಾಗಿತ್ತು. ಯೋಜನೆಗೆ ಚಾಲನೆ ದೊರೆಯುತ್ತಿದ್ದಂತೆ ಆರಂಭದಲ್ಲಿ, ಹಳೇ ಮಾದರಿ ಟಿಕೆಟ್‌ಗಳನ್ನು ವಿತರಿಸಲಾಯಿತು. ಮಧ್ಯಾಹ್ನ 3 ಗಂಟೆಯ ನಂತರ, ಹಲವು ನಿರ್ವಾಹಕರಿಗೆ ಟಿಕೆಟ್ ಉಪಕರಣಗಳನ್ನು ನೀಡಲಾಯಿತು. ಬಳಿಕ, ಉಪಕರಣದಿಂದಲೇ ಟಿಕೆಟ್ ವಿತರಣೆ ಆರಂಭವಾಯಿತು.

### 'ಮುಖ್ಯಮಂತ್ರಿಗೆ ಸಿಹಿ ತಿನ್ನಿಸಿ ಮಹಿಳೆ'

ಬಿಎಂಟಿಸಿ ಬಸ್ಸಿನಲ್ಲಿ ವಿಧಾನಸೌಧದಿಂದ ಮೆಜೆಸ್ಟಿಕ್‌ಗೆ ಬಂದಿಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಎಸ್‌ಆರ್‌ಟಿಸಿ ನಿಲ್ದಾಣದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಧರ್ಮಸ್ಥಳಕ್ಕೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್ ಏರಿದ್ದ ಸಿದ್ದರಾಮಯ್ಯ, ಮಹಿಳೆಯೊಬ್ಬರಿಗೆ ಉಚಿತ ಟಿಕೆಟ್ ವಿತರಿಸಿ ಪ್ರಯಾಣ ಸುಖಕರವಾಗಿರಲೆಂದು ಹಾರೈಸಿದರು.

ಬಸ್ಸಿನಲ್ಲಿದ್ದ ಮಹಿಳೆಯೊಬ್ಬರು, 'ಉಚಿತ ಪ್ರಯಾಣ ಯೋಜನೆ ರೂಪಿಸಿ ಮಹಿಳೆಯರಿಗೆ ಅನುಕೂಲ ಮಾಡಿದ್ದೀರಾ. ಇದೊಂದು ಮಹಿಳೆಯರ ಸಂಭ್ರಮದ ದಿನ' ಎಂದು ಸಿದ್ದರಾಮಯ್ಯ ಅವರಿಗೆ ಸಿಹಿ ತಿನ್ನಿಸಿ ಕೃತಜ್ಞತೆ ಸಲ್ಲಿಸಿದರು.

### ಎ.ಸಿ ಬಸ್ ಸೀಟುಗಳು ಖಾಲಿ



ಕಲಾಸಿಪಾಳ್ಯದ ಖಾಸಗಿ ಬಸ್‌ನಲ್ಲಿ ಪ್ರಯಾಣಿಕರಿಲ್ಲದೇ ಬಿಕೋ ಎನ್ನುತ್ತಿರುವುದು.

ಬಿಎಂಟಿಸಿ ವಾಯು ವಜ್ರ ಹಾಗೂ ಎಲೆಕ್ಟ್ರಿಕ್ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶವಿರಲಿಲ್ಲ. ಹೀಗಾಗಿ, ಈ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು.

'ನಿತ್ಯವೂ 5ರಿಂದ 15 ಮಹಿಳೆಯರು ಬಸ್‌ನಲ್ಲಿ ಇರುತ್ತಿದ್ದರು. ಇವತ್ತು ಒಬ್ಬರೇ ಇದ್ದಾರೆ. ಉಚಿತವೆಂಬ ಕಾರಣಕ್ಕೆ ಬೇರೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ' ಎಂದು ವಾಯುವಜ್ರ ನಿರ್ವಾಹಕ ಹೇಳಿದರು.

### ಸಚಿವ ರಾಜಣ್ಣ ಕಣ್ಣಿಗೆ ಕಿಡಿ

**ಕುಣಿಗಲ್:** ಪಟ್ಟಣದ ಹುಚ್ಚಮಾಸ್ತಿಗೌಡ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾನುವಾರ ಹಚ್ಚಿದ ಪಟಾಕಿಯ ಕಿಡಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಬಲಗಣ್ಣಿನ ಬಳಿ ತಾಗಿ ಗಾಯವಾಗಿದೆ. ಕೂಡಲೇ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಹಾಸನ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ರಾಜಣ್ಣ ಅವರು ಶಕ್ತಿ ಯೋಜನೆಗೆ ಚಾಲನೆ ನೀಡಲು ತೆರಳುತ್ತಿದ್ದಾಗ ಪಟ್ಟಣದ ಹುಚ್ಚಮಾಸ್ತಿಗೌಡ ವೃತ್ತದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಅಭಿಮಾನಿಗಳು ತಡೆದು ನಿಲ್ಲಿಸಿ, ಅಭಿನಂದನೆ ಸಲ್ಲಿಸುವ ವೇಳೆ ಈ ಘಟನೆ ನಡೆದಿದೆ.

# ಶಕ್ತಿ ಯೋಜನೆ: ಮಹಿಳೆಯರ ಅಭಿಪ್ರಾಯಗಳು

### 'ಜವಾಬ್ದಾರಿಯಿಂದ ಮುನ್ನಡೆಯಬೇಕು'



ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಯುವಂತಾಗಿದೆ. ಮಹಿಳೆಯರು ಅಬಲೆಯರಲ್ಲ, ಸಬಲೆಯರು ಎನ್ನುವುದನ್ನು ಜಗತ್ತಿಗೆ ತೋರಿಸುವ ಅವಕಾಶ ಸಿಕ್ಕಂತಾಗಿದೆ. ಈ ಸೌಲಭ್ಯವನ್ನು ಸದುಪಯೋಗ ಪಡೆದುಕೊಂಡು ಜವಾಬ್ದಾರಿಯಿಂದ ಮುನ್ನಡೆಯಬೇಕು.

**ಕಾರುಣ್ಯ ಸುರೇಶ್,** ಹೆಬ್ಬಾಳ

### ಮಹಿಳೆಯರಿಗೆ ವರದಾನವಾದ 'ಶಕ್ತಿ'



ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಬಹಳ ಅನುಕೂಲವಾಗಲಿದೆ. ಇದರಿಂದ ದುಡಿಯುವ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಾಧ್ಯ. ಹಳ್ಳಿಗಳಿಂದ ನಗರಕ್ಕೆ ಸಂತೆ ಹಾಗೂ ವ್ಯಾಪಾರಕ್ಕಾಗಿ ಪ್ರತಿದಿನ ಸಂಚರಿಸುವ ಮಹಿಳೆಯರಿಗೆ ಈ ಯೋಜನೆಯು ವರದಾನವಾಗಿದೆ. ವಿದ್ಯಾರ್ಥಿನಿಯರಿಗೆ ಬಸ್‌ಪಾಸ್ ಕಿರಿಕಿರಿ ತಪ್ಪಿದಂತಾಗಿದೆ.


**ಹೇಮಾ ನಾರಾಯಣ್ ರಾಜು,** ವಿದ್ಯಾರ್ಥಿನಿ

### 'ಆರ್ಥಿಕ ನೆರವು ನೀಡುವ ಸೌಲಭ್ಯ'



ಬಡತನ, ನಿರುದ್ಯೋಗ, ಬೆಲೆ ಏರಿಕೆಯಿಂದ ತತ್ತರಿಸಿರುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ಅವಶ್ಯಕ. ಬಡ ಮಹಿಳಾ ಕೂಲಿ–ಕಾರ್ಮಿಕರಿಗೆ, ಅಸಂಘಟಿತ ಮಹಿಳಾ ಕಾರ್ಮಿಕರಿಗೆ, ವಿದ್ಯಾರ್ಥಿನಿಯರಿಗೆ, ಆರ್ಥಿಕ ಭದ್ರತೆ ಇಲ್ಲದ ಎಲ್ಲಾ ಸ್ತರದ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಸೌಲಭ್ಯವಾಗಿದೆ.

**ನಿರ್ಮಲ ಎಚ್.ಎಲ್.,** ಬೆಂಗಳೂರು



ಈ ಸೌಲಭ್ಯದಿಂದ ಅನೇಕ ಮಹಿಳೆಯರು ಮನೆಯಿಂದ ಹೊರಬಂದು ಉದ್ಯೋಗ ಮಾಡಬಹುದು.

**ಅನುಪಮಾ ಮೂರ್ತಿ ಕೆ. ಆರ್.,** ಐ.ಟಿ ಉದ್ಯೋಗಿ, ಬೆಂಗಳೂರು

### 'ಉದ್ಯೋಗದ ಕನಸು ನನಸು'



ಶಕ್ತಿ ಯೋಜನೆಯಿಂದ ಸಾವಿರಾರು ಮಹಿಳೆಯರ ಉದ್ಯೋಗದ ಕನಸು ನನಸಾಗಲಿದೆ. ಕಡಿಮೆ ಸಂಬಳವೆಂದು ಉದ್ಯೋಗದ ಆಸೆಯನ್ನು ಅದುಮಿಟ್ಟು ಅಡುಗೆಮನೆಯಲ್ಲಿ ಬೇಯುತ್ತಿದ್ದ ಬಹಳಷ್ಟು ಹೆಣ್ಣು ಮಕ್ಕಳು ಈಗ ಕೆಲಸಕ್ಕೆ ಸೇರಬಹುದು. ಹಾಗೆಯೇ, ಹೊರ ಜಗತ್ತಿನಲ್ಲಿ ಆರಾಮವಾಗಿ ಸಂಚರಿಸಿಬಹುದು. ಇದರಿಂದಾಗಿ, ಮಹಿಳೆಯರಿಗೆ ಸಾರ್ವಜನಿಕ ವಲಯ ಮತ್ತಷ್ಟು ಸುರಕ್ಷಿತವಾಗಲಿದೆ.

**ವೀಣಾದೇವಿ ಆರ್. ಎಸ್.,** ಬೆಂಗಳೂರು

### ಸ್ವತಂತ್ರವಾಗಿ ಜೀವಿಸಲು ಬುನಾದಿ

ರಾಜ್ಯ ಸರ್ಕಾರ, ಮಹಿಳೆಯರಿಗೆ ಉಚಿತ ಪ್ರಯಾಣ ಸೇವೆ ಕಲ್ಪಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ಸ್ತ್ರೀ ಸಬಲೀಕರಣ ಹಾಗೂ ಸ್ವತಂತ್ರವಾಗಿ ತಮ್ಮ ಜೀವನ ನಡೆಸಲು ಬಯಸುವ ಮಹಿಳೆಯರಿಗೆ ಇದು ಬುನಾದಿ.

### 'ಮಹಿಳೆಯರ ಕನಸಿಗೆ ರೆಕ್ಕೆ ನೀಡಿದೆ ಶಕ್ತಿ'



ಉಚಿತ ಬಸ್ ಸೇವೆ ಮಹಿಳಾ ಸಬಲೀಕರಣಕ್ಕೆ ಒಂದು ದಿಟ್ಟ ಹೆಜ್ಜೆ ಎಂದರೆ ತಪ್ಪಾಗಲಾರದು. ಇದರಿಂದ, ಮಹಿಳೆಯರು ಕೇವಲ ನಾಲ್ಕು ಗೋಡೆಗಳ ಮಧ್ಯ ಗಂಡ ಮತ್ತು ಕುಟುಂಬಕ್ಕೆ ಸೀಮಿತಳಲ್ಲ, ಆಕೆ ಸ್ವತಂತ್ರಳು ಸರ್ವ ಶಕ್ತಳು ಎನ್ನುವುದು ಗೊತ್ತಾಗುತ್ತದೆ. ಸರ್ಕಾರದ ಈ ಚಿಕ್ಕ ಪ್ರೋತ್ಸಾಹ ಅವಳ ಕನಸಿನ ರೆಕ್ಕೆಗಳಿಗೆ ಶಕ್ತಿ ತುಂಬಿದಂತಾಗಿದೆ.

**ಡಾ. ವಿಜಯಶ್ರೀ ಎಂ.ಸಿ.,** ವೈದ್ಯೆ, ಬೆಂಗಳೂರು

# 'ಕವಿತೆಗೆ ಓದು, ಸಂವೇದನೆ ಅಗತ್ಯ'

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಅಧ್ಯಯನ, ಪ್ರತಿಭೆ ಮತ್ತು ಕಾವ್ಯ ಸಂವೇದನೆ ಇದ್ದಾಗ ಮಾತ್ರ ಕವಿತೆ ಬರೆಯಲು ಸಾಧ್ಯ ಎಂದು ಸಾಹಿತಿ ಎಚ್. ಡುಂಡಿರಾಜ್ ಹೇಳಿದರು.

ಶುಭಶ್ರೀ ಪ್ರಸಾದ್ ಅವರ 'ಶುಭನುಡಿ' ಹಾಗೂ ಬೆಂ.ಶ್ರೀ ರವೀಂದ್ರ ಅವರ 'ರವಿತೇಜನ ಮುಕ್ತಕಗಳು' ಕೃತಿಗಳನ್ನು ನಗರದ ಬಿಎಂಶ್ರೀ ಸಭಾಂಗಣದಲ್ಲಿ ಭಾನುವಾರ ಬಿಡುಗಡೆ ಮಾಡಿ ಮಾತನಾಡಿದರು.

ಕವಿತೆ ಬರೆಯುವುದನ್ನು ಮತ್ತು ಪ್ರೀತಿ ಮಾಡುವುದನ್ನು ಹೇಳಿಕೊಡಲಾಗುವುದಿಲ್ಲ. ಬರೆದಿರುವುದನ್ನು ಮತ್ತೆ ಓದಿ ಸ್ವವಿಮರ್ಶೆಗೆ ಒಳಪಡಿಸುವುದು ಬಹಳ ಮುಖ್ಯ ಎಂದರು.

ಮಂಡ್ಯದ ಪಿಇಎಸ್‌ಪಿಯು ಕಾಲೇಜಿನ ಕನ್ನಡ ಅಧ್ಯಾಪಕಿ ಎಂ.ಎಸ್. ಅನಿತಾ ಪುಸ್ತಕ ಪರಿಚಯ ಮಾಡಿ. 'ಹಕ್ಕುಗಳು ದಮನಗೊಳ್ಳುತ್ತಿರುವ ಈ ಕಾಲದಲ್ಲಿ ಗಾಯಕ್ಕೆ ಮದ್ದನ್ನು ಸಾಹಿತ್ಯ, ಕಲೆಗಳಲ್ಲಿ ಹುಡುಕಿಕೊಳ್ಳಬೇಕು. ಎಲ್ಲವೂ ಮಾರುಕಟ್ಟೆಯ ಸರಕಾಗಿವೆ. 'ಶುಭನುಡಿ', 'ರವಿತೇಜರ ಮುಕ್ತಕಗಳು' ಜೀವಪರ ಸಮಾಜಕ್ಕೆ ಅನಿವಾರ್ಯ' ಎಂದು ವಿಶ್ಲೇಷಿಸಿದರು.

ಹಾಸ್ಯ ಲೇಖಕ ಎಂ.ಎಸ್. ನರಸಿಂಹಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಅನನ್ಯ ಪ್ರಕಾಶನದ ಸಂಸ್ಕೃತಿ ಸುಬ್ರಹ್ಮಣ್ಯ, ಕೃತಿಕಾರರಾದ ಶುಭಶ್ರೀ ಪ್ರಸಾದ್, ಬೆಂ.ಶ್ರೀ ರವೀಂದ್ರ ಇದ್ದರು.



ಬೆಂಗಳೂರು ಬಿಎಂಶ್ರೀ ಸಭಾಂಗಣದಲ್ಲಿ 'ರವಿತೇಜನ ಮುಕ್ತಕಗಳು', 'ಶುಭನುಡಿ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಲೇಖಕಿ ಶುಭಶ್ರೀ ಪ್ರಸಾದ್, ಕನ್ನಡ ಅಧ್ಯಾಪಕಿ ಎಂ.ಎಸ್ ಕವಿತಾ, ಹಾಸ್ಯ ಲೇಖಕ ಎಂ.ಎಸ್ ನರಸಿಂಹಮೂರ್ತಿ, ಸಾಹಿತಿ ಎಚ್ ಡುಂಡಿರಾಜ್, ಲೇಖಕ ಸಂಸ್ಕೃತಿ ಸುಬ್ರಹ್ಮಣ್ಯ, ಬರಹಗಾರ ಬೆಂ.ಶ್ರೀ. ರವೀಂದ್ರ ಇದ್ದರು. – ಪ್ರಜಾವಾಣಿ ಚಿತ್ರ

# ಮೃತದೇಹ ಪಕ್ಕ ಮೊಬೈಲ್–ಪರ್ಸ್: ಸಿಗದ ಆರೋಪಿ ಸುಳಿವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೀವನ್‌ಬಿಮಾ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಆಕಾಂಕ್ಷಾ ಬಿದ್ಯಾಸರ್ (23) ಕೊಲೆ ಪ್ರಕರಣದ ತನಿಖೆಯನ್ನು ಪೊಲೀಸರು ಮುಂದುವರಿಸಿದ್ದು, ಇದುವರೆಗೂ ಆರೋಪಿ ಅರ್ಪಿತ್ ಗುರಿಜಾಲ್ ಸುಳಿವು ಪತ್ತೆಯಾಗಿಲ್ಲ.

‘ಕೋಡಿಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ನೆಲೆಸಿದ್ದ ಆಕಾಂಕ್ಷಾ ಅವರನ್ನು ಉಸಿರುಗಟ್ಟಿಸಿ ಕೊಂದು ಪರಾರಿಯಾಗಿರುವ ಆರೋಪಿ ದೆಹಲಿಯ ಅರ್ಪಿತ್ ಪತ್ತೆಗಾಗಿ ಶೋಧ ಮುಂದುವರಿದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.


ಆಕಾಂಕ್ಷಾ


ಅರ್ಪಿತ್

‘ಆಕಾಂಕ್ಷಾ ಹಾಗೂ ಅರ್ಪಿತ್, ಒಂದೇ ಕಂಪನಿ ಉದ್ಯೋಗಿಗಳು. ಇಬ್ಬರು ಪರಸ್ಪರ ಪ್ರೀತಿಸಿ, ಒಂದೇ ಮನೆಯಲ್ಲಿ ಕೆಲ ವರ್ಷ ಸಹಜೀವನ ನಡೆಸಿದ್ದರು. ಇತ್ತೀಚೆಗೆ ಅರ್ಪಿತ್, ಹೈದರಾಬಾದ್‌ನ

ಅಪರಾಧ ಸುದ್ದಿ

ಕಂಪನಿ ಸೇರಿದ್ದ. ಆಕಾಂಕ್ಷಾ ಮಾತ್ರ ಬೆಂಗಳೂರಿನಲ್ಲಿ ಉಳಿದುಕೊಂಡಿದ್ದರು. ದೂರವಾದ ಬಳಿಕ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಇದೇ ಕಾರಣಕ್ಕೆ ಆರೋಪಿ, ವ್ಯವಸ್ಥಿತ ಸಂಚು ರೂಪಿಸಿ ಆಕಾಂಕ್ಷಾ ಅವರನ್ನು ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದು ತಿಳಿಸಿವೆ.

‘ಕೊಲೆ ಬಳಿಕ ಮೃತದೇಹದ ಕುತ್ತಿಗೆಗೆ ಹಗ್ಗ ಬಿಗಿದಿದ್ದ ಆರೋಪಿ, ಫ್ಯಾನ್‌ಗೆ ನೇಣು ಹಾಕಲು ಯತ್ನಿಸಿದ್ದ. ಅದು ಸಾಧ್ಯವಾಗಿರಲಿಲ್ಲ. ಹೀಗಾಗಿ, ನೆಲದ ಮೇಲೆ ಮೃತದೇಹ ಇರಿಸಿದ್ದ. ಅದರ ಪಕ್ಕವೇ ತನ್ನ ಮೊಬೈಲ್ ಹಾಗೂ ಪರ್ಸ್ ಇಟ್ಟು ಆರೋಪಿ ಪರಾರಿಯಾಗಿದ್ದಾನೆ.’

‘ಮೊಬೈಲ್ ತನ್ನ ಬಳಿ ಇದ್ದರೆ ಪೊಲೀಸರಿಗೆ ಸುಳಿವು ಸಿಗಬಹುದೆಂದು ಆರೋಪಿ ಮೊದಲೇ ಯೋಚಿಸಿದ್ದ. ಇದೇ ಕಾರಣಕ್ಕೆ ಮೊಬೈಲ್ ಬಿಟ್ಟು ಹೋಗಿದ್ದಾನೆ. ಸದ್ಯಕ್ಕೆ ಆರೋಪಿ ಸುಳಿವು ಸಿಗುತ್ತಿಲ್ಲ. ಆತನ ಕುಟುಂಬದವರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

## ರಸ್ತೆ ದಾಟುವಾಗ ಕಾರು ಡಿಕ್ಕಿ: ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನೈಸ್ ರಸ್ತೆಯ ಅಂಜನಾಪುರ ಮೇಲ್ಸೇತುವೆ ಬಳಿ ಶನಿವಾರ ರಾತ್ರಿ ಅಪಘಾತ ಸಂಭವಿಸಿದ್ದು, ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ.

‘ಮೃತರ ಹೆಸರು ಗೊತ್ತಾಗಿಲ್ಲ. 30 ವರ್ಷದಿಂದ 35 ವರ್ಷ ವಯಸ್ಸಿರಬಹುದೆಂದು ಅಂದಾಜಿಸಲಾಗಿದೆ. ಮೃತದೇಹವನ್ನು ಕೆಂಪೇಗೌಡ ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಹೆಸರು ಹಾಗೂ ಸಂಬಂಧಿಕರು ಪತ್ತೆಯಾದ ಬಳಿಕವೇ ಮರಣೋತ್ತರ ಪರೀಕ್ಷೆ ನಡೆಸಲಾಗುವುದು’ ಎಂದು ತಲಘಟ್ಟಪುರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

‘ರಾತ್ರಿ 11.30ರ ಸುಮಾರಿಗೆ ಪಾದಚಾರಿ, ರಸ್ತೆ ದಾಟುತ್ತಿದ್ದರು. ಅದೇ ಸಂದರ್ಭದಲ್ಲಿ ಅತೀ ವೇಗವಾಗಿ ಹೊರಟಿದ್ದ ಕಾರು, ಡಿಕ್ಕಿ ಹೊಡೆದಿದೆ. ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಕಾರು ಸಮೇತ ಚಾಲಕ ಪರಾರಿಯಾಗಿದ್ದಾನೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

## ಮಹಿಳೆ ಸ್ನಾನ ಮಾಡುವಾಗ ಇಣುಕಿದವನ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳೆ ಸ್ನಾನ ಮಾಡುತ್ತಿದ್ದ ವೇಳೆ ಕೊಠಡಿಯ ಕಿಟಕಿಯಲ್ಲಿ ಇಣುಕಿ ನೋಡಿದ್ದ ಆರೋಪದಡಿ ನಿತಿನ್‌ನನ್ನು (23) ಮಾರತ್ತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮುನ್ನೇಕೊಳಲು ಮಂಜುನಾಥ್ ನಗರದ ನಿವಾಸಿ ನಿತಿನ್, ಫಾರ್ಮಸಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಮಹಿಳೆ ಹಾಗೂ ಅವರ ಪತಿ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಹಿಳೆ ವಾಸವಿರುವ ಮನೆಯ ಪಕ್ಕದಲ್ಲಿರುವ ಬಾಡಿಗೆ ಮನೆಯಲ್ಲಿ ನಿತಿನ್ ನೆಲೆಸಿದ್ದ. ಮಹಿಳೆ ಶನಿವಾರ ಸ್ನಾನಕ್ಕೆ ಹೋದ ಸಂದರ್ಭದಲ್ಲಿ ಆರೋಪಿ, ಗೋಡೆ ಪಕ್ಕದಲ್ಲಿ ನಿಂತು ಕಿಟಕಿ ಮೂಲಕ, ಮಹಿಳೆ ಸ್ನಾನ ಮಾಡುತ್ತಿರುವುದನ್ನು ನೋಡುತ್ತಿದ್ದ.’


‘ಆರೋಪಿಯನ್ನು ನೋಡಿದ್ದ ಸ್ಥಳೀಯರೊಬ್ಬರು ಹಿಡಿಯಲು ಹೋಗಿದ್ದರು. ತಪ್ಪಿಸಿಕೊಳ್ಳಲು ಯತ್ನಿಸಿದ್ದ ಯುವಕನನ್ನು ಸ್ಥಳೀಯರು ಬೆನ್ನಟ್ಟಿ ಹಿಡಿದಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ನಿತಿನ್‌ನನ್ನು ವಶಕ್ಕೆ ಪಡೆದರು. ಠಾಣೆಗೆ ಕರೆತಂದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ’ ಎಂದು ಪೊಲೀಸರು ತಿಳಿಸಿದರು.

# ಸಿಸಿಬಿ ಎಸಿಪಿ ಹೆಸರಿನಲ್ಲಿ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಾನೊಬ್ಬ ಐಪಿಎಸ್ ಅಧಿಕಾರಿ. ಬೆಂಗಳೂರು ಸಿಸಿಬಿ ಕಚೇರಿಯಲ್ಲಿ ಎಸಿಪಿ ಆಗಿ ಕೆಲಸ ಮಾಡುತ್ತಿದ್ದೇನೆ’ ಎಂಬುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪಿ ವಿಶುಕುಮಾರ್ ಅಲಿಯಾಸ್ ಅರ್ಜುನ್‌ನನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯದ ಅರ್ಜುನ್, ರಿಯಲ್ ಎಸ್ಟೇಟ್ ಏಜೆಂಟ್‌ನಾಗಿದ್ದ. ಕೆಲ ವರ್ಷಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದು ಗಿರಿನಗರದಲ್ಲಿ ನೆಲೆಸಿದ್ದ. ಈತನ ಕೃತ್ಯದ ವಿರುದ್ಧ ಮಲ್ಲೇಶ್ವರ ನಿವಾಸಿ ಎಸ್. ರಾಘವೇಂದ್ರ ಜೂನ್ 9ರಂದು ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.


ವಿಷುಕುಮಾರ್

‘ದೂರುದಾರ ರಾಘವೇಂದ್ರ, ಫೈನಾನ್ಸ್ ಕಂಪನಿ ನಡೆಸುತ್ತಿದ್ದಾರೆ. 2022ರಲ್ಲಿ ಪರಿಚಯಸ್ಥರ ಮೂಲಕ ಅವರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ ಅರ್ಜುನ್, ‘ನಾನೊಬ್ಬ ಐಪಿಎಸ್ ಅಧಿಕಾರಿ. ಸದ್ಯ ಸಿಸಿಬಿ ಎಸಿಪಿ ಆಗಿದ್ದೇನೆ’ ಎಂದಿದ್ದ. ಪೊಲೀಸರಿಗೆ ಸಂಬಂಧಪಟ್ಟ ಫೋಟೊಗಳನ್ನು ದೂರುದಾರರಿಗೆ ಆಗಾಗ ಕಳುಹಿಸುತ್ತಿದ್ದ. ಫೋಟೊ ನೋಡಿದ್ದ ದೂರುದಾರ, ಆರೋಪಿಯ ಮಾತು ನಂಬಿದ್ದರು.

‘ಮದುವೆಯಾಗುತ್ತಿರುವುದಾಗಿ ಹೇಳಿದ್ದ ಆರೋಪಿ, ₹ 25 ಲಕ್ಷ ಸಾಲ ಕೇಳಿದ್ದ. ಮೂರು ತಿಂಗಳು ಬಿಟ್ಟು ಬಡ್ಡಿ ಸಮೇತ ಹಣ ವಾಪಸು ನೀಡುವುದಾಗಿ ತಿಳಿಸಿದ್ದ. ಅದನ್ನು ನಂಬಿದ್ದ ದೂರುದಾರ, ಸ್ನೇಹಿತರ ಬಳಿ ₹ 20 ಲಕ್ಷ ಸಾಲ ಪಡೆದು ಆರೋಪಿ ಖಾತೆಗೆ ವರ್ಗಾವಣೆ ಮಾಡಿದ್ದರು. ಉಳಿದ ₹ 5 ಲಕ್ಷವನ್ನು ಕಾಟನ್‌ಪೇಟೆಯ ಸಿಸಿಬಿ ಕಚೇರಿ ಬಳಿಯೇ ಆರೋಪಿ ಕೈಗೆ ಕೊಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಯ ಮದುವೆಗೂ ದೂರುದಾರ ಹೋಗಿ ಬಂದಿದ್ದರು. ನಿಗದಿತ ಸಮಯಕ್ಕೆ ಸಾಲ ವಾಪಸು ಕೊಟ್ಟಿರಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ, ‘ಕೊಲೆ ಪ್ರಕರಣದ ಆರೋಪಿಗಳು ನನಗೆ ಪರಿಚಯ. ಅವರಿಗೆ ಹೇಳಿ ನಿನ್ನನ್ನು ಕೊಲೆ ಮಾಡಿಸುತ್ತೇನೆ’ ಎಂದು ದೂರುದಾರರಿಗೆ ಬೆದರಿಕೆಯೊಡ್ಡಿದ್ದ. ಇದರಿಂದ ನೊಂದ ದೂರುದಾರ, ಸ್ನೇಹಿತರ ಬಳಿ ಅಳಲು ತೋಡಿಕೊಂಡಿದ್ದರು. ಆರೋಪಿ ಬಗ್ಗೆ ಸ್ನೇಹಿತರು ಮಾಹಿತಿ ಕಲೆಹಾಕಿದಾಗ, ಆತನೊಬ್ಬ ನಕಲಿ ಅಧಿಕಾರಿ ಎಂಬುದು ತಿಳಿದಿತ್ತು’ ಎಂದು ಮೂಲಗಳು ಹೇಳಿವೆ.

**ಸಿಸಿಬಿ ತನಿಖೆ ಹೊಣೆ:** ‘ಬಂಧಿತ ಅರ್ಜುನ್, ಭುವನ್‌ಕುಮಾರ್ ಹೆಸರಿನಲ್ಲೂ ಹಲವರನ್ನು ವಂಚಿಸಿದ್ದಾನೆ. ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ಆರೋಪಿಯನ್ನು ಕಸ್ಟಡಿಗೆ ಪಡೆದು ಸಿಸಿಬಿ ಪೊಲೀಸರು ತನಿಖೆ ಮುಂದುವರಿಸಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

## ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.


ಮಡಿವಾಳ ಕೆರೆಯ ಆವರಣದಲ್ಲಿನ ದುಃಸ್ಥಿತಿ.

### ಮಡಿವಾಳ ಕೆರೆ: ಸ್ವಚ್ಛತೆಗೆ ಆದ್ಯತೆ ನೀಡಿ

ಮಡಿವಾಳ ಕೆರೆಗೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಹದಗೆಟ್ಟ ಪರಿಣಾಮ ವಾಯುವಿಹಾರಿಗಳ ಓಡಾಟಕ್ಕೆ ಅನನುಕೂಲವಾಗಿದೆ. ಕೆರೆಯ ಆವರಣದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ವಾಯುವಿಹಾರಕ್ಕೆ ಬರುವ ಜನ ಹರಸಾಹಸ ಪಡುವಂತಾಗಿದೆ. ಇಲ್ಲಿ ದೋಣಿ ವಿಹಾರವಿದೆ. ಆದರೆ, ಮೂಲಸೌಕರ್ಯಗಳ ಕೊರತೆಯಿಂದ ಇಲ್ಲಿಗೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಕೆರೆಯಲ್ಲಿ ಬೆಳೆದ ಕಳೆಯ ಗಿಡಗಳನ್ನು ತೆಗೆದು ಅಲ್ಲಲ್ಲಿ ರಾಶಿ ಹಾಕಲಾಗಿದೆ. ಇದರಿಂದ, ದುರ್ವಾಸನೆ ಬರುತ್ತಿದ್ದು, ವಾಯುವಿಹಾರಿಗಳು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಬಿಬಿಎಂಪಿ ಅಧಿಕಾರಿಗಳು ಈ ಕೆರೆಯ ಆವರಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು.

**ಎಚ್. ದೊಡ್ಡಮಾರಯ್ಯ,** ಬಿಟಿಎಂ ಬಡಾವಣೆ


ರಸ್ತೆ ಮೇಲೆ ಹಾಕಿರುವ ಹೂಳು

### ರಸ್ತೆಯಲ್ಲಿ ಹೂಳು; ತೆರವುಗೊಳಿಸಿ

ಹೆಣ್ಣೂರು ಪೊಲೀಸ್ ಠಾಣೆಯ ಹೊರ ವರ್ತುಲ ರಸ್ತೆಯ ಸರ್ವಿಸ್ ರಸ್ತೆಯಲ್ಲಿರುವ ರಾಜಕಾಲುವೆಯ ಹೂಳನ್ನು ತೆಗೆದು ರಸ್ತೆಯ ಮೇಲೆ ಹಾಕಲಾಗಿದೆ. ಇದರಿಂದ, ಪಾದಚಾರಿಗಳು ಮತ್ತು ವಾಹನ ಸವಾರರ ಸಂಚಾರಕ್ಕೆ ಅನನುಕೂಲವಾಗಿದೆ. ಜೊತೆಗೆ ಮಳೆಗಾಲ ಆರಂಭವಾಗಿದ್ದರೂ ಬಿಬಿಎಂಪಿ ಅಧಿಕಾರಿಗಳು ಈ ಹೂಳನ್ನು ತೆರವುಗೊಳಿಸುತ್ತಿಲ್ಲ. ಆದ್ದರಿಂದ ಹೂಳು ಮತ್ತೆ ರಾಜಕಾಲುವೆ ಸೇರುತ್ತಿದೆ. ಈ ಬಗ್ಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ.

**-ಆಕಾಶ್,** ಸ್ಥಳೀಯ ನಿವಾಸಿ


ಕೋರಮಂಗಲದ ಕಾವೇರಿ ಕಾಲೊನಿಯ ಎಸ್‌.ಟಿ. ಬೆಡ್ ಲೇಔಟ್‌ಗೆ ಸಂಪರ್ಕಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು.

### ‘ಕೋರಮಂಗಲ: ರಸ್ತೆ ಗುಂಡಿ ಮುಚ್ಚಿ’

ಕೋರಮಂಗಲದ ಕಾವೇರಿ ಕಾಲೊನಿಯ ಎಸ್.ಟಿ. ಬೆಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯ ಮಧ್ಯೆದಲ್ಲಿಯೇ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿವೆ. ಇದರಿಂದ ವಾಹನ ಸಂಚಾರಕ್ಕೆ ಅನನಕೂಲವಾಗಿದೆ. ಬಿಬಿಎಂಪಿ ಅವರು ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ಬದಲು, ಆ ಗುಂಡಿಗಳಿಗೆ ತೇಪೆ ಹಚ್ಚು ಕೆಲಸ ಮಾಡಿದ್ದು, ಅದಕ್ಕೆ ಡಾಂಬರು ಸಹ ಹಾಕಿಲ್ಲ. ಇದರಿಂದ ಪ್ರತಿದಿನ ದೂಳಿನ ಮಜ್ಜನವಾಗುತ್ತಿದ್ದು, ವಾಹನ ಸವಾರರ ಆರೋಗ್ಯವನ್ನು ಹಾಳು ಮಾಡುತ್ತಿದೆ. ಬಿಬಿಎಂಪಿ ಅಧಿಕಾರಿಗಳಿಗೆ ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

**ರಾಜೇಶ್,** ಸ್ಥಳೀಯ ನಿವಾಸಿ



### ‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’


ಹಂಪಿನಗರದ 5ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಚಪ್ಪಡಿ ಕಲ್ಲುಗಳನ್ನು ತೆರವುಗೊಳಿಸಿ ಒಂದು ವರ್ಷವಾದರೂ ಅಳವಡಿಸಿಲ್ಲ. ಇದರಿಂದ ವೃದ್ಧರು, ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಮುಖ್ಯರಸ್ತೆಯ ಮೇಲೆ ಸಂಚರಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

**ವಿಷ್ಣು ವಿಕ್ರಮ್,** 10ನೇ ತರಗತಿಯ ವಿದ್ಯಾರ್ಥಿ, ಹಂಪಿನಗರ

### ವರದಿ ಪರಿಣಾಮ

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಭಟ್ಟರಹಳ್ಳಿ ಬಸ್ ನಿಲ್ದಾಣ ಬಳಿಯ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ವಾಲಿದ ವಿದ್ಯುತ್ ಕಂಬವನ್ನು ಬಿಬಿಎಂಪಿ, ಬೆಸ್ಕಾಂ ಮತ್ತು ರಾಷ್ಟ್ರೀಯ ಹೆದ್ದಾರಿಯ ಅಧಿಕಾರಿಗಳು ತೆರವುಗೊಳ್ಳಿಸಿದ್ದಾರೆ. ‘ಪ್ರಜಾವಾಣಿ’ಯ ‘ಕುಂದು ಕೊರತೆ’ ವಿಭಾಗದಲ್ಲಿ ಮೇ 15ರಂದು ‘ವಾಲಿದ ವಿದ್ಯುತ್ ಕಂಬ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ಸುದ್ದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.


ರಾಷ್ಟ್ರೀಯ ಹೆದ್ದಾರಿ 75ರಲ್ಲಿ ವಾಲಿದ ವಿದ್ಯುತ್ ಕಂಬವನ್ನು ತೆರವುಗೊಳಿಸಿರುವುದು



## ಈ ಕೌಶಲ ಕಲಿತವರಿಗೆ ಕೈತುಂಬಾ ಕೆಲಸ

# ವಿಡಿಯೊ ಎಡಿಟಿಂಗ್

ಸಿನಿಮಾರಂಗದಿಂದ ಜಾಹೀರಾತಿನವರೆಗೆ, ಟಿವಿ ಚಾನೆಲ್‌ಗಳಿಂದ ಅನಿಮೇಶನ್ ಉದ್ಯಮದವರೆಗೆ- ಎಲ್ಲೆಡೆ ವಿಡಿಯೊ ಎಡಿಟರ್‌ಗಳದ್ದೇ ಕಾರುಬಾರು. ವಿಡಿಯೊ ಎಡಿಟಿಂಗ್ ಕರಗತ ಮಾಡಿಕೊಳ್ಳಬಯಸುವವರಿಗೆ ಸಹಾಯ ಮಾಡಲೆಂದೇ ಹತ್ತಾರು ಸಂಪನ್ಮೂಲಗಳು ಲಭ್ಯ ಇವೆ.

**ಸಿಬಂತಿ ಪದ್ಮನಾಭ ಕೆ.ವಿ.**

8 ಇ-ಕೋರ್ಸ್

ವಿಡಿಯೊ ಮಾಧ್ಯಮ ಹಿಂದೆಂದಿಗಿಂತಲೂ ಈಗ ಜನಪ್ರಿಯವಾಗಿದೆ. ಬರಹ ರೂಪದ ಮಾಹಿತಿಗಿಂತಲೂ ವಿಡಿಯೊ ನೋಡುವುದನ್ನೇ ಜನರು ಹೆಚ್ಚು ಇಷ್ಟಪಡುತ್ತಿರುವುದು ಹೊಸ ಕಾಲದ ಬೆಳವಣಿಗೆ. ಯಾವುದೇ ಸಾಮಾಜಿಕ ಜಾಲತಾಣವನ್ನು ಗಮನಿಸಿದರೂ ವಿಡಿಯೊಗಳೇ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಗಮನಿಸಬಹುದು. ಶೇ 90ಕ್ಕಿಂತಲೂ ಹೆಚ್ಚು ಕಂಪೆನಿಗಳು ವಿಡಿಯೊ ರೂಪದ ಜಾಹೀರಾತುಗಳನ್ನೇ ನೆಚ್ಚಿಕೊಂಡಿವೆ ಎಂದು ಸಮೀಕ್ಷೆಗಳು ಹೇಳುತ್ತವೆ. ಹೀಗಾಗಿ ವಿಡಿಯೊ ಎಡಿಟರ್‌ಗಳಿಗೆ ಈಗ ಎಲ್ಲಿಲ್ಲದ ಬೇಡಿಕೆ ಬಂದಿದೆ.

ವಿಡಿಯೊ ಎಡಿಟಿಂಗ್ ಕೌಶಲವನ್ನು ಚೆನ್ನಾಗಿ ರೂಢಿಸಿಕೊಂಡಿರುವ ವ್ಯಕ್ತಿಗೆ ಈಚಿನ ವರ್ಷಗಳಲ್ಲಿ ಕೈತುಂಬ ಕೆಲಸ, ಆಕರ್ಷಕ ಆದಾಯ. ಸಿನಿಮಾರಂಗದಿಂದ ತೊಡಗಿ ಜಾಹೀರಾತಿನವರೆಗೆ, ಟಿ.ವಿ ಚಾನೆಲ್‌ಗಳಿಂದ ತೊಡಗಿ ಅನಿಮೇಶನ್ ಉದ್ಯಮದವರೆಗೆ- ಎಲ್ಲೆಡೆ ವಿಡಿಯೊ ಎಡಿಟರ್‌ಗಳದ್ದೇ ಕಾರುಬಾರು. ವಿಡಿಯೊ ಎಡಿಟಿಂಗ್ ಕರಗತ ಮಾಡಿಕೊಳ್ಳಬಯಸುವವರಿಗೆ ಸಹಾಯ ಮಾಡಲೆಂದೇ ಹತ್ತಾರು ಸಂಪನ್ಮೂಲಗಳು ಲಭ್ಯ ಇವೆ. ಇದಕ್ಕಾಗಿ ಔಪಚಾರಿಕ ಕೋರ್ಸ್‌ಗಳನ್ನೇ ನೆಚ್ಚಿಕೊಳ್ಳಬೇಕೆಂದೇನೂ ಇಲ್ಲ. ಆನ್‌ಲೈನ್ ಸಂಪನ್ಮೂಲಗಳನ್ನು ಬಳಸಿಯೂ ಅಗತ್ಯ ಜ್ಞಾನ ಹಾಗೂ ಕೌಶಲಗಳನ್ನು ಬೆಳೆಸಿಕೊಳ್ಳಬಹುದು. ಕೆಲವು ಆನ್‌ಲೈನ್ ಕೋರ್ಸುಗಳಿಗೆ ನಿರ್ದಿಷ್ಟ ಶುಲ್ಕ ಪಾವತಿಸಬೇಕಾಗಬಹುದು, ಅನೇಕ ಕೋರ್ಸುಗಳನ್ನು ಉಚಿತವಾಗಿಯೂ ಪಡೆಯಬಹುದು.

### ಏನಿದು ಕೋರ್ಸು?

ವಿಡಿಯೊ ಎಡಿಟಿಂಗ್ ಕಲಿಯುವುದೆಂದರೆ ಅದಕ್ಕೆ ಬೇಕಾದ ಸಾಫ್ಟ್‌ವೇರ್ ನಿರ್ವಹಿಸಲು ಕಲಿಯುವುದು ಎಂದರ್ಥ. ಅಡೋಬ್ ಪ್ರೀಮಿಯರ್ ಪ್ರೊ, ಅಡೋಬ್ ಪ್ರೀಮಿಯರ್ ರಶ್, ಫೈನಲ್ ಕಟ್ ಪ್ರೊ, ಡ-ವಿನ್ಸಿ ರಿಸಾಲ್ವ್, ಬ್ಲೆಂಡರ್, ಪ್ರೆಝಿ – ಇವು ಲ್ಯಾಪ್‌ಟಾಪ್ ಇಲ್ಲವೇ ಡೆಸ್ಕ್‌ಟಾಪ್ ಮೇಲೆ ಬಳಸಬಹುದಾದ ವೃತ್ತಿಪರ ವಿಡಿಯೊ ಎಡಿಟಿಂಗ್ ತಂತ್ರಾಂಶಗಳು. ಇನ್‌ಶಾಟ್, ಕ್ವಿಕ್, ಪ್ರೀಮಿಯರ್ ರಶ್, ಕೈನ್‌ಮಾಸ್ಟರ್, ವಿಎನ್ ವಿಡಿಯೊ ಎಡಿಟರ್- ಇವೆಲ್ಲ ಮೊಬೈಲ್ ಫೋನಿನಲ್ಲೇ ಸುಲಭವಾಗಿ ಬಳಸಬಹುದಾದ ತಂತ್ರಾಂಶಗಳು/ ಆ್ಯಪ್‌ಗಳು. ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಕೆಲವೇ ದಿನಗಳಲ್ಲಿ ಕರಗತ ಮಾಡಿಕೊಳ್ಳಬಹುದಾದ ಸಾಫ್ಟ್‌ವೇರ್‌ಗಳು ಇವು. ಅಭ್ಯಾಸ ಮಾಡುವ ಹಂತಗಳನ್ನು ಹೇಳಿಕೊಡುವ ಅನೇಕ ಕೋರ್ಸುಗಳು, ಟ್ಯುಟೋರಿಯಲ್‌ಗಳು ಇವೆ. ಔಪಚಾರಿಕ ಅಥವಾ ತಾಂತ್ರಿಕ ಪದವಿಗಳು ಇಲ್ಲದವರೂ ಇವುಗಳಲ್ಲಿ ತೊಡಗಿಸಿಕೊಳ್ಳಬಹುದು. ಪಿಯುಸಿ/ ಪದವಿ ಹಂತದಲ್ಲಿ ಓದುತ್ತಿರುವವರೂ ತಮ್ಮ ಬಿಡುವಿನ ವೇಳೆಯಲ್ಲಿ ಈ ಕೌಶಲವನ್ನು ರೂಢಿಸಿಕೊಳ್ಳಬಹುದು. ಒಮ್ಮೆ ಕಲಿತರೆ ಅದು ಇಡೀ ಜೀವನಕ್ಕೆ ಆಧಾರವಾಗಬಲ್ಲ ವಿದ್ಯೆ.

### ಎಲ್ಲಿ ಉಪಯೋಗ?

ಆರಂಭದಲ್ಲಿ ಹೇಳಿರುವಂತೆ, ಆಧುನಿಕ ಕಾಲದಲ್ಲಿ ಮಾರ್ಕೆಟಿಂಗ್ ಕ್ಷೇತ್ರದಲ್ಲಿ ವಿಡಿಯೊಗಳು ಹೆಚ್ಚು ಬಳಕೆಯಾಗುತ್ತಿವೆ. ಜಾಹೀರಾತು, ಮಾರಾಟವರ್ಧನೆ, ಪ್ರಚಾರ ಮೊದಲಾದ ಉದ್ದೇಶಗಳಿಗೆ ವಿಡಿಯೋ ಅಗತ್ಯ ಇರುವುದರಿಂದ ವಿಡಿಯೊ ಸಂಕಲನಕಾರರ ಬೇಡಿಕೆ ಹೆಚ್ಚು. ಮನರಂಜನಾ ಉದ್ದಿಮೆಗಳಲ್ಲಂತೂ ವಿಡಿಯೊ ಇಲ್ಲದೆ ದಿನನಿತ್ಯದ ವ್ಯವಹಾರವೇ ಇಲ್ಲ. ಮಕ್ಕಳ ಮನರಂಜನಾತ್ಮಕ ವಿಡಿಯೊಗಳು, ವೃತ್ತಿಪರವಾಗಿ ಬೆಳೆದಿರುವ ಯೂಟ್ಯೂಬ್ ಚಾನೆಲ್‌ಗಳು, ಸುದ್ದಿ ವಾಹಿನಿಗಳು, ಟಿವಿ ಧಾರಾವಾಹಿಗಳು, ಸಿನಿಮಾ, ಮದುವೆ ಮತ್ತಿತರ ಕೌಟುಂಬಿಕ ಕಾರ್ಯಕ್ರಮಗಳ ಚಿತ್ರೀಕರಣ ಮತ್ತು ಎಡಿಟಿಂಗ್- ಎಲ್ಲೆಡೆಯೂ ಬೇಡಿಕೆಯಿರುವುದು ವಿಡಿಯೊ ಎಡಿಟರ್‌ಗಳಿಗೆ. ಕೊರೊನಾ ನಂತರದ ಕಾಲದಲ್ಲಂತೂ ಆನ್‌ಲೈನ್ ಶಿಕ್ಷಣ ಜನಪ್ರಿಯವಾಗಿರುವುದರಿಂದ ಆಡಿಯೊ-ವಿಶುವಲ್ ಕಂಟೆಂಟ್‌ಗಳನ್ನು ಸಿದ್ಧಪಡಿಸುವ ಕ್ರಿಯಾಶೀಲ ಎಡಿಟರ್‌ಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ.

**(ಇ- ಕೋರ್ಸ್ ಸರಣಿ ಮುಗಿಯಿತು)**


**(ಸಹಾಯಕ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ತುಮಕೂರು ವಿಶ್ವವಿದ್ಯಾಲಯ)**

### ಎಲ್ಲೆಲ್ಲಿ ಕೋರ್ಸ್‌ಗಳು ಲಭ್ಯ ?

- ವಿಡಿಯೋ ಎಡಿಟಿಂಗ್‌ಗೆ ಸಂಬಂಧಿಸಿದ ಅನೇಕ ಉಚಿತ ಕೋರ್ಸುಗಳನ್ನು ಗ್ರೇಟ್ ಲರ್ನಿಂಗ್ ಅಕಾಡೆಮಿ ಸಿದ್ಧಪಡಿಸಿದೆ. ಇಲ್ಲಿ ಗಮನಿಸಿ: https://www.mygreatlearning.com/academy/learn-for-free/courses/video-editing-basics
- ಶಿಕ್ಷಣ ಸಚಿವಾಲಯದ 'ಸ್ವಯಂ' ವೇದಿಕೆಯಲ್ಲಿ 'ಬೇಸಿಕ್ ಕಾನ್ಸೆಪ್ಟ್ ಆಫ್ ಫಿಲ್ಮ್ ವಿಡಿಯೊ ಎಡಿಟಿಂಗ್', 'ಎಜುಕೇಶನಲ್ ವಿಡಿಯೋ ಪ್ರೊಡಕ್ಷನ್' ಎಂಬ ಉಚಿತ ಕೋರ್ಸುಗಳು ಲಭ್ಯವಿವೆ. ಈ ಕೊಂಡಿ ಬಳಸಿ ಪಾಠಗಳನ್ನು ಕೇಳಬಹುದು: https://onlinecourses.swayam2.ac.in/
- ಯುಡೆಮಿ ಸಂಸ್ಥೆ ಕೂಡ ವಿಡಿಯೊ ಸಂಕಲನಕ್ಕೆ ಸಂಬಂಧಿಸಿದ ಸಾಕಷ್ಟು ಕೋರ್ಸುಗಳನ್ನು ನೀಡುತ್ತಿದೆ. ಕೆಲವನ್ನು ಇಲ್ಲಿ ಗಮನಿಸಬಹುದು: https://www.udemy.com/topic/video-editing/
- ಲಿಂಕ್ಡ್‌ಇನ್ ಸಂಸ್ಥೆಯು ಸಾಕಷ್ಟು ಸುಧಾರಿತ ಕೌಶಲಗಳನ್ನು ಒದಗಿಸುತ್ತಿದೆ. ಅವುಗಳಲ್ಲಿ ವಿಡಿಯೊ ಎಡಿಟಿಂಗ್ ಕೂಡ ಒಂದು. ಇಲ್ಲಿ ನೋಡಿ: https://www.linkedin.com/learning/topics/video-editing
- ಸ್ಕಿಲ್‌ಶೇರ್ ಎಂಬ ಆನ್‌ಲೈನ್ ವೇದಿಕೆಯಲ್ಲಿ ವಿಡಿಯೊ ಎಡಿಟಿಂಗ್ ಸಂಬಂಧಿಸಿದ ಸಾಕಷ್ಟು ಪಾಠಗಳು ಉಚಿತವಾಗಿ ದೊರೆಯುತ್ತವೆ. ಇಲ್ಲಿ ಭೇಟಿಕೊಡಿ: https://www.skillshare.com/en/browse/video-editing

# ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಪದವಿ ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

**1. ನನ್ನ ಮಗ ಈ ವರ್ಷ ಬಿಇ (ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಮುಗಿಸುತ್ತಿದ್ದು, ಭವಿಷ್ಯವನ್ನು ಉತ್ತಮವಾಗಿ ರೂಪಿಸಲು ಮುಂದೆ ಯಾವ ಕೋರ್ಸ್ ಮಾಡಬಹುದು? ದಯವಿಟ್ಟು ಮಾರ್ಗದರ್ಶನ ನೀಡಿ.**

**ರಾಮ್,** ಬೆಂಗಳೂರು

ಉನ್ನತ ಶಿಕ್ಷಣವನ್ನು ನಿರ್ಧರಿಸುವ ಮೊದಲು, ಯಾವ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಯೋಚಿಸಬೇಕು. ಪ್ರಮುಖವಾಗಿ, ಎರಡು ಆಯ್ಕೆಗಳಾದ ತಂತ್ರಜ್ಞಾನ ಅಥವಾ ಮ್ಯಾನೇಜ್‌ಮೆಂಟ್ ಕ್ಷೇತ್ರಗಳಲ್ಲಿ, ಸ್ವಾಭಾವಿಕ ಅಭಿರುಚಿ, ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ, ಯಾವ ಕ್ಷೇತ್ರ ಸೂಕ್ತ ಎಂದು ನಿರ್ಧರಿಸಿ, ವೃತ್ತಿಯೋಜನೆಯನ್ನು ಮಾಡಬೇಕು. ವೃತ್ತಿ ಮತ್ತು ವೈಯಕ್ತಿಕ ಬದುಕಿನ ಗುರಿ, ಯಶಸ್ಸಿಗೆ ಬೇಕಾಗುವ ತಜ್ಞತೆ, ತರಬೇತಿ, ವೃತ್ತಿಪರ ಮತ್ತು ಪ್ರಾಥಮಿಕ ಕೌಶಲಗಳು, ವೃತ್ತಿಯ ಮೈಲಿಗಲ್ಲುಗಳು ಈ ಯೋಜನೆಯ ಅಂಶಗಳಾಗಿರುತ್ತವೆ. ಈ ಅಂಶಗಳನ್ನು ಪರಿಗಣಿಸಿ, ವೃತ್ತಿಯೋಜನೆಯನ್ನು ಮಾಡಿ ಅನುಷ್ಠಾನಗೊಳಿಸಬೇಕು. ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ, ಆಸಕ್ತಿದಾಯಕ ಮತ್ತು ಭವಿಷ್ಯದಲ್ಲಿ ಬೇಡಿಕೆಯನ್ನು ನಿರೀಕ್ಷಿಸಬಹುದಾದ ವಿಭಾಗದಲ್ಲಿ ಎಂಟೆಕ್/ಎಂಎಸ್ ಕೋರ್ಸ್‌ಗಳನ್ನು ದೇಶ/ವಿದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಮಾಡಬಹುದು. ಮ್ಯಾನೇಜ್‌ಮೆಂಟ್ ಕ್ಷೇತ್ರದ ತಜ್ಞತೆಗಾಗಿ, ಎಂಬಿಎ ಮಾಡುವುದು ಸೂಕ್ತ. ಉನ್ನತ ಶಿಕ್ಷಣದ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

**2. ಬಿ.ಇಡಿ ಜೊತೆಗೆ ಎಂಎ (ದೂರ ಶಿಕ್ಷಣ) ಮಾಡಬೇಕೆಂದುಕೊಂಡಿದ್ದೇನೆ. ಇದರ ಬಗ್ಗೆ ಮಾಹಿತಿ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಶಿಕ್ಷಕ ವೃತ್ತಿಯನ್ನು ಅನುಸರಿಸಲು, ಬಿ.ಇಡಿ ಮತ್ತು ಎಂಎ (ದೂರ ಶಿಕ್ಷಣ) ಉತ್ತಮ ಆಯ್ಕೆ. ಬಿಇಡಿ ಕೋರ್ಸನ್ನು ರೆಗ್ಯುಲರ್ ಅಥವಾ ದೂರಶಿಕ್ಷಣದ ಮೂಲಕ ಮಾಡಬಹುದು. ನೀವು ಆಯ್ಕೆ ಮಾಡುವ ಕಾಲೇಜಿನ/ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ ಪ್ರವೇಶ ಪ್ರಕ್ರಿಯೆ, ಶುಲ್ಕಗಳು ಇತ್ಯಾದಿಗಳಿರುತ್ತದೆ. ಬಿ.ಇಡಿ ಜೊತೆಗೆ ಪದವಿ ಕೋರ್ಸಿನಲ್ಲಿ ಓದಿರುವ ಅಥವಾ ಇಷ್ಟವಿರುವ ವಿಷಯದಲ್ಲಿ ಎಂಎ ಮಾಡಿ, ಶಿಕ್ಷಕರ ಅರ್ಹತಾ ಪರೀಕ್ಷೆಯ ನಂತರ, ಪದವಿಪೂರ್ವ ಕಾಲೇಜುಗಳಲ್ಲಿ ಅಧ್ಯಾಪಕರಾಗಬಹುದು. ಮುಂದೆ ಸಾಧ್ಯವಾದರೆ, ತಜ್ಞತೆಗಾಗಿ ಪಿ.ಎಚ್‌ಡಿ ಮಾಡಿ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ, ವೃತ್ತಿಯಲ್ಲಿ ಇನ್ನೂ ಪ್ರಗತಿ ಗಳಿಸಬಹುದು. ಈ ವೃತ್ತಿಯನ್ನು ಅನುಸರಿಸಲು ವಿಷಯದಲ್ಲಿ ಆಳವಾದ ಜ್ಞಾನದ ಜೊತೆಗೆ ಸಂವಹನ ಕೌಶಲ, ಸಮಯದ ನಿರ್ವಹಣೆ, ತಾಳ್ಮೆ, ಸಹನೆ, ನಾಯಕತ್ವದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು.

**ಮತ್ತಷ್ಟು ಪ್ರಶ್ನೋತ್ತರಕ್ಕೆ** www.prajavani.net/education-career/education ಜಾಲತಾಣ ನೋಡಿ.

**ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.**

# 'ಕಾನೂನು' ವಿದ್ಯಾರ್ಥಿಗಳಿಗೆ ವಾಲಂಟರಿ ಇಂಟರನ್‌ಷಿಪ್

ವಿದ್ಯಾರ್ಥಿ ವೇತನ ಕೈಪಿಡಿ

**ವಿವರ:** ಕಾನೂನು ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಶಾಸಕಾಂಗದ ಕರಡು ರಚನೆ ವೃತ್ತಿಯಲ್ಲಿ ಆಸಕ್ತಿ ಬೆಳೆಸಲು ಐಎಲ್‌ಡಿಆರ್ ಸಂಸ್ಥೆ ವಾಲಂಟರಿ ಇಂಟರನ್‌ಷಿಪ್ ಫಾರ್ ಲಾ ಸ್ಟುಡೆಂಟ್ಸ್ ಎಂಬ ಇಂಟರನ್‌ಷಿಪ್ ಯೋಜನೆಯನ್ನು ರೂಪಿಸಿದೆ.

**ಅರ್ಹತೆ:** ಐದು ವರ್ಷಗಳ ಅವಧಿಯ ಇಂಟಿಗ್ರೇಟೆಡ್ ಕಾನೂನು ಪದವಿ ಕೋರ್ಸ್‌ನಲ್ಲಿ 4 ಮತ್ತು 5ನೇ ವರ್ಷದಲ್ಲಿರುವ ಅಥವಾ ಮೂರು ವರ್ಷದ ಕಾನೂನು ಪದವಿಕೋರ್ಸ್‌ನಲ್ಲಿ ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿಗಳು ಈ ಇಂಟರನ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು.

**ಆರ್ಥಿಕ ನೆರವು/ಪ್ರಯೋಜನ:** ಇನ್‌ಸ್ಟಿಟ್ಯೂಟ್ ಆಫ್ ಲೆಜಿಸ್ಲೇಟಿವ್ ಡ್ರಾಫ್ಟಿಂಗ್ ಆ್ಯಂಡ್ ರಿಸರ್ಚ್(ಐಎಲ್ ಡಿಆರ್) ಸಂಸ್ಥೆಯಿಂದ ಪ್ರಮಾಣ ಪತ್ರ

**ಅರ್ಜಿ ಸಲ್ಲಿಸಲು ಕೊನೆ ದಿನ:** ವರ್ಷಪೂರ್ತಿ

**ಅರ್ಜಿ ಸಲ್ಲಿಸುವ ವಿಧಾನ:** ಇಮೇಲ್ ಅಥವಾ ಅಂಚೆ ಮೂಲಕ: ಬ್ರಾಂಚ್ ಆಫೀಸರ್, ಐಎಲ್‌ಡಿಆರ್, 416 'ಡಿ' ವಿಂಗ್, ಲೆಜಿಸ್ಲೇಟಿವ್ ಡಿಪಾರ್ಟ್‌ಮೆಂಟ್, ಮಿನಿಸ್ಟ್ರಿ ಆಫ್ ಲಾ ಅಂಡ್ ಜಸ್ಟೀಸ್, ಶಾಸ್ತ್ರಿ ಭವನ, ನವದೆಹಲಿ – 110001.

**ಹೆಚ್ಚಿನ ಮಾಹಿತಿಗೆ :**Short Url:www.b4s.in/praja/VSL







1. ಕಲಬುರಗಿಯ ಬಸ್ ನಿಲ್ದಾಣದಲ್ಲಿ 'ಶಕ್ತಿ' ಯೋಜನೆಗೆ ಭಾನುವಾರ ಚಾಲನೆ ನೀಡಿದ ನಂತರ ಬಸ್‌ನಲ್ಲಿ ಮಹಿಳಾ ಪ್ರಯಾಣಿಕರು ಸಂಭ್ರಮದಿಂದ ಜನರತ್ತ ಕೈ ಬೀಸಿದರು 2. ಕೆಜಿಎಫ್‌ನಲ್ಲಿ ಶಾಸಕಿ ರೂಪಕಲಾ ಎಂ.ಶಶಿಧರ್ ಕೆಎಸ್‌ಆರ್‌ಟಿಸಿ ಬಸ್ ಚಲಾಯಿಸಿದರು 3. ಮೈಸೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಮಹಿಳೆಯರಿಗೆ ಪ್ರಯಾಣದ ಟಿಕೆಟ್ ನೀಡಿದರು
–ಪ್ರಜಾವಾಣಿ ಚಿತ್ರಗಳು

# ಚಾಲಕ, ನಿರ್ವಾಹಕರಾದ ಸಚಿವ– ಶಾಸಕರು

ಮಹಿಳೆಯರಿಗೆ ಸರ್ಕಾರಿ ಬಸ್‌ನಲ್ಲಿ ಉಚಿತ ಪ್ರಯಾಣದ ಸೌಲಭ್ಯ ಒದಗಿಸುವ 'ಶಕ್ತಿ' ಯೋಜನೆಗೆ ಚಾಲನೆ ನೀಡಿದ ಕಾರ್ಯಕ್ರಮವು ಮಹಿಳೆಯರ ಸಂಭ್ರಮಕ್ಕೆ ಸಾಕ್ಷಿಯಾಗಿದೆ. ಕೆಲವೆಡೆ ಮಹಿಳೆಯರು ರೇಷ್ಮೆ ಸೀರೆ ಉಟ್ಟು ಬಂದು ಸಡಗರಪಟ್ಟರು. ತಮ್ಮ ನಾಯಕನ ಫೋಟೊವನ್ನು ಫ್ಲೆಕ್ಸ್‌ನಲ್ಲಿ ಹಾಕಿಲ್ಲ ಎಂದು ರಾಮನಗರದಲ್ಲಿ ಗದ್ದಲ ಮಾಡಲಾಯಿತು. ಶಾಸಕಿ ರೂಪಕಲಾ ಅವರು ಸ್ವತಃ ಬಸ್ ಚಲಾಯಿಸಿದರು. ಕೆಲವು ಸಚಿವರು–ಶಾಸಕರು ಟಿಕೆಟ್ ಹರಿದು ಕೊಟ್ಟು ನಿರ್ವಾಹಕರಾಗಲು ಯತ್ನಿಸಿದರು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಿದ ಕಾರ್ಯಕ್ರಮಗಳಲ್ಲಿ ವಿವಿಧೆಡೆ ಹಲವು ಸ್ವಾರಸ್ಯಕರ ಘಟನೆಗಳೂ ನಡೆದವು



ದಾವಣಗೆರೆಯ ಬಸ್ ನಿಲ್ದಾಣದಲ್ಲಿ ಮಹಿಳೆಯರ ಸಂಭ್ರಮ

## ಪರವಾನಗಿ ಇಲ್ಲದೆಯೂ ಬಸ್ ಚಲಾಯಿಸಿದ ಶಾಸಕಿ ರೂಪಕಲಾ

ಪ್ರಜಾವಾಣಿ ವಾರ್ತೆ

**ಕೆಜಿಎಫ್ (ಕೋಲಾರ):** ಸರ್ಕಾರಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ ರಾಜ್ಯ ಸರ್ಕಾರದ 'ಶಕ್ತಿ' ಯೋಜನೆಗೆ ಶಾಸಕಿ ರೂಪಕಲಾ ಎಂ.ಶಶಿಧರ್ ಭಾನುವಾರ ಕೆಎಸ್‌ಆರ್‌ಟಿಸಿ ಬಸ್ ಚಲಾಯಿಸಿ ಚಾಲನೆ ನೀಡಿದರು.

ಭಾರಿ ವಾಹನ ಚಾಲನಾ ಪರವಾನಗಿ (ಲೈಸನ್ಸ್) ಇದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ರೂಪಕಲಾ, 'ಚಾಲನಾ ಪರವಾನಗಿ ಇದೆ. ಆದರೆ, ಭಾರಿ ವಾಹನಗಳ ಲೈಸನ್ಸ್ ಇಲ್ಲ. ಮಹಿಳೆಯರನ್ನು ಕರೆದೊಯ್ಯುವ ಕ್ಷಣದಲ್ಲಿ ಸಣ್ಣ ತಪ್ಪಾಗಿರಬಹುದು. ತಪ್ಪಾಗಿದ್ದರೆ ತಿದ್ದಿಕೊಳ್ಳುತ್ತೇನೆ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಎಚ್ಚರ ವಹಿಸುತ್ತೇನೆ' ಎಂದರು.

ರಾಬರ್ಟ್‌ಸನ್‌ಪೇಟೆಯ ಕುವೆಂಪು ಬಸ್ ನಿಲ್ದಾಣದಿಂದ ಸುಮಾರು 100 ಮೀಟರ್ ದೂರ ಬಸ್ ಚಲಾಯಿಸಿದರು. ಪಕ್ಕದಲ್ಲೇ ನಿಂತಿದ್ದ ಬಸ್ ಚಾಲಕ ನೆರವಾದರು. ಸಾರಿಗೆ ಅಧಿಕಾರಿಗಳು, ಬಸ್‌ನಲ್ಲಿದ್ದ ಮಹಿಳಾ ಪ್ರಯಾಣಿಕರು, ರಸ್ತೆ ಬದಿ ನಿಂತಿದ್ದ ನೂರಾರು ಕಾರ್ಯಕರ್ತರು ಇದಕ್ಕೆ ಸಾಕ್ಷಿಯಾದರು.

ಕಾರ್ಯಕರ್ತರ ಒತ್ತಾಯದ ಮೇರೆಗೆ ಶಾಸಕಿ ಮತ್ತೊಂದು ಬಸ್ ಚಲಾಯಿಸಿದರು. ಆದರೆ, ಎರಡು ಬಾರಿ ಗೇರ್ ಸರಿಯಾಗಿ ಬೀಳದ ಕಾರಣ ಬಸ್ಸು ಹಿಮ್ಮುಖವಾಗಿ ಚಲಿಸಿತು. ಹಿಂಭಾಗದಲ್ಲಿದ್ದ ಖಾಸಗಿ ಬಸ್‌ಗೆ ಡಿಕ್ಕಿಯಾಗುವುದು ಸ್ವಲ್ಪದರಲ್ಲಿಯೇ ತಪ್ಪಿತು. ಸ್ಥಳದಲ್ಲಿದ್ದ ಪೊಲೀಸರು ಹಾಗೂ ಇತರ ಅಧಿಕಾರಿಗಳು ಇದರಿಂದ ಕಸಿವಿಸಿಗೆ ಒಳಗಾದರು. ನಂತರ ಶಾಸಕಿ ಬಸ್‌ನಲ್ಲಿ ಕುಳಿತು ಸ್ವಲ್ಪ ದೂರ ಪ್ರಯಾಣ ಮಾಡಿದರು.

ಬಸ್ ಚಾಲನೆ ಮಾಡಲು ಶಾಸಕಿಗೆ ಅನುಮತಿ ಕೊಟ್ಟಿದ್ದು ಯಾರು ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕೆಎಸ್‌ಆರ್‌ಟಿಸಿ ಡಿಪೊ ಅಧಿಕಾರಿಯೊಬ್ಬರು, 'ನಿಗದಿಪಡಿಸಿದ ಚಾಲಕ ಹೊರತುಪಡಿಸಿ ಬೇರೆ ಯಾರೂ ಸರ್ಕಾರಿ ಬಸ್ ಚಲಾಯಿಸುವಂತಿಲ್ಲ. ಆದರೆ, ಬಸ್ ಚಾಲನೆ ಮಾಡುವುದಾಗಿ ಶಾಸಕರೇ ಬಂದು ಕುಳಿತರೆ ನಾವೇನು ಮಾಡುವುದು? ಅದೃಷ್ಟವಶಾತ್ ಯಾವುದೇ ಸಮಸ್ಯೆ ಆಗಿಲ್ಲ' ಎಂದರು.



ಧಾರವಾಡ ಹೊಸ ಬಸ್ ನಿಲ್ದಾಣದಲ್ಲಿ 'ಶಕ್ತಿ' ಯೋಜನೆ ಚಾಲನೆ ಸಂದರ್ಭದಲ್ಲಿ ಧಾರವಾಡ–ಗೋಕಾಕ ಬಸ್ ಏರುವ ಮುನ್ನ ಮಹಿಳೆಯೊಬ್ಬರು ಬಸ್ಸಿನ ಮೆಟ್ಟಿಲುಗಳಿಗೆ ಶಿರ ಬಾಗಿ ನಮಸ್ಕರಿಸಿದರು
–ಬಿ.ಎಂ.ಕೇದಾರನಾಥ/ಪ್ರಜಾವಾಣಿ ಚಿತ್ರ

## ಕಂಡಕ್ಟರ್ ಆದ ಸಚಿವ ಮಹದೇವಪ್ಪ

**ಮೈಸೂರು:** ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಭಾನುವಾರ 'ಶಕ್ತಿ' ಯೋಜನೆಗೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮೈಸೂರು–ಎಚ್.ಡಿ. ಕೋಟೆ ನಡುವೆ ಸಂಚರಿಸಿದ ಬಸ್‌ಗೆ ಕೆಲಹೊತ್ತು ಕಂಡಕ್ಟರ್ ಆಗಿ ಕಾರ್ಯನಿರ್ವಹಿಸಿದರು.

ಮಹಿಳೆಯರಿಗೆ ಉಚಿತ ಪ್ರಯಾಣದ ಟಿಕೆಟ್ ನೀಡಿದರು. 'ಬಸ್ ಟಿಕೆಟ್ ಫ್ರೀ ಅಂತ ಕಾಲೇಜಿಗೆ ರಜೆ ಹಾಕಿ ಊರು ಸುತ್ತಲು ಹೋಗಬೇಡಿ. ರಜೆ ದಿನ ಬೇಕಾದರೆ ಪ್ರವಾಸ ಹೋಗಿ' ಎಂದು ವಿದ್ಯಾರ್ಥಿನಿ ಯರಿಗೆ ಕಿವಿಮಾತು ಹೇಳಿದರು. ಪ್ರಯಾಣಿಕರಿಗೆ ಗುಲಾಬಿ ಹೂವಿನ ಸ್ವಾಗತ ಕೋರಿ, ಸಿಹಿ ಹಂಚಲಾಯಿತು.

### ಫ್ಲೆಕ್ಸ್ ಗೊಂದಲ: 'ಶಕ್ತಿ' ವಿಳಂಬ!

**ರಾಮನಗರ:** 'ಶಕ್ತಿ' ಯೋಜನೆ ವೇದಿಕೆ ಫ್ಲೆಕ್ಸ್‌ನಲ್ಲಿ ಶಾಸಕ ಮತ್ತು ಸಂಸದರ ಭಾವಚಿತ್ರ ಇಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಆಕ್ಷೇಪ ಎತ್ತಿದ ಕಾರಣ ಅಧಿಕಾರಿಗಳು ಹೊಸ ಫ್ಲೆಕ್ಸ್ ಸಿದ್ಧಪಡಿಸಿ ತಂದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದರಿಂದ ಭಾನುವಾರ ಬೆಳಿಗ್ಗೆ 11.30ಕ್ಕೆ ಆರಂಭವಾಗಬೇಕಿದ್ದ ಕಾರ್ಯಕ್ರಮ ಮಧ್ಯಾಹ್ನ 1ಕ್ಕೆ ಆರಂಭವಾಯಿತು.

ನಗರದ ಬಸ್ ನಿಲ್ದಾಣದಲ್ಲಿ ಸಾರಿಗೆ ಇಲಾಖೆ 'ಶಕ್ತಿ' ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮ ಆಯೋಜಿಸಿತ್ತು. ಸಮಾರಂಭದ ವೇದಿಕೆಯಲ್ಲಿ ಹಾಕಿದ್ದ ಫ್ಲೆಕ್ಸ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಭಾವಚಿತ್ರ ಮಾತ್ರ ಇದ್ದವು. ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಮತ್ತು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಭಾವಚಿತ್ರ ಇರಲಿಲ್ಲ.

ಇದಕ್ಕೆ ಆಕ್ಷೇಪ ಎತ್ತಿದ ಕಾಂಗ್ರೆಸ್ ಮುಖಂಡರು ಸಾರಿಗೆ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಹೊಸ ಫ್ಲೆಕ್ಸ್ ಮಾಡಿಸಿಕೊಂಡು ತರುವವರೆಗೂ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಅದಕ್ಕೆ ಒಪ್ಪಿದ ಅಧಿಕಾರಿಗಳು, ಜಿಲ್ಲೆಯ ನಾಲ್ವರು ಶಾಸಕರು ಹಾಗೂ ಸಂಸದರ ಭಾವಚಿತ್ರವಿರುವ ಹೊಸ ಫ್ಲೆಕ್ಸ್ ಮಾಡಿಸಿಕೊಂಡು ಬಂದು ವೇದಿಕೆಯಲ್ಲಿ ಹಾಕಿದರು.

## ಅವ್ಯವಸ್ಥೆ

**ಬೀದರ್:** ಅಶಿಸ್ತು, ವಿಳಂಬದ ನಡುವೆ 'ಶಕ್ತಿ' ಯೋಜನೆಗೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಭಾನುವಾರ ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಚಾಲನೆ ನೀಡಿದರು.

ಮಧ್ಯಾಹ್ನ 1ಕ್ಕೆ ಕಾರ್ಯಕ್ರಮ ನಿಗದಿಯಾಗಿತ್ತು. ಸುಡುವ ಬಿಸಿಲಿನಲ್ಲೇ ಬಂದಿದ್ದ ಮಹಿಳೆಯರು ಕಾಯುತ್ತ ಕುಳಿತುಕೊಂಡರು. ಸಚಿವರು ಬರಲು ವಿಳಂಬವಾಗುತ್ತಿದ್ದಂತೆ ಜನರನ್ನು ಹಿಡಿದಿಟ್ಟುಕೊಳ್ಳಲು ಊಟ ವ್ಯವಸ್ಥೆ ಹಾಗೂ ಮನರಂಜನೆಯಾಗಿ ಸಂಗೀತ ಕಾರ್ಯಕ್ರಮವನ್ನೂ ತುರ್ತಾಗಿ ಏರ್ಪಡಿಸಲಾಯಿತು. ಮಧ್ಯಾಹ್ನ 3 ಗಂಟೆ ವೇಳೆಗೆ ಬೆಂಬಲಿಗರು, ಪಕ್ಷದ ಕಾರ್ಯಕರ್ತರೊಂದಿಗೆ ವೇದಿಕೆಗೆ ಬಂದ ಈಶ್ವರ ಖಂಡ್ರೆ ಕಾರ್ಯಕ್ರಮ ಉದ್ಘಾಟಿಸಿದರು. ವೇದಿಕೆಯ ಮುಂಭಾಗದಲ್ಲೆಲ್ಲಾ ಬೆಂಬಲಿಗರು, ಕಾರ್ಯಕರ್ತರೇ ಮುತ್ತಿಕೊಂಡಿದ್ದರು.

ಈ ವೇಳೆ ಕೆಲವರು ಈಶ್ವರ ಖಂಡ್ರೆ ಪರ ಜಯಘೋಷ ಹಾಕಿದರೆ, ಮತ್ತೆ ಕೆಲವರು ಸ್ಪರ್ಧೆಗೆ ಬಿದ್ದವರಂತೆ ಪೌರಾಡಳಿತ ಸಚಿವ ರಹೀಂ ಖಾನ್ ಪರ ಘೋಷಣೆ ಕೂಗಿದರು.

## ಕಾಂಗ್ರೆಸ್, ಬಿಜೆಪಿ ನಾಯಕರ ಜಟಾಪಟಿ

ಪ್ರಜಾವಾಣಿ ವಾರ್ತೆ

**ಜಮಖಂಡಿ (ಬಾಗಲಕೋಟೆ ಜಿಲ್ಲೆ):** ಕಾಂಗ್ರೆಸ್, ಬಿಜೆಪಿ ನಾಯಕರ ನಡುವೆ ಪಕ್ಷದ ಬಾವುಟಕ್ಕೆ ಸಂಬಂಧಿಸಿ ಭಾನುವಾರ ವಾಗ್ವಾದ ನಡೆಯಿತು. ಬಿಜೆಪಿ ಮುಖಂಡರು ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದರು.

ಬಿಜೆಪಿ ಶಾಸಕ ಜಗದೀಶ ಗುಡಗುಂಟಿ 'ಶಕ್ತಿ' ಯೋಜನೆ ಚಾಲನೆ ನೀಡಲು ನಿಲ್ದಾಣಕ್ಕೆ ಬಂದಿದ್ದರು. ಆಗ ಕಾಂಗ್ರೆಸ್‌ನ ಮಾಜಿ ಶಾಸಕ ಆನಂದ ನ್ಯಾಮಗೌಡ ಬೆಂಬಲಿಗರೊಂದಿಗೆ ಅಲ್ಲಿಗೆ ಬಂದರು. ಕಾಂಗ್ರೆಸ್ ಧ್ವಜ ಪ್ರದರ್ಶಿಸಿದ್ದಕ್ಕೆ ಬಿಜೆಪಿ ನಾಯಕರು ಆಕ್ಷೇಪ ವ್ಯಕ್ತಪಡಿಸಿದರು. ಆಗ ಕಾಂಗ್ರೆಸ್ ಬೆಂಬಲಿಗರು 'ಕಾಂಗ್ರೆಸ್ ಗೆ ಜೈ' ಎಂದು ಕೂಗಿದರೆ, ಬಿಜೆಪಿ ಬೆಂಬಲಿಗರು 'ಜೈಶ್ರೀರಾಮ' ಎಂದು ಕೂಗಿದರು.

**(ಬಳ್ಳಾರಿ ವರದಿ) ಕಮಲ ಚಿಹ್ನೆ– ಸಿಟ್ಟಾದ ಸಚಿವ:** ಬಸ್‌ನ ನಾಮಫಲಕ ಜಾಗಕ್ಕೆ ಬಿಜೆಪಿ ಚಿಹ್ನೆ ಅಂಟಿಸಿದ್ದನ್ನು ಕಂಡು ಪರಿಶಿಷ್ಟ ಪಂಗಡ ಕಲ್ಯಾಣ, ಸಚಿವ ಬಿ. ನಾಗೇಂದ್ರ ಅಧಿಕಾರಿಗಳ ವಿರುದ್ಧ ಸಿಟ್ಟಾದರು.

ಬಳ್ಳಾರಿಯ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಸಾರಿಗೆ ಇಲಾಖೆ ವತಿಯಿಂದ ಭಾನುವಾರ ಏರ್ಪಡಿಸಿದ್ದ ಮಹಿಳೆಯರ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವ 'ಶಕ್ತಿ' ಯೋಜನೆ ಉದ್ಘಾಟನೆ ವೇಳೆ ಹೊಸ ಬಸ್ ಒಂದರ ನಾಮಫಲಕ ಸ್ಥಳದಲ್ಲಿ ಕಮಲದ ಚಿಹ್ನೆ ಅಂಟಿಸಿರುವುದನ್ನು ಕಂಡು ಸಚಿವರು ಆಕ್ಷೇಪಿಸಿದರು.

ಸಚಿವರ ಸಿಟ್ಟಿಗೆ ತಬ್ಬಿಬ್ಬಾದ ಸಾರಿಗೆ ಅಧಿಕಾರಿಗಳು ಲಗುಬಗೆಯಿಂದ ಅದನ್ನು ತೆರವುಗೊಳಿಸಿದರು. ಬಳಿಕವಷ್ಟೇ ಸಚಿವರು ಆ ಬಸ್‌ನ ಓಡಾಟಕ್ಕೆ ಚಾಲನೆ ನೀಡಿದರು.

**(ರಬಕವಿ ಬನಹಟ್ಟಿ ವರದಿ) ಬಸ್‌ನಲ್ಲಿ ಪುರುಷರೇ ಹೆಚ್ಚು:** ಮಹಿಳೆಯರ ಉಚಿತ ಪ್ರಯಾಣಕ್ಕೆ ಚಾಲನೆ ನೀಡುವ 'ಶಕ್ತಿ' ಯೋಜನೆ ಉದ್ಘಾಟನಾ ಸಂದರ್ಭದಲ್ಲಿ ಬಸ್‌ನಲ್ಲಿ ಮಹಿಳೆಯರಿಗಿಂತ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಶಾಸಕ ಸಿದ್ದು ಸವದಿ ಚಾಲನೆ ನೀಡಿದರು. ನಂತರ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಹಸಿರು ನಿಶಾನೆ ತೋರಿಸಿದಾಗ ಕಾರ್ಯಕರ್ತರು ಅವರನ್ನು ಮೇಲಕ್ಕೆ ಎತ್ತಿ ಘೋಷಣೆಗಳನ್ನು ಕೂಗಿದರು. ಬಳಿಕ ಅವರು ಬಸ್ ಏರಿ ಚಾಲಕನ ಸ್ಥಾನದಲ್ಲಿ ಕುಳಿತುಕೊಂಡರು. ಈ ವೇಳೆ ಬಸ್‌ನಲ್ಲಿ ಮಹಿಳೆಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರೇ ಏರಿದ್ದರಿಂದ ಮಹಿಳಾ ಪ್ರಯಾಣಿಕರು ಬಸ್ ಹತ್ತಲು ತೊಂದರೆ ಪಟ್ಟರು.

**(ನರಗುಂದ ವರದಿ) ವೇದಿಕೆಯಲ್ಲಿ ಒಬ್ಬರೇ...:** : ಪಟ್ಟಣದ ಬಸ್ ನಿಲ್ದಾಣದ ಆವರಣದಲ್ಲಿ'ಶಕ್ತಿ' ಯೋಜನೆ ಜಾರಿಗೆ ಜನ ಪ್ರತಿನಿಧಿಗಳ ಗೈರು ಹಾಜರಿಯಲ್ಲಿ ಕೆಎಸ್‌ಆರ್‌ಟಿಸಿ ನರಗುಂದ ವ್ಯವಸ್ಥಾಪಕ ಪ್ರಶಾಂತ ಪಾನಬುಡೆ ಏಕಾಂಗಿಯಾಗಿ ಚಾಲನೆ ನೀಡಿದರು. ಇವರಿಗೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಸಾಥ್ ನೀಡಿದರು. ವೇದಿಕೆಯಲ್ಲೂ ಇವರೊಬ್ಬರೇ ಇದ್ದರು. ಅಧ್ಯಕ್ಷತೆ ವಹಿಸಬೇಕಾದ್ದ ಶಾಸಕ ಸಿ.ಸಿ.ಪಾಟೀಲ್ ಗೈರಾಗಿದ್ದರು. ಮಾಜಿ ಸಚಿವ ಬಿ.ಆರ್.ಯಾವಗಲ್ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪ್ರೇಕ್ಷಕರಾಗಿ ಕಾರ್ಯಕ್ರಮ ವೀಕ್ಷಿಸಿದರು.

## 30 ವರ್ಷ ಬಳಿಕ ಶಾಸಕಿ ಬಸ್ ಪ್ರಯಾಣ

**ಹರಪನಹಳ್ಳಿ (ವಿಜಯನಗರ ಜಿಲ್ಲೆ):** ಪಟ್ಟಣದ ಕಲ್ಯಾಣ ಕರ್ನಾಟಕ ಸಾರಿಗೆ ಘಟಕದ ಬಸ್ ನಿಲ್ದಾಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಶಕ್ತಿ' ಯೋಜನೆಗೆ ಚಾಲನೆ ನೀಡಿದ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಹರಪನಹಳ್ಳಿಯಿಂದ ಹೂವಿನ ಹಡಗಲಿ ತಾಲ್ಲೂಕು ಇಟ್ಟಿಗಿ ಗ್ರಾಮದವರೆಗೂ ಸಾರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಮಾಡಿದರು.

'30 ವರ್ಷದ ಬಳಿಕ ಮೊದಲ ಬಾರಿ ಸರ್ಕಾರದ ಸಾರಿಗೆ ಬಸ್ ನಲ್ಲಿ ಪ್ರಯಾಣ ಮಾಡಿದೆ. ತುಂಬಾ ಖುಷಿಯಾಯಿತು. ಶಕ್ತಿ ಯೋಜನೆಯಿಂದ ರಾಜ್ಯದ ಮಹಿಳೆಯರಿಗೆ ಸ್ವಾತಂತ್ರ್ಯ ಸಿಕ್ಕಂತಾಗಿದೆ' ಎಂದು ಹರ್ಷ ವ್ಯಕ್ತಪಡಿಸಿದರು.



ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರು ರಾಜ್ಯ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸಿದರು

**ಮನೆ ಕೆಲಸಕ್ಕಾಗಿ ಬೇರೆ ಬೇರೆ ಪ್ರದೇಶಗಳಿಗೆ ಹೋಗಲು ಪ್ರತಿ ದಿನ ₹60 ರಿಂದ ₹70 ಖರ್ಚು ಮಾಡಿ ಬಸ್‌ನಲ್ಲಿ ಪ್ರಯಾಣಿಸಬೇಕಿತ್ತು. ಈಗ ರಾಜ್ಯ ಸರ್ಕಾರ ಉಚಿತ ಬಸ್ ಸೇವೆ ಕಲ್ಪಿಸಿದ್ದರಿಂದ ತುಂಬಾ ಖುಷಿಯಾಗಿದೆ. ಸಾಕಷ್ಟು ಉಳಿತಾಯವೂ ಆಗುತ್ತದೆ.**
**ರಾಣಿ,** ಮೈಸೂರು ರಸ್ತೆ ನಿವಾಸಿ, ಬೆಂಗಳೂರು

**ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳ ಬಗ್ಗೆ ರಾಜ್ಯದ ಎಲ್ಲ ಬಡವರಿಗೆ ಖುಷಿ ಇದೆ. ಆದರೆ, ಮಾಧ್ಯಮದವರಿಗೆ ಮಾತ್ರ ನೆಮ್ಮದಿಯೇ ಇಲ್ಲ. ನಾವು ಯೋಜನೆ ಜಾರಿ ಮಾಡಬಾರದೇ? ಏನು ಮಾಡಬೇಕು ಹೇಳಿ? ಮಾಧ್ಯಮದವರು ಮಗುವನ್ನೂ ಚಿವುಟುತ್ತೀರಿ, ತೊಟ್ಟಿಲನ್ನೂ ತೂಗುತ್ತೀರಿ.**
**ಬೈರತಿ ಸುರೇಶ್,** ನಗರಾಭಿವೃದ್ಧಿ ಸಚಿವ

**ನಾನು ದಿಢೀರ್ ಆಗಿ ಬಸ್‌ಗಳಲ್ಲಿ ಪ್ರಯಾಣಿಸಿ ಪರಿಶೀಲಿಸುವೆ. ಮಹಿಳೆಯರ ಉಚಿತ ಪ್ರಯಾಣಕ್ಕೆ ಅಡ್ಡಿಮಾಡುವ ಪ್ರಕರಣ ಕಂಡು ಬಂದರೆ ಅಂತಹ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು**
**ಎನ್.ಎಸ್.ಭೋಸರಾಜು,** ಕೊಡಗು ಜಿಲ್ಲಾ ಉಸ್ತುವಾರಿ ಸಚಿವ

**ಸತ್ಯಮುಖಿಗಳಾಗಬೇಕಾದ ಕಾಲದಲ್ಲಿ ಸಮಾಜಮುಖಿಗಳಾಗಬೇಕು ಎನ್ನುತ್ತಿದ್ದೇವೆ. ಸಮಾಜಮುಖಿ ಎಂದರೆ ಗ್ಯಾರಂಟಿಗಳನ್ನು ನೀಡುವುದಲ್ಲ. ಇದು ಮೂರ್ಖರ ಆಡಳಿತ**
**ನಿರ್ಭಯಾನಂದ ಸರಸ್ವತಿ ಸ್ವಾಮೀಜಿ,** ಗದಗ, ವಿಜಯಪುರದ ರಾಮಕೃಷ್ಣ–ವಿವೇಕಾನಂದ ಆಶ್ರಮ

## ಲೈಂಗಿಕ ಕಿರುಕುಳ ಶಾಲಾ ಮುಖ್ಯಸ್ಥನ ಬಂಧನ

ಪ್ರಜಾವಾಣಿ ವಾರ್ತೆ

**ಸಾಗರ:** ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಸಂಬಂಧ ಇಲ್ಲಿನ ವನಶ್ರೀ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಎಚ್.ಪಿ. ಮಂಜಪ್ಪ (ವನಶ್ರೀ ಮಂಜಪ್ಪ) ಅವರನ್ನು ಪೊಲೀಸರು ಪೋಕ್ಸೊ ಪ್ರಕರಣದಡಿ ಭಾನುವಾರ ಬಂಧಿಸಿದ್ದಾರೆ.

ವನಶ್ರೀ ವಸತಿ ವಿದ್ಯಾಲಯದಲ್ಲಿ ವಿದ್ಯಾರ್ಥಿನಿಯೊಬ್ಬಳು ಜೂನ್ 8ರಂದು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಳು. ತಪ್ಪಿತಸ್ಥರನ್ನು ಬಂಧಿಸುವಂತೆ ಒತ್ತಾಯಿಸಿ ಬಾಲಕಿಯ ಪಾಲಕರು ಹಾಗೂ ಸಾರ್ವಜನಿಕರು ಶನಿವಾರ ವಸತಿ ಶಾಲೆಯ ಎದುರು ಪ್ರತಿಭಟನೆ ನಡೆಸಿದ್ದರು.

'ಮಂಜಪ್ಪ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಇದೇ ಸಂದರ್ಭ ಕೆಲವು ವಿದ್ಯಾರ್ಥಿನಿಯರು ಆರೋಪಿಸಿದ್ದರು. ಹೀಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರ ಸಮಕ್ಷಮ ದೂರು ದಾಖಲಿಸಿಕೊಂಡ ಪೊಲೀಸರು, ಶನಿವಾರವೇ ಮಂಜಪ್ಪ ಅವರನ್ನು ವಶಕ್ಕೆ ಪಡೆದಿದ್ದರು.

ಶನಿವಾರ ತಡರಾತ್ರಿ ಮಂಜಪ್ಪ ಮೇಲೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಜಾತಿ ನಿಂದನೆ ಆರೋಪದಡಿಯೂ ಪ್ರಕರಣ ದಾಖಲಾಗಿದೆ. ಭಾನುವಾರ ಅವರನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಶಿವಮೊಗ್ಗದ ಪೋಕ್ಸೊ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

## 'ಶಕ್ತಿ' ಇನ್ನು 'ಗ್ಯಾರಂಟಿ'

ಒಂದನೇ ಪುಟದಿಂದ..

'ಐದೂ ಗ್ಯಾರಂಟಿ ಯೋಜನೆಗಳ ಜಾರಿಗೆ ಸುಮಾರು ₹ 59 ಸಾವಿರ ಕೋಟಿ ಬೇಕಿದೆ. ಏಪ್ರಿಲ್, ಮೇ ತಿಂಗಳು ಕಳೆದಿದೆ. ಉಳಿದ ತಿಂಗಳಿಗೆ ₹ 40 ಸಾವಿರ ಕೋಟಿಗೂ ಹೆಚ್ಚು ಬೇಕಿದೆ. ಜುಲೈನಿಂದ 'ಅನ್ನಭಾಗ್ಯ' ಮತ್ತು 'ಗೃಹ ಜ್ಯೋತಿ', ಆಗಸ್ಟ್ 16ರಿಂದ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡಲಾಗುವುದು. ಈ ಯೋಜನೆಗಳಿಂದ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ. ಕೊಟ್ಟ ಮಾತಿನಂತೆ ನಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಗೇಲಿ ಮಾಡಲಾಗುತ್ತಿದೆ. ಕುಹಕ, ಗೇಲಿಗೆ ಸೊಪ್ಪು ಹಾಕುವುದಿಲ್ಲ. ಕೊಟ್ಟ ಮಾತಿನಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಎನ್ನುವುದು ಮುಖ್ಯವಲ್ಲ. ಯಾರಿಗೆ ನೀಡುತ್ತಿದ್ದೇವೆ ಎನ್ನುವುದು ಮುಖ್ಯ' ಎಂದರು.

ಬಳಿಕ ವಿಧಾನಸೌಧದಿಂದ ಮೆಜೆಸ್ಟಿಕ್‌ವರೆಗೆ (ಕೆಂಪೇಗೌಡ ಬಸ್ ನಿಲ್ದಾಣ) ಬಿಎಂಟಿಸಿ ಬಸ್ಸಿನಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಾರಿಗೆ ಸಚಿವರು ಪ್ರಯಾಣ ಮಾಡಿದರು. ಬಸ್ ಕಂಡಕ್ಟರ್ ನಂದಿನಿ ಅವರಿಂದ ಉಚಿತ ಟಿಕೆಟ್ ಪಡೆದ ಮುಖ್ಯಮಂತ್ರಿ, ಅದನ್ನು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ನೀಡಿದರು. ವಿದ್ಯುನ್ಮಾನ ಟಿಕೆಟ್ ಯಂತ್ರದಲ್ಲಿ (ಇಟಿಎಂ) ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ವಿತರಣೆಗೆ ಮಾರ್ಪಾಡು ಮಾಡಲಾಗಿದೆ. ಇದರಲ್ಲಿ ಯಾವುದೇ ಗೊಂದಲ ಇಲ್ಲ ನಂದಿನಿ ತಿಳಿಸಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕ ರಿಜ್ವಾನ್ ಅರ್ಷದ್ ಕೂಡಾ ಬಸ್ಸಿನಲ್ಲಿದ್ದರು.

ಮೆಜೆಸ್ಟಿಕ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಚಾಲನೆ ನೀಡಿದರು. ಮಹಿಳೆಯರು ಖುಷಿಯಿಂದ ಬಸ್ ಏರಿ ತಮ್ಮ ಪ್ರದೇಶಗಳಿಗೆ ಪ್ರಯಾಣಿಸಿದರು. ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ಜೊತೆ ಗುಲಾಬಿ ಹೂವು, ಸಿಹಿ ನೀಡಲಾಯಿತು.

**ಹೆಣ್ಣು 'ಶಕ್ತಿ'ಯ ಪ್ರತಿರೂಪವೆಂದು ಈ ಯೋಜನೆ ಜಾರಿಗೆ ತಂದಿದ್ದೇವೆ. ವಿರೋಧ ಪಕ್ಷಗಳ ಟೀಕೆಗಳಿಗೆ ಉತ್ತರಿಸುವುದಿಲ್ಲ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ.**
**ಡಿ.ಕೆ. ಶಿವಕುಮಾರ್,** ಡಿ.ಸಿ.ಎಂ

**'ಶಕ್ತಿ' ಯೋಜನೆಯಡಿ ರಾಜ್ಯದ ಗಡಿಯಿಂದ 20 ಕಿ.ಮೀ. ಒಳಗಿನ ವ್ಯಾಪ್ತಿವರೆಗೂ ಮಹಿಳೆಯರು ರಾಜ್ಯದ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು**
**ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

## ಹಳೆ ಕುರುಕಲು ತಿನಿಸು ತಿಂದು 45ಕ್ಕೂ ಹೆಚ್ಚು ಕುರಿಗಳ ಸಾವು

ಪ್ರಜಾವಾಣಿ ವಾರ್ತೆ

**ರಾಣೆಬೆನ್ನೂರು (ಹಾವೇರಿ ಜಿಲ್ಲೆ):** ಅವಧಿ ಮೀರಿದ್ದ ಕುರುಕಲು ತಿನಿಸುಗಳನ್ನು ತಿಂದ 45ಕ್ಕೂ ಹೆಚ್ಚು ಕುರಿಗಳು ಶನಿವಾರ ತಡರಾತ್ರಿ ಸಾವನ್ನಪ್ಪಿದ್ದು 10ಕ್ಕೂ ಹೆಚ್ಚು ಕುರಿಗಳು ಅಸ್ವಸ್ಥಗೊಂಡಿವೆ.

ತಾಲ್ಲೂಕಿನ ಮಾಗೋಡ ಬೈಪಾಸ್ ರಸ್ತೆ ಬದಿಯಲ್ಲಿ ಯಾರೋ ಕಿಡಿಗೇಡಿಗಳು ಮೂಟೆಗಟ್ಟಲೆ ಈ ತಿನಿಸುಗಳನ್ನು ಚೆಲ್ಲಿದ್ದು, ಅವುಗಳನ್ನು ತಿಂದ ಕುರಿಗಳು ತೀವ್ರ ಅಸ್ವಸ್ಥಗೊಂಡು ಒಂದರ ಬೆನ್ನಿಗೊಂದು ಸಾವನ್ನಪ್ಪಿವೆ ಎಂದು ಕುರಿಗಾಹಿಗಳು ಭಾನುವಾರ ತಿಳಿಸಿದ್ದಾರೆ.

ಮಾಗೋಡದ ಕುರಿಗಾಯಿ ಸೋಮಪ್ಪ ಕುರುವತ್ತಿ ಎಂಬವರು 250ಕ್ಕೂ ಹೆಚ್ಚು ಕುರಿಗಳನ್ನು ಮೇಯಿಸಲು ಹೋದಾಗ ಈ ಘಟನೆ ನಡೆದಿದೆ. ಕೂಡಲೇ ಪಶು ಆಸ್ಪತ್ರೆಯ ವೈದ್ಯರ ತಂಡ ಗ್ರಾಮಕ್ಕೆ ತೆರಳಿ ತಪಾಸಣೆ ಮಾಡಿದೆ. ಹಲಗೇರಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಕುರಿಗಾಹಿಗಳ ಪ್ರತಿಭಟನೆ:** ಬೈಪಾಸ್ ರಸ್ತೆಯಲ್ಲಿ ಇವುಗಳನ್ನು ಮೂಟೆಗಟ್ಟಲೆ ಚೆಲ್ಲಿದವರ ವಿರುದ್ಧ ತಾಲ್ಲೂಕು ಕುರುಬರ ಸಂಘದ ಪದಾಧಿಕಾರಿಗಳು, ಕುರಿಗಾಯಿಗಳು ಭಾನುವಾರ ಮಾಗೋಡ ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು. ಈ ಕಿಡಿಗೇಡಿಗಳನ್ನು ಪತ್ತೆ ಮಾಡಿ ಅವರ ವಿರುದ್ಧ ದೂರು ದಾಖಲಿಸಿ ಕುರಿ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ತಹಶೀಲ್ದಾರ್ ಕೆ.ಗುರುಬಸವರಾಜ ಅವರಿಗೆ ಮನವಿ ಸಲ್ಲಿಸಿದರು.

**ಅವಧಿ ಮೀರಿ ವಿಷಪೂರಿತವಾಗಿದ್ದ ಆಹಾರ ತಿಂದು ಕುರಿಗಳು ಸಾವನ್ನಪ್ಪಿವೆ. ಉಳಿದ ಕುರಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ**
**ಡಾ. ರಾಘವೇಂದ್ರ ಭಗವಂತಗೌಡ್ರ,** ಪಶುವೈದ್ಯ, ರಾಣೆಬೆನ್ನೂರು

ಕರ್ನಾಟಕ ಸಹಕಾರಿ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳ ಹಾವೇರಿ, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ ಜಿಲ್ಲಾ ವಿಭಾಗದ ನಿರ್ದೇಶಕ ಜೆ. ಜಯಪ್ಪ ಹಾಗೂ ಶಾಸಕ ಪ್ರಕಾಶ ಕೋಳಿವಾಡ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕುರಿ ಮಾಲೀಕರಿಗೆ ಸೂಕ್ತ ಪರಿಹಾರ ಕೊಡಿಸುವುದಾಗಿ ತಿಳಿಸಿದರು.

## ಮರುಜೀವ ಪಡೆದ 'ಕುಸುಮಾಲೆ'

ಒಂದನೇ ಪುಟದಿಂದ...

ಕುಸುಮಾಲೆ ಆರೈಕೆಯ ಸಲುವಾಗಿ ಸೋಮು ಕಳೆದ ಹತ್ತು ತಿಂಗಳಲ್ಲಿ ಅದೆಷ್ಟೋ ರಾತ್ರಿಗಳು ತಮ್ಮ ಮನೆಗೆ ಹೋಗಿಲ್ಲ. ಆರಂಭದ ದಿನಗಳಲ್ಲಿ ಎರಡು ಗಂಟೆಗೊಮ್ಮೆ ಹಾಲು, ಆಗಾಗ್ಗೆ ಪೌಷ್ಟಿಕ ಆಹಾರ, ಹಣ್ಣು ನೀಡುವುದು, ಮೈ ಸದಾ ಬೆಚ್ಚಗಿಡಲು ಅಗತ್ಯವಾದಷ್ಟು ಶಾಖ... ನಿತ್ಯ ಸ್ನಾನ, ಎಲ್ಲಕ್ಕಿಂತ ಮಿಗಿಲಾದ ಬೆಚ್ಚನೆಯ ಪ್ರೀತಿ–ವಾತ್ಸಲ್ಯ.... ಈ ಎಲ್ಲದರಿಂದ ಕುಸುಮಾಲೆ ಆರೋಗ್ಯದಿಂದ ಬೆಳೆಯತೊಡಗಿದ್ದಾಳೆ.

ಕೇವಲ ಕುಸುಮಾಲೆ ಮಾತ್ರವಲ್ಲ, ಹಿಂದೆಯೂ ಅನೇಕ ಆನೆಮರಿಗಳನ್ನೂ ಸೋಮಶೇಖರ್ ಪಾಲನೆ ಮಾಡಿದ್ದಾರೆ. ಚಿರತೆ ಮೊದಲಾದ ಮರಿಗಳನ್ನೂ ಪೋಷಿಸಿದ್ದಾರೆ. ಅವರ ಈ ಸೇವೆಗೆ ಅಧಿಕಾರಿಗಳ ಮಾರ್ಗದರ್ಶನವೂ ಇದೆ. 'ಕೆಲಹೊತ್ತು ಅವಳ ಕಣ್ಣಿಗೆ ಕಾಣದಿದ್ದರೆ ಚಡಪಡಿಸುತ್ತಾಳೆ. ಎಲ್ಲಿ ಹೋದರೂ ಪಕ್ಕದಲ್ಲೇ ಇರುತ್ತಾಳೆ. ಇವಳ ಒಡನಾಟ ಯಾವ ಮಕ್ಕಳಿಗೂ ಕಮ್ಮಿ ಇಲ್ಲ' ಎನ್ನುತ್ತಾರೆ ಸೋಮು.

'ಆನೆ ಮರಿಯನ್ನು ಸಾಕುವುದು ಸವಾಲಿನ ಕೆಲಸ. ಕುಸುಮಾಲೆ ನಮಗೆ ಸಿಕ್ಕಾಗ ಆಕೆ ಬದುಕಬಲ್ಲಳು ಎಂಬ ಭರವಸೆ ಇರಲಿಲ್ಲ. ಸೋಮುನಂತಹ ವ್ಯಕ್ತಿಯ ಕಾಳಜಿಯಿಂದಾಗಿ ಅದಕ್ಕೆ ಮರುಜೀವ ಬಂದಿದೆ' ಎನ್ನುತ್ತಾರೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ. ರವಿ.

ಈ ಪುನರ್ವಸತಿ ಕೇಂದ್ರವು ಕುಸುಮಾಲೆಯಂತೆಯೇ ಅನಾಥವಾದ, ಕಾಡಿನಲ್ಲಿ ಸೆರೆ ಸಿಕ್ಕ ಇತರ ಪ್ರಾಣಿಗಳನ್ನು ಪಾಲನೆ ಮಾಡುತ್ತಿದೆ. ಒಟ್ಟು 130 ಎಕರೆ ವಿಸ್ತೀರ್ಣದಲ್ಲಿರುವ ಕೇಂದ್ರದಲ್ಲಿ ನಾಲ್ಕು ಆನೆ, ಎಂಟು ಹುಲಿ, ಹತ್ತಕ್ಕೂ ಹೆಚ್ಚು ಚಿರತೆಗಳ ಜೊತೆಗೆ ಕರಡಿ, ಮಂಗಗಳು ಮೊದಲಾದ ಪ್ರಾಣಿಗಳು ಸದ್ಯ ಆಶ್ರಯ ಪಡೆದುಕೊಂಡಿವೆ.

ರಾಜ್ಯದಲ್ಲಿ 2011ರಿಂದ 2021ರವರೆಗೆ 812 ಮಂದಿ ಮೃತ; ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾಹಿತಿ

# ಸಿಡಿಲಾಘಾತವೇ ದೊಡ್ಡ ಹಂತಕ

ಪ್ರಜಾವಾಣಿ ವಾರ್ತೆ

**ಮೈಸೂರು:** ರಾಜ್ಯದಲ್ಲಿ ಸಂಭವಿಸುತ್ತಿರುವ ಪ್ರಾಕೃತಿಕ ವಿಕೋಪಗಳಲ್ಲಿ ಸಿಡಿಲು ಹೆಚ್ಚಿನ ಪ್ರಾಣಗಳನ್ನು ಬಲಿ ಪಡೆಯುತ್ತಿದೆ. 2011ರಿಂದ 2021ರವರೆಗಿನ ಅವಧಿಯಲ್ಲಿ 812 ಜನರು ಸಿಡಿಲು ಬಡಿದು ಮೃತಪಟ್ಟಿದ್ದಾರೆ ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರದ (ಕೆಎಸ್‌ಡಿಎಂಎ) ದತ್ತಾಂಶಗಳು ತಿಳಿಸುತ್ತದೆ. ಈ ವರ್ಷದ ಜನವರಿಯಿಂದ ಜೂನ್ ಮೊದಲ ವಾರದವರೆಗೆ 33 ಮಂದಿ ಮೃತಪಟ್ಟಿದ್ದಾರೆ. ಜಾನುವಾರುಗಳು ಕೂಡ ಸಾವಿಗೀಡಾಗುತ್ತಿರುವುದು ವರದಿಯಾಗುತ್ತಲೇ ಇದೆ.

ಕೆಎಸ್‌ಡಿಎಂಎ ಸಿದ್ಧಪಡಿಸಿರುವ ಕ್ರಿಯಾಯೋಜನೆಯ ಮಾಹಿತಿಯ ಪ್ರಕಾರ, ಸಿಡಿಲು ದೊಡ್ಡ 'ಹಂತಕ' ಆಗಿ ಕಾಡುತ್ತಿದೆ. ಸಿಡಿಲಾಘಾತದ ಬಗ್ಗೆ ಜನರಲ್ಲಿ ಜಾಗೃತಿ ಕೊರತೆ ಇರುವುದೂ ಕಂಡುಬಂದಿದೆ. ಮುಂಗಾರು ಹಂಗಾಮು ನಿರ್ವಹಣೆಯ ಸಿದ್ಧತೆ ಜೊತೆಗೆ, ರಕ್ಷಿಸಿಕೊಳ್ಳುವುದು ಹೇಗೆ ಎಂಬ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಕೆಎಸ್‌ಡಿಎಂಎ ಜಿಲ್ಲಾಡಳಿತಗಳಿಗೆ ಸಲಹೆ ನೀಡಿದೆ.



'ದೇಶದಲ್ಲಿ ಪ್ರತಿ ವರ್ಷ ಸರಾಸರಿ 2,500 ಮಂದಿ ಸಿಡಿಲು ಬಡಿದು ಸಾವಿಗೀಡಾಗುತ್ತಿರುವುದು ವರದಿಯಾಗುತ್ತಿದೆ. ಇದನ್ನು ತಡೆಯುವುದಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಜಿಲ್ಲಾಡಳಿತಗಳಿಗೆ ನೀಡಲಾಗಿದೆ. ಏನು ಮಾಡಬೇಕು ಹಾಗೂ ಏನು ಮಾಡಬಾರದು ಎನ್ನುವುದನ್ನು ಪಟ್ಟಿ ಮಾಡಿ ತಿಳಿಸಲಾಗಿದೆ. ಸಿಡಿಲಿನಿಂದ ಪ್ರಾಣ ಹಾನಿಯನ್ನು ಶೂನ್ಯಕ್ಕೆ ತರುವುದಕ್ಕೆ ಎಲ್ಲರಲ್ಲೂ ಜಾಗೃತಿ ಮೂಡಬೇಕಾಗುತ್ತದೆ. ಮಾಹಿತಿ, ಸಂವಹನ ಹಾಗೂ ಶಿಕ್ಷಣ ಕಾರ್ಯಕ್ರಮಗಳು ಹೆಚ್ಚಾಗಬೇಕಾಗುತ್ತದೆ' ಎಂದು ಕೆಎಸ್‌ಡಿಎಂಎ ಆಯುಕ್ತ ಡಾ.ಮನೋಜ್ ರಾಜನ್ 'ಪ್ರಜಾವಾಣಿ'ಗೆ ತಿಳಿಸಿದರು.

**ಸಿಡಿಲಿನಿಂದ ಸಾವಿಗೀಡಾದವರ ವಿವರ**

| ವರ್ಷ | ಸಂಖ್ಯೆ |
|---|---|
| 2011 | 37 |
| 2012 | 33 |
| 2013 | 38 |
| 2014 | 79 |
| 2015 | 72 |
| 2016 | 59 |
| 2017 | 96 |
| 2018 | 118 |
| 2019 | 101 |
| 2020 | 79 |
| 2021 | 100 |

(ಆಧಾರ: ಕೆಎಸ್‌ಡಿಎಂಎ ಕ್ರಿಯಾಯೋಜನೆ ವರದಿ)

'ಅಂಕಿ-ಅಂಶಗಳನ್ನು ಗಮನಿಸಿದಾಗ, 2018, 2019 ಹಾಗೂ 2021ರಲ್ಲಿ ಜಾಸ್ತಿ ಸಾವು ವರದಿಯಾಗಿದೆ. ಅತಿವೃಷ್ಟಿ ಹಾಗೂ ನೆರೆ ಹೆಚ್ಚಾಗಿರುವ ಮತ್ತು ಸಿಡಿಲು ಹೆಚ್ಚಾಗಿ ಉಂಟಾಗಿರುವ 2 ಸಾವಿರ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ವಿಪತ್ತು ನಿರ್ವಹಣಾ ಯೋಜನೆ ತಯಾರಿಸಲಾಗಿದೆ. ಅದರಂತೆ ಕಾರ್ಯನಿರ್ವಹಿಸುವಂತೆಯೂ ತಿಳಿಸಲಾಗಿದೆ.

## ಮುನ್ನೆಚ್ಚರಿಕೆ, ರಕ್ಷಣೆ ಹೇಗೆ?

- ಗುಡುಗು-ಮಿಂಚು ಬರುವ ಮುನ್ಸೂಚನೆ ಸಿಗುತ್ತಿದ್ದಂತೆಯೇ ನೀವು ಬಯಲಿನಲ್ಲಿದ್ದರೆ ತಕ್ಷಣವೇ ಇರುವುದರಲ್ಲಿ ತಗ್ಗು ಪ್ರದೇಶಕ್ಕೆ ಹೋಗಿ ಕುಳಿತುಕೊಳ್ಳಿ, ನಿಲ್ಲಬೇಡಿ
- ತಗ್ಗು ಪ್ರದೇಶ ಇಲ್ಲದೆ ಬಯಲಿನಲ್ಲೇ ಇರಬೇಕಾದರೆ ತಲೆಯನ್ನು ಮೊಣಕಾಲುಗಳ ನಡುವೆ ಇಟ್ಟುಕೊಳ್ಳಿ, ಇದು ಮಿಂಚಿನಿಂದ ಮಿದುಳಿಗೂ, ಹೃದಯಕ್ಕೂ ಆಗುವ ಹಾನಿಯನ್ನು ತಪ್ಪಿಸುತ್ತದೆ
- ಮರಗಳಿದ್ದ ಪ್ರದೇಶದಲ್ಲಿ ನೀವಿದ್ದರೆ ಬೇಗನೆ ಹೊರಬರುವುದು ಒಳ್ಳೆಯದು. ಏಕೆಂದರೆ ಸಿಡಿಲು ಮೋಡದಿಂದ ಭೂಮಿಗೆ ಹರಿಯಲು ಮರದಂತಹ ಹಸಿ ಅಥವಾ ಒದ್ದೆ ವಸ್ತುವನ್ನೇ ಆರಿಸಿಕೊಳ್ಳುತ್ತದೆ
- ಎತ್ತರದ ಗುಡ್ಡದ ಮೇಲಿದ್ದರೆ ತಗ್ಗಿಗೆ ಇಳಿಯಿರಿ. ಕುರಿ ಮಂದೆ ಅಥವಾ ಜಾನುವಾರುಗಳ ಮಧ್ಯ ನಿಂತಿದ್ದರೆ ಅವುಗಳ ಮಧ್ಯದಲ್ಲಿ ಬಗ್ಗಿ ಕುಳಿತುಕೊಳ್ಳಿ
- ನೀರಿನಲ್ಲಿದ್ದರೆ ತಕ್ಷಣ ಹೊರಬನ್ನಿ.
- ವಿದ್ಯುತ್ ಕಂಬ, ಟವರ್‌ಗಳು ಹಾಗೂ ಟ್ರಾನ್ಸ್‌ಫಾರ್ಮರ್ ಮುಂತಾದವುಗಳ ಬಳಿ ಇರಬೇಡಿ
- ತಂತಿಬೇಲಿ, ಬಟ್ಟೆ ಒಣಹಾಕುವ ತಂತಿಗಳಿಂದಲೂ ದೂರವಿರಿ.
- ಮನೆಯ ಕಿಟಕಿಯ ಬಳಿಗಿಂತ ಮನೆಯ ಮಧ್ಯದಲ್ಲಿರುವುದು ಸುರಕ್ಷಿತ
- ಗುಡುಗು-ಸಿಡಿಲಿನ ಸಂದರ್ಭದಲ್ಲಿ ಫೋನ್‌ನಲ್ಲಿ ಮಾತನಾಡಬೇಡಿ. ಚಾರ್ಜ್‌ಗೆ ಹಾಕುವುದೂ ಬೇಡ
- ಕಾರಿನಲ್ಲಿ ಪ್ರಯಾಣಿಸುತ್ತಿದ್ದರೆ ಗಾಜನ್ನು ಮುಚ್ಚಿಕೊಳ್ಳಿ
- ಗುಡುಗು- ಸಿಡಿಲಿನ ವೇಳೆ ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳಿಂದ ದೂರವಿರಿ

(ಆಧಾರ: ಕೆಎಸ್‌ಡಿಎಂಎ)

ಹವಾಮಾನ ಮುನ್ಸೂಚನೆಯನ್ನು ಮಾಧ್ಯಮ, ಸಾಮಾಜಿಕ ಮಾಧ್ಯಮದ ಮೂಲಕ ನೀಡುವ ಕೆಸಲವನ್ನೂ ಮಾಡಲಾಗುತ್ತಿದೆ. 2021ಕ್ಕೆ ಹೋಲಿಸಿದರೆ 2022ರಲ್ಲಿ ಸಾವಿನ ಪ್ರಮಾಣ ಕೊಂಚ ಕಡಿಮೆಯಾಗಿದೆ' ಎನ್ನುತ್ತಾರೆ ಅವರು.

ಪ್ರಾಧಿಕಾರವು ಸಿದ್ಧಪಡಿಸಿರುವ ಕ್ರಿಯಾಯೋಜನೆಯಲ್ಲಿ, 2011ರಿಂದ 2021ರವರೆಗೆ 812 ಮಂದಿ ಸಿಡಿಲು ಬಡಿದು ಸಾವಿಗೀಡಾಗಿರುವ ಮಾಹಿತಿ ನೀಡಲಾಗಿದೆ. ಈ ಅವಧಿಯಲ್ಲಿ ಅತಿ ಹೆಚ್ಚಿನ ಸಾವು (85) ವರದಿಯಾಗಿರುವುದು ಬೆಳಗಾವಿ ಜಿಲ್ಲೆಯಲ್ಲಿ. ನಂತರದ ಸ್ಥಾನದಲ್ಲಿ ವಿಜಯಪುರ (69), ಗದಗ (56), ಚಿತ್ರದುರ್ಗ (48), ತುಮಕೂರು (48), ಬೀದರ್ (44), ಕೊಪ್ಪಳ (43), ಹಾವೇರಿ (43), ಯಾದಗಿರಿ (37), ಧಾರವಾಡ (37), ಬಳ್ಳಾರಿ (35), ಬಾಗಲಕೋಟೆ (31 ಇವೆ. ಈ 11 ವರ್ಷಗಳಲ್ಲಿ ರಾಮನಗರ ಹಾಗೂ ಕೊಡಗು ಜಿಲ್ಲೆಗಳಲ್ಲಿ ಸಿಡಿಲು ಬಡಿದು ಮಾನವ ಪ್ರಾಣ ಹಾನಿಯಾಗಿಲ್ಲ ಎಂದು ತಿಳಿಸಲಾಗಿದೆ.

'ಸಿಡಿಲಿನಿಂದ ಸಾಯುವವರಲ್ಲಿ ಹೆಚ್ಚಿನವರು ರೈತರು. ಜಮೀನಿನಲ್ಲಿ ಕೃಷಿ ಕೆಲಸದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಅವರು ಸಾವಿಗೀಡಾಗುತ್ತಿರುವುದು ವರದಿಯಾಗುತ್ತಲೇ ಇದೆ. ಸಿಡಿಲನ್ನು ತಪ್ಪಿಸಲಾಗದು. ಆದರೆ. ಅದರಿಂದಾಗುವ ಸಾವು–ನೋವುಗಳನ್ನು ತಪ್ಪಿಸಬಹುದು. ಇದಕ್ಕಾಗಿ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು' ಎನ್ನುತ್ತದೆ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರ.

## ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಜುಲೈ 29ರಿಂದ

**ವಿಜಯಪುರ:** ದಲಿತ ಸಾಹಿತ್ಯ ಪರಿಷತ್ ವತಿಯಿಂದ ಬೆಳ್ಳಿಹಬ್ಬ ಸಂಭ್ರಮದ ಅಂಗವಾಗಿ ಜುಲೈ 29 ಮತ್ತು 30ರಂದು 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನವನ್ನು ನಗರದ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ ಗೊಳಸಂಗಿ ಹೇಳಿದರು.

ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸದ್ಯದ ಸಂದಿಗ್ಧ ಪರಿಸ್ಥಿತಿಯಲ್ಲಿ ದಲಿತ ಪ್ರಜ್ಞೆ, ಸಂವೇದನೆ ಹೊಂದಿದ ಲೇಖಕರಿಗೆ ಅವಕಾಶ ಇಲ್ಲದಂತಾಗಿದೆ. ದಮನಿತ ಹಾಗೂ ಶೋಷಿತರಿಗೆ ತುಡಿಯುವ, ದಲಿತ ಸಂವೇದನೆಯ ಲೇಖಕರಿಗೆ ಅವಕಾಶ ಕಲ್ಪಿಸಲು ಹಾಗೂ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ' ಎಂದರು.

ಎರಡು ದಿನ ಸಮ್ಮೇಳನ ನಡೆಯಲಿದ್ದು, ಪ್ರಬುದ್ಧ ಭಾರತ, ಸಂವಿಧಾನ ರಕ್ಷಣೆ, ಮೀಸಲಾತಿ ವಿಷಯದ ಕುರಿತು ಸಂವಾದ ಹಾಗೂ ಚಿಂತನೆಗಳು ನಡೆಯಲಿದೆ. ಸಮತಾಗೀತೆ, ಸಂವಿಧಾನ ಪ್ರಸ್ತಾವನೆ ಓದು, ಬುದ್ಧ ಚಿಂತನೆಗಳ ಮೂಲಕ ಕಾರ್ಯಕ್ರಮ ಪ್ರಾರಂಭಿಸಲಾಗುವುದು. ಸಮ್ಮೇಳನದಲ್ಲಿ 2 ಕವಿಗೋಷ್ಠಿ, ಬೆಳ್ಳಿ ಸಂಭ್ರಮ ಪ್ರಶಸ್ತಿ ಸಮಾರಂಭ, ಗೌರವ ಸಮಾರಂಭ, ಪುಸ್ತಕಗಳ ಬಿಡುಗಡೆ ನಡೆಯಲಿದೆ. ಜಿಲ್ಲಾ ಕಾರ್ಯಾಕಾರಿಣಿ ಸಮಿತಿ, ಸಾರ್ವಜನಿಕರು, ರಾಜ್ಯ ಕಾರ್ಯಾಕಾರಿಣಿ ಸಮಿತಿಯ ಸಲಹೆ ಮೇರೆಗೆ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡಲಾಗುವುದು ಎಂದರು.

## ತುಳಜಾಭವಾನಿ ದೇಗುಲ: ಚಿನ್ನ ಸಂಗ್ರಹ

**ಸೋಲಾಪುರ:** ಮಹಾರಾಷ್ಟ್ರದ ತುಳಜಾಪುರದ ತುಳಜಾಭವಾನಿ ದೇವಾಲಯದಲ್ಲಿ 207 ಕೆಜಿ ಚಿನ್ನ ಸಂಗ್ರಹವಾಗಿದೆ. 2009ರಿಂದ ಜೂನ್ 2023ರ ವರೆಗೆ ಭಕ್ತರು ದೇವಿಗೆ ಮೂಗುತಿ, ಮಂಗಳಸೂತ್ರ ಸೇರಿದಂತೆ ವಿವಿಧ ರೂಪದಲ್ಲಿ ಕಾಣಿಕೆ ನೀಡಿದ್ದು, ದೇವಾಲಯ ಸಮಿತಿಯು ಶನಿವಾರ 4 ಕಾಣಿಕೆ ಪೆಟ್ಟಿಗೆಗಳನ್ನು ಹೊರತೆಗೆದಿದೆ.

ಚಿನ್ನ, ಬೆಳ್ಳಿ, ವಜ್ರ, ರತ್ನದ ಆಭರಣಗಳನ್ನು ತೂಕ ಮಾಡಿದ್ದು, ಒಟ್ಟು 207 ಕೆಜಿ ಚಿನ್ನ, 354 ವಜ್ರದ ಹರಳುಗಳು ಮತ್ತು ಒಂದು ರತ್ನ ಖಚಿತ ಮಂಗಳಸೂತ್ರ ದೊರೆತಿದೆ. ಇವುಗಳನ್ನು 5 ಕೆಜಿ ಪೊಟ್ಟಣಗಳನ್ನಾಗಿ ಮಾಡಿ 3 ಪೆಟ್ಟಿಗೆಯಲ್ಲಿ ತುಂಬಿ ಮೊಹರು ಮಾಡಲಾಗಿದೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

# ಸಿಡಿಲಿಗೆ ಇಬ್ಬರು ಸಾವು, ನಾಲ್ವರಿಗೆ ಗಾಯ

### ರಾಜ್ಯದ ವಿವಿಧೆಡೆ ಮಳೆ, ಬಿರುಗಾಳಿಯಿಂದ ಮನೆಗಳಿಗೆ ಹಾನಿ, ಮರ ಬಿದ್ದು ವಾಹನಗಳು ಜಖಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾನುವಾರವೂ ಮಳೆಯಾಗಿದ್ದು, ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ. ನಾಲ್ವರು ಗಾಯಗೊಂಡಿದ್ದಾರೆ. ಬಿರುಗಾಳಿಯಿಂದಾಗಿ ಹಲವೆಡೆ ಮನೆಗಳಿಗೆ ಹಾನಿಯುಂಟಾಗಿದ್ದು, ಮರಗಳು ಧರೆಗುಳಿವೆ. ಇದರಿಂದ ಕೆಲ ವಾಹನಗಳಿಗೆ ಹಾನಿಯುಂಟಾಗಿದ್ದು, ರಸ್ತೆ ಸಂಚಾರಕ್ಕೆ ವ್ಯತ್ಯಯ ಉಂಟಾಗಿತ್ತು.

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಯಗಟಿಪುರದಲ್ಲಿ ಸಿಡಿಲು ಬಡಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದು ನಾಲ್ವರಿಗೆ ಗಾಯಗಳಾಗಿವೆ. ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹೋಬಳಿಯ ಗಂಜಿಗೆರೆ ಗ್ರಾಮದ ಮುಕೇಶ್ (28) ಮೃತಪಟ್ಟವರು. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಲಗ ಗ್ರಾಮದ ಗೆಜ್ಜೆಬಾವಿದೊಡ್ಡಿ ರೈತ ಮೌನೇಶ (35) ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

**(ಮಂಗಳೂರು ವರದಿ):** ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬಿರುಸಿನ ಮಳೆ ಯಾಯಿತು. ಪುತ್ತೂರು ತಾಲ್ಲೂಕಿನ ಮಾಡ್ನೂರು ಗ್ರಾಮದಲ್ಲಿ ಸಿಡಿಲು ಬಡಿದು ಮನೆಯೊಂದು ಹಾನಿಗೊಂಡಿತು.ಉಳ್ಳಾಲ ತಾಲ್ಲೂಕಿನ



ಉಳ್ಳಾಲ ತಾಲ್ಲೂಕಿನ ಉಚ್ಚಿಲ ಗ್ರಾಮದಲ್ಲಿ ಕಡಲ್ಕೊರೆತದಿಂದ ಕಟ್ಟಡ ಕುಸಿದ ಸ್ಥಳಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಭಾನುವಾರ ಭೇಟಿ ನೀಡಿದರು. ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್., ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಇತರರು ಇದ್ದಾರೆ

ಉಚ್ಚಿಲ ಗ್ರಾಮದಲ್ಲಿ ಕಡಲ್ಕೊರೆತದ ಹಾವಳಿ ಶುರುವಾಗಿದೆ. ಬಟ್ಟಪಾಡಿಯಲ್ಲಿ ಕಟ್ಟಡವೊಂದು ಸಮುದ್ರ ಪಾಲಾಯಿತು. ಎರಡು ದಿನಗಳಲ್ಲಿ 50ಕ್ಕೂ ಹೆಚ್ಚು ತೆಂಗಿನಮರಗಳು ಸಮುದ್ರಪಾಲಾಗಿವೆ.

**(ಬೀದರ್ ವರದಿ):** ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಬೀದರ್‌ನ ಕೆಇಬಿ ಪ್ರದೇಶದಲ್ಲಿ ಮರದ ಕಾಂಡವೊಂದು ಕಾರಿನ ಮೇಲೆ ಬಿದ್ದದ್ದರಿಂದ ಸಂಪೂರ್ಣ ನಜ್ಜುಗುಜ್ಜಾಗಿದೆ. ಭಾಲ್ಕಿಯಲ್ಲಿ ಮರ ಉರುಳಿ ಬಿದ್ದು ದ್ವಿಚಕ್ರ ವಾಹನ ಜಖಂಗೊಂಡಿದೆ. ಬಸ್ ಘಟಕದ ತಗಡಿನ ಶೀಟ್‌ಗಳು ಹಾರಿ ಹೋಗಿವೆ. ಕಬ್ಬಿಣದ ಕಂಬ ಬಿದ್ದು, ಬಸ್ ಜಖಂಗೊಂಡಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ, ಯಾದಗಿರಿ ಜಿಲ್ಲೆಯ ಕೆಲವೆಡೆ ಮಳೆಯಾಗಿದೆ. ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಗಾಳಿ ಮಳೆಯಿಂದಾಗಿ ಡಾಬಾ, ಗ್ಯಾರೇಜ್‌ಗಳ ಶೀಟ್‌ಗಳು ಹಾರಿಹೋಗಿವೆ.

**(ಕಾರವಾರ ವರದಿ):** ಕಾರವಾರ, ಭಟ್ಕಳ, ಯಲ್ಲಾಪುರ ತಾಲ್ಲೂಕುಗಳ ಹಲವೆಡೆ ಶನಿವಾರ ರಾತ್ರಿಯಿಂದ ಭಾನುವಾರ ಮಧ್ಯಾಹ್ನದವರೆಗೂ ಮಳೆ ಸುರಿದಿದೆ.

ಅಂಕೋಲಾದ ಅಂಬಾರಕೊಡ್ಲ ರಸ್ತೆಯಲ್ಲಿರುವ ಎಲೆಕ್ಟ್ರಾನಿಕ್ ಮಳಿಗೆಯೊಂದಕ್ಕೆ ಸಿಡಿಲಿನಿಂದ ವಿದ್ಯುತ್ ಶಾರ್ಟ್ ಸರ್ಕಿಟ್ ಸಂಭವಿಸಿ ಲಕ್ಷಾಂತರ ಮೌಲ್ಯದ ಉಪಕರಣ ಸುಟ್ಟು ಕರಕಲಾಗಿದೆ.

**(ವಿಜಯನಗರ ವರದಿ):** ಜಿಲ್ಲೆಯ ಕೂಡ್ಲಿಗಿ, ಹರಪನಹಳ್ಳಿ, ಹೂವಿನ ಹಡಗಲಿ, ಕೊಟ್ಟೂರು ಭಾಗದಲ್ಲಿ ಭಾನುವಾರ ಉತ್ತಮವಾಗಿ ಮಳೆ ಸುರಿದಿದೆ. ಹಗರಿಬೊಮ್ಮನಹಳ್ಳಿಯಲ್ಲಿ ಸಾಧಾರಣ ಮಳೆಯಾಗಿದೆ.

**(ದಾವಣಗೆರೆ ವರದಿ):** ಜಿಲ್ಲೆಯ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದೆ. ಮುಂಗಾರು ಹಂಗಾಮಿನ ಬಿತ್ತನೆಗೆ ಹದ ಮಳೆಗೆ ಕಾಯುತ್ತಿದ್ದ ರೈತರು ಈಗಾಗಲೇ ಬೀಜ, ಗೊಬ್ಬರ ಖರೀದಿಸಿ ತಯಾರಿ ನಡೆಸಿದ್ದಾರೆ.

**(ಶಿವಮೊಗ್ಗ ವರದಿ):** ಶಿವಮೊಗ್ಗ ನಗರ, ಸಾಗರ, ತೀರ್ಥಹಳ್ಳಿ, ಹೊಸನಗರದಲ್ಲಿ ಸಾಧಾರಣ ಮಳೆಯಾಗಿದೆ.

**(ಚಿತ್ರದುರ್ಗ ವರದಿ):** ಹಿರಿಯೂರು ತಾಲ್ಲೂಕಿನ ವಾಣಿವಿಲಾಸಪುರದಲ್ಲಿ ಸುಮಾರು ಅರ್ಧ ಗಂಟೆಗೆ ಹೆಚ್ಚು ಕಾಲ ಬಿರುಸಿನ ಮಳೆ ಸುರಿಯಿತು. ಹೊಸದುರ್ಗದಲ್ಲೂ ಉತ್ತಮ ಮಳೆಯಾಗಿದ್ದು, ತಾಲ್ಲೂಕಿನ ದೊಡ್ಡಘಟ್ಟದಲ್ಲಿ ಶನಿವಾರ ರಾತ್ರಿ ಬಿರುಗಾಳಿ ಸಮೇತ ಮಳೆ ಸುರಿದ ಸಂದರ್ಭ ಮರ ಉರುಳಿ ಬಿದ್ದು ಹಸುವೊಂದು ಮೃತಪಟ್ಟಿದೆ.

### ಗುಡುಗು ಸಹಿತ ಮಳೆ ಮುಂದುವರಿಕೆ

**ಬೆಂಗಳೂರು:** ರಾಜ್ಯದ ಕೆಲವೆಡೆ ಮುಂದಿನ ಐದು ದಿನ ಗುಡುಗು ಸಹಿತ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ಬಹುತೇಕ ಕಡೆ ಹಾಗೂ ಒಳನಾಡಿನ ಕೆಲವು ಕಡೆ ಸೋಮವಾರ ಗುಡುಗು ಸಹಿತ ಮಳೆ ಸುರಿಯಲಿದೆ. ರಾಜ್ಯದಾದ್ಯಂತ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಮಳೆಯಾಗುವ ಸಾಧ್ಯತೆಯಿದ್ದು, ಗಾಳಿಯ ವೇಗವು ಗಂಟೆಗೆ 40–50 ಕಿ.ಮೀ. ತಲುಪಬಹುದು ಎಂದು ಹೇಳಿದೆ.

ಬೆಂಗಳೂರಿನಲ್ಲಿ ಗುಡುಗು ಸಹಿತ ಮಳೆಯಾಗುವ ಸಂಭವವಿದೆ.

**ರೆಡ್ ಅಲರ್ಟ್:** ಬಿಪರ್‌ಜಾಯ್ ಚಂಡಮಾರುತದ ಪರಿಣಾಮ ಅರಬ್ಬೀ ಸಮುದ್ರದಲ್ಲಿ ಭಾನುವಾರದಿಂದ ಇದೇ 13ರಂದು ರಾತ್ರಿ 11.30ರವರೆಗೆ 3.5 ಮೀ ಎತ್ತರದಿಂದ 4.1 ಮೀ ಎತ್ತರದ ಅಲೆಗಳು ಕಾಣಿಸಿಕೊಳ್ಳಲಿವೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

# ವಿದ್ಯಾರ್ಥಿಯ ಓದಿಗೆ ಕ್ರಿಕೆಟಿಗ ರಾಹುಲ್ ಸಹಾಯಹಸ್ತ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ವಿದ್ಯಾರ್ಥಿ ಅಮೃತ ಮಾವಿನಕಟ್ಟಿ ಅವರ ಬಿ.ಕಾಂ ಮಾಡುತ್ತ ಸಿ.ಎ ಓದಬೇಕೆಂಬ ಕನಸಿಗೆ ನೀರೆರೆದು ಪೋಷಿಸಲು ಕ್ರಿಕೆಟಿಗ ಕೆ.ಎಲ್. ರಾಹುಲ್ ಮುಂದಾಗಿದ್ದಾರೆ.

ಅಮೃತ ಮಾವಿನಕಟ್ಟಿ ಬನಹಟ್ಟಿಯ ಶ್ರೀಮಂತ ರಾಮಚಂದ್ರ ಅಪ್ಪಾ ಸಾಹೇಬ ಕಾಲೇಜಿನಲ್ಲಿ (ಎಸ್‌ಆರ್‌ಎ ಕಾಲೇಜು) ದ್ವಿತೀಯ ಪಿಯು ಕಾಮರ್ಸ್‌ನಲ್ಲಿ 571 ಅಂಕಗಳೊಂದಿಗೆ ಉತ್ತೀರ್ಣನಾಗಿದ್ದಾನೆ. ಮುಂದಿನ ಓದಿಗೆ ಆರ್ಥಿಕ ಸಮಸ್ಯೆ ಕಾಡುತ್ತಿದೆ.

ಅಮೃತ ತನ್ನ ಸಮಸ್ಯೆಯನ್ನು ಪರಿಚಿತ ನಿತಿನ್ ಅವರಿಗೆ ತಿಳಿಸಿದ್ದಾನೆ. ನಿತಿನ್ ಅವರು ಹುಬ್ಬಳ್ಳಿಯ ತಮ್ಮ ಸ್ನೇಹಿತ, ಸಾಮಾಜಿಕ ಕಾರ್ಯಕರ್ತ ಮಂಜುನಾಥ್ ಹೆಬಸೂರು ಅವರಿಗೆ ತಿಳಿಸಿದ್ದಾರೆ. ಅವರು ತಮ್ಮ ಸ್ನೇಹಿತ ಅಕ್ಷಯ್ ಮೂಲಕ ಕೆ.ಎಲ್.ರಾಹುಲ್ ಅವರಿಂದ ಸಹಾಯ ಮಾಡಿಸಲು ನೆರವಾಗಿದ್ದಾರೆ.

'ಹುಬ್ಬಳ್ಳಿಯ ಕೆಎಲ್‌ಇ ಸಂಸ್ಥೆಯಲ್ಲಿ ಬಿ.ಕಾಂ ಜತೆ ಸಿಎ ಕೋಚಿಂಗ್ ಪಡೆಯುವ ಕೋರ್ಸ್ ಇದ್ದು, ಅದರ ಶುಲ್ಕ ₹85 ಸಾವಿರ ಇದೆ. ಅಮೃತ ಮಾವಿನಕಟ್ಟಿ ಪ್ರತಿಭಾವಂತ ವಿದ್ಯಾರ್ಥಿಯಾಗಿರುವ ಕಾರಣ ಶುಲ್ಕದಲ್ಲಿ



ಅಮೃತ್ ಮಾವಿನಕಟ್ಟಿ



ಕೆ.ಎಲ್. ರಾಹುಲ್

₹10 ಸಾವಿರ ಕಡಿಮೆ ಮಾಡಲು ಕಾಲೇಜು ಆಡಳಿತ ಮಂಡಳಿ ಒಪ್ಪಿತು. ನಮ್ಮ ಕಡೆಯಿಂದ ₹25 ಸಾವಿರ ಹೊಂದಿಸಲು ಸಾಧ್ಯವಾಯಿತು. ಉಳಿದ ಹಣಕ್ಕಾಗಿ ಕ್ರಿಕೆಟಿಗರ ಸಹಾಯ ಪಡೆಯುವಂತೆ ನನ್ನ ಸ್ನೇಹಿತ ಅಕ್ಷಯ್‌ಗೆ ತಿಳಿಸಿದೆ' ಎಂದು ಮಂಜುನಾಥ್ ಹೆಬಸೂರು ತಿಳಿಸಿದರು.

'ಕೋವಿಡ್ ಸಮಯದಲ್ಲಿ ನಮ್ಮ ತಂಡ ನಡೆಸಿದ ಸೇವಾ ಕಾರ್ಯಗಳಿಗೆ ಕ್ರಿಕೆಟಿಗರಾದ ವಿರಾಟ್ ಕೊಹ್ಲಿ, ರವೀಂದ್ರ ಜಡೇಜಾ ಧನಸಹಾಯ ಒದಗಿಸಿದ್ದರು. ಈ ಬಾರಿ, ಕನ್ನಡಿಗರಾದ ಕೆ.ಎಲ್. ರಾಹುಲ್ ಅವರನ್ನು ಸಂಪರ್ಕಿಸಿದಾಗ ಅವರು ತಕ್ಷಣ ಒಪ್ಪಿಗೆ ನೀಡಿದರು. ಅವರು ₹75 ಸಾವಿರವನ್ನು ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದಾರೆ' ಎಂದರು.

ಮೂರನೇ ತರಗತಿಯಲ್ಲಿದ್ದಾಗಲೇ ತಂದೆ-ತಾಯಿಯನ್ನು ಕಳೆದುಕೊಂಡಿರುವ ಅಮೃತ್ ಮಾವಿನಕಟ್ಟಿಗೆ ಅವರ ದೊಡ್ಡಪ್ಪ ಶ್ರೀಶೈಲ ಸೊಬರದ ಹಾಗೂ ದೊಡ್ಡಮ್ಮ ಶೋಭಾ ಬೆಂಬಲವಾಗಿ ನಿಂತಿದ್ದಾರೆ.

'ಟಿ.ವಿಯಲ್ಲಿ ಕೆ.ಎಲ್. ರಾಹುಲ್ ಅವರ ಆಟ ನೋಡಿದ್ದೇನೆ. ಅವರನ್ನು ಎಂದೂ ಭೇಟಿಯಾಗಿಲ್ಲ. ಉತ್ತಮ ಅಂಕಗಳೊಂದಿಗೆ ಈ ಕೋರ್ಸ್ ಪೂರ್ಣಗೊಳಿಸಿದರೆ ಅವರನ್ನು ಭೇಟಿಯಾಗುವ ಅವಕಾಶ ಸಿಗಲಿದೆ. ನಾಲ್ಕು ವರ್ಷಗಳ ಕೋರ್ಸ್ ಇದಾಗಿದ್ದು, ಉಳಿದ 3 ವರ್ಷಗಳ ಶುಲ್ಕವನ್ನೂ ಕೆ.ಎಲ್. ರಾಹುಲ್ ಅವರೇ ಭರಿಸುವ ಭರವಸೆ ನೀಡಿದ್ದಾರೆ. ಹುಬ್ಬಳ್ಳಿಯಲ್ಲಿ ವಸತಿಗಾಗಿ ಬಿಸಿಎಂ ಹಾಸ್ಟೆಲ್, ಪುಸ್ತಕಗಳ ವ್ಯವಸ್ಥೆ ಮಾಡಿಸಿಕೊಡುವುದಾಗಿ ಮಂಜುನಾಥ್ ಹೆಬಸೂರು ಭರವಸೆ ನೀಡಿದ್ದಾರೆ' ಎಂದು ಅಮೃತ ಮಾವಿನಕಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

## 'ಕಲ್ಯಾಣ' ಹಣ ದುರ್ಬಳಕೆ?

ಒಂದನೇ ಪುಟದಿಂದ...

ಕೆಕೆಆರ್‌ಡಿಬಿ ಮತ್ತು ಸಂಘ ಅನುದಾನ ಬಳಕೆಯಲ್ಲಿ ವ್ಯಾಪಕ ಅಕ್ರಮ ಎಸಗಿರುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ನಿಯಮಬಾಹಿರವಾಗಿ ಅನುದಾನ ವಿನಿಯೋಗ, ಕಾಮಗಾರಿಗಳಲ್ಲಿ ಅಕ್ರಮ ನಡೆದಿದೆ ಎಂಬ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿವರಗಳೊಂದಿಗೆ ವರದಿ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಮೇ 29ರಂದು ಮುಖ್ಯಮಂತ್ರಿ ಸೂಚಿಸಿದ್ದರು.

ಈ ಹಿನ್ನೆಲೆಯಲ್ಲಿ ಆರೋಪಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು ಮತ್ತು ಮಂಡಳಿಯ ಕಾರ್ಯದರ್ಶಿ ಮತ್ತು ಸಂಘದ ಕಾರ್ಯದರ್ಶಿ ನೀಡಿದ ವಿವರಣೆಗಳ ಸಹಿತ ಪ್ರತ್ಯೇಕ ವರದಿಗಳನ್ನು ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಿದ್ಧಪಡಿಸಿದೆ.

ಈ ಬೆಳವಣಿಗೆಗಳ ಬೆನ್ನಲ್ಲೆ, ಮಂಡಳಿ ಮತ್ತು ಸಂಘದ ಮೇಲಿನ ಅನುದಾನ ದುರ್ಬಳಕೆ ಆರೋಪಗಳಿಗೆ ಸಂಬಂಧಿಸಿದಂತೆ ದಾಖಲೆ ಮತ್ತು ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಲು ಯೋಜನಾ ಇಲಾಖೆಯ ಎಡಿಬಿ ವಿಭಾಗದ ನಿರ್ದೇಶಕ ಡಿ. ಚಂದ್ರಶೇಖರಯ್ಯ ನೇತೃತ್ವದಲ್ಲಿ ಯೋಜನಾ ಸಚಿವರು ತಂಡ ರಚಿಸಿದ್ದಾರೆ. ಈ ತಂಡ ಸೋಮವಾರದಿಂದ (ಜೂನ್ 12) ನಾಲ್ಕು ದಿನ ಪರಿಶೀಲನೆ ನಡೆಸಲಿದೆ.

### ಕಲ್ಯಾಣ ಕರ್ನಾಟಕ ಸಂಘದ ಮೇಲಿನ ದೂರು

- 6 ಜಿಲ್ಲೆಗಳಲ್ಲಿ 1 ಕೋಟಿ ಸಸಿ ನೆಡಲಾಗಿದೆಯೆಂದು ₹ 3.10 ಕೋಟಿ ವೆಚ್ಚ
- ದೇಸಿ ಹಸುಗಳ ಸಾಕಣೆಗೆ ₹ 3.22 ಕೋಟಿ ವೆಚ್ಚ
- ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ ಡಿಜಿಟಲ್ ಕ್ಲಾಸ್ ರೂಂ ಅಳವಡಿಸಲು ₹ 13.32 ಕೋಟಿ
- ಕಿರು ಉತ್ಪಾದನೆಗಳ ಉದ್ದಿಮೆ ಆರಂಭಿಸಲು ಯಂತ್ರೋಪಕರಣ ಪೂರೈಕೆಗೆ ₹ 5.76 wಕೋಟಿ
- ಸರ್ಕಾರೇತರ ಸಂಸ್ಥೆಗಳ ಮೂಲಕ ಗ್ರಾಮ ಪಂಚಾಯಿತಿಗಳಲ್ಲಿ ಕೌಶಲ ಕೇಂದ್ರಗಳಿಗೆ ಹೊಲಿಗೆ ಯಂತ್ರ ನೀಡಲು ₹ 2.73 ಕೋಟಿ
- ಸಂಘದ ವ್ಯಾಪ್ತಿಯ ಸಾಂಸ್ಕೃತಿಕ ಭವನ ಸ್ಥಾಪಿಸಲು ₹ 7.77 ಕೋಟಿ
- ಅನುಮೋದನೆ ಪಡೆಯದೆ ಯೋಜನೆಗಳ ಅನುಷ್ಠಾನ (ಕೋವಿಡ್‌ನಿಂದ ಮೃತಪಟ್ಟ ಖಾಸಗಿ ಶಾಲೆಗಳ ಶಿಕ್ಷಕರಿಗೆ ತಲಾ ₹ 50 ಸಾವಿರ ಪರಿಹಾರ ವಿತರಣೆ)
- ಅಧ್ಯಕ್ಷರ ವಿವೇಚನಾ ನಿಧಿಯಡಿ ಬಿಡುಗಡೆಯಾದ ಶೇ 5ಕ್ಕಿಂತ ಹೆಚ್ಚು ಹಣ ಬಳಕೆ
- ಸೇಡಂ ತಾಲ್ಲೂಕ ಅನ್ನು ಉಪವಿಭಾಗವಾಗಿ ಪರಿಗಣಿಸಿ, ಕಲ್ಯಾಣ ಕರ್ನಾಟಕದ ವ್ಯಾಪ್ತಿಗೆ ಒಳಪಡುವ ಎಲ್ಲ ಜಿಲ್ಲೆಗಳಿಗೆ ಒದಗಿಸಿರುವಷ್ಟು ಅನುದಾನವನ್ನು ಆ ತಾಲ್ಲೂಕಿಗೆ (₹ 19.54 ಕೋಟಿ) ಬಿಡುಗಡೆ
- ಅನುಮೋದಿತ ಕ್ರಿಯಾ ಯೋಜನೆಯ ಅನುದಾನ ಇಷ್ಟಬಂದಂತೆ ವಿಭಜಿಸಿ ವೆಚ್ಚ

### ಕೆಕೆಆರ್‌ಡಿಬಿ ಮೇಲಿನ ಆರೋಪ

ಒಂದನೇ ಪುಟದಿಂದ...

- ಮುಖ್ಯಮಂತ್ರಿ ವಿವೇಚನೆಯಡಿ ₹ 86.90 ಕೋಟಿ ವೆಚ್ಚದಲ್ಲಿ 815 ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದರೂ, ಕಾಮಗಾರಿ ಅನುಷ್ಠಾನಗೊಳಿಸದೆ ಕರ್ತವ್ಯಲೋಪ
- ಎರಡು ವರ್ಷವಾದರೂ ಆರಂಭವಾಗದ ಕಾಮಗಾರಿಗಳನ್ನು ರದ್ದುಪಡಿಸುವಂತೆ ಯೋಜನಾ ಸಚಿವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಣಯಿಸಿದ್ದರೂ ಪಾಲನೆಯಾಗಿಲ್ಲ
- ಗುತ್ತಿಗೆದಾರರಿಂದ ವಸೂಲು ಮಾಡಿರುವ ದಂಡ ಮತ್ತು ವಸತಿಗೃಹಗಳಿಂದ ಸಂಗ್ರಹವಾದ ಬಾಡಿಗೆ ಹಣವನ್ನು ಸ್ವಯಂ ನಿರ್ಣಯ ಕೈಗೊಂಡು ಬಳಕೆ ರದ್ದುಪಡಿಸುವಂತೆ ಯೋಜನಾ ಸಚಿವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಣಯಿಸಿದ್ದರೂ ಪಾಲನೆಯಾಗಿಲ್ಲ
- ಗುತ್ತಿಗೆದಾರರಿಂದ ವಸೂಲು ಮಾಡಿರುವ ದಂಡ ಮತ್ತು ವಸತಿಗೃಹಗಳಿಂದ ಸಂಗ್ರಹವಾದ ಬಾಡಿಗೆ ಹಣವನ್ನು ಸ್ವಯಂ ನಿರ್ಣಯ ಕೈಗೊಂಡು ಬಳಕೆ

## ಸಚಿವ ಶರಣಪ್ರಕಾಶಗೆ ಘೇರಾವ್ ಯತ್ನ; ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

**ರಾಯಚೂರು:** ಸರ್ಕಾರ ರಚನೆಯಾದ ಬಳಿಕ ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸಿದ ವೈದ್ಯಕೀಯ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರ ವಿರುದ್ಧ ಗೋಬ್ಯಾಕ್ ಚಳವಳಿ ಮಾಡಿದ ರಾಯಚೂರು ನಾಗರಿಕ ವೇದಿಕೆಯ ಪದಾಧಿಕಾರಿಗಳು, ಕೈಗೆ ಕಪ್ಪು ಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಡಾ. ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಘೇರಾವ್ ಹಾಕಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ, ಆನಂತರ ಬಿಡುಗಡೆ ಮಾಡಿದರು.

'ಶಕ್ತಿ' ಯೋಜನೆಗೆ ಚಾಲನೆ ನೀಡಲು ಪಾಟೀಲ ಕೇಂದ್ರ ಬಸ್ ನಿಲ್ದಾಣಕ್ಕೆ ಬರುವ ಮುಂಚೆ ಪೊಲೀಸರು ಪ್ರತಿಭಟನ ಕಾರರನ್ನು ಬಂಧಿಸಿದರು.

'ರಾಜ್ಯ ಸರ್ಕಾರವು ಜಿಲ್ಲೆಯ ಎನ್.ಎಸ್. ಬೋಸರಾಜು ಅವರಿಗೆ ಕೊಡಗು ಜಿಲ್ಲಾ ಉಸ್ತುವಾರಿ ನೀಡಿ ಕಲಬುರಗಿಯ ಶರಣಪ್ರಕಾಶ ಪಾಟೀಲ ಅವರಿಗೆ ರಾಯಚೂರು ಜಿಲ್ಲಾ ಉಸ್ತುವಾರಿ ನೀಡಿದ್ದು ಸರಿಯಲ್ಲ. ಜಿಲ್ಲೆಗೆ ಸಿಗಬೇಕಾದ ಏಮ್ಸ್ ಅನ್ನು ಕಲಬುರಗಿಗೆ ಮಂಜೂರು ಮಾಡಲಾಗುವುದು ಎಂದು ಶರಣಪ್ರಕಾಶ ಪಾಟೀಲ ಅವರು ಈಚೆಗೆ ಹೇಳಿಕೆ ನೀಡಿದ್ದರಿಂದ ಅವರಿಗೆ ಜಿಲ್ಲಾ ಉಸ್ತುವಾರಿ ನೀಡುವುದರಿಂದ ಏಮ್ಸ್ ಕೈತಪ್ಪಲಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಏಮ್ಸ್ ಹೋರಾಟ ಸ್ಥಳಕ್ಕೆ ಭೇಟಿ:** ಇದೇ ವೇಳೆ ಸಚಿವ ಶರಣಪ್ರಕಾಶ ಪಾಟೀಲ ನಗರದ ಕ್ರೀಡಾಂಗಣ ಬಳಿ ರಾಯಚೂರು ಏಮ್ಸ್ ಹೋರಾಟ ಸಮಿತಿ ವತಿಯಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿ ಹೋರಾಟಗಾರರೊಂದಿಗೆ ಮಾತನಾಡಿದರು. 'ರಾಯಚೂರಿಗೆ ಏಮ್ಸ್ ಮಂಜೂರು ಮಾಡಲಾಗುವುದು. ಗೊಂದಲ ಬೇಡ. ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದಂತೆ ಮುಖ್ಯಮಂತ್ರಿ ಜೊತೆ ಮಾತನಾಡಿ ಏಮ್ಸ್ ಮಂಜೂರಾತಿಗೆ ಪ್ರಯತ್ನಿಸುತ್ತೇನೆ' ಎಂದು ಭರವಸೆ ನೀಡಿದರು.

## ಬ್ರಿಜ್‌ಭೂಷಣ್ ಶಕ್ತಿ ಪ್ರದರ್ಶನ

ಒಂದನೇ ಪುಟದಿಂದ...

ಆದರೆ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಒಂಬತ್ತು ವರ್ಷ ಪೂರೈಸಿದ್ದನ್ನು ಸಂಭ್ರಮಿಸಲು ಈ ರ‍್ಯಾಲಿಯನ್ನು ಆಯೋಜಿಸಿದ್ದಾಗಿ ಸಿಂಗ್ ಅವರು ಹೇಳಿದ್ದಾರೆ.

'ಕೆಲವು ಬಾರಿ ದುಃಖವನ್ನು, ಕೆಲವು ಬಾರಿ ನೋವನ್ನು ಅನುಭವಿಸಬೇಕಾಗುತ್ತದೆ. ಕೆಲವು ಸಲ ವಿಷವನ್ನೂ ಕುಡಿಯಬೇಕಾಗುತ್ತದೆ... ಆಗ ಮಾತ್ರವೇ ಈ ಜಗತ್ತಿನಲ್ಲಿ ಬದುಕಲು ಸಾಧ್ಯ' ಎಂಬ ಉರ್ದು ಕವಿತೆಯ ಸಾಲುಗಳ ಮೂಲಕ ಬ್ರಿಜ್‌ಭೂಷನ್ ಸಿಂಗ್ ಅವರು ತಮ್ಮ ಭಾಷಣವನ್ನು ಆರಂಭಿಸಿದರು. ಜೊತೆಗೆ, 'ದೇವರು ಇಚ್ಛಿಸಿದ್ದು ನಡೆದೇ ತೀರುತ್ತದೆ ಅಂದಮೇಲೆ ಅದರ ಕುರಿತು ವಾದ ಮಾಡಿ ಪ್ರಯೋಜನವೇನು?' ಎನ್ನುವ 'ರಾಮಚರಿತ ಮಾನಸ'ದ ಸಾಲುಗಳನ್ನೂ ಉಲ್ಲೇಖಿಸಿದರು.

ಆದರೆ, ಭಾಷಣದಲ್ಲಿ ಒಮ್ಮೆಯೂ ಮಹಿಳಾ ಕುಸ್ತಿಪಟುಗಳ ಪ್ರತಿಭಟನೆಯ ಪ್ರಸ್ತಾಪವನ್ನು ಬ್ರಿಜ್‌ಭೂಷಣ್ ಸಿಂಗ್ ಮಾಡಲಿಲ್ಲ. ಅಥವಾ ತಮ್ಮ ಮೇಲಿನ ಆರೋಪಕ್ಕೆ ಸಮಜಾಯಿಷಿಯನ್ನೂ ನೀಡಲಿಲ್ಲ. ಬದಲಿಗೆ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದರು. ಮಧ್ಯಪ್ರದೇಶದ ಸಚಿವ, ಉತ್ತರ ಪ್ರದೇಶದ ಐವರು ಶಾಸಕರ ಜೊತೆಗೆ ಬಿಜೆಪಿ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು.

### 'ಕ್ರಮ ಕೈಗೊಂಡರೆ ಪಕ್ಷ ಬಿಡುವ ಸಾಧ್ಯತೆ'

'ಈ ಹಿಂದೆ ಬ್ರಿಜ್‌ಭೂಷಣ್ ಸಿಂಗ್ ಅವರು ಬೇರೆ ಪಕ್ಷದಲ್ಲಿದ್ದರು. ಮಹಿಳಾ ಕುಸ್ತಿಪಟುಗಳ ಪ್ರತಿಭಟನೆ ಸಂಬಂಧ ಅವರ ವಿರುದ್ಧ ಕ್ರಮ ಕೈಗೊಂಡರೆ, ಅವರು ಬಿಜೆಪಿಯನ್ನು ಬಿಟ್ಟು ಬೇರೆ ಪಕ್ಷಕ್ಕೆ ಹೋಗುವ ಸಾಧ್ಯತೆ ಇದೆ' ಎಂದು ಬಿಜೆಪಿಯ ಕೆಲ ನಾಯಕರು ಹೇಳಿದ್ದಾರೆ.

ಬ್ರಿಜ್‌ಭೂಷಣ್ ಅವರು ಕೆಲವು ದಿನಗಳ ಹಿಂದೆ ಇದಕ್ಕೆ ಪುಷ್ಟಿ ನೀಡುವಂತಹ ಒಂದು ಹೇಳಿಕೆ ನೀಡಿದ್ದರು. 'ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ನನ್ನ ಬೆಂಬಲಕ್ಕೆ ನಿಂತಿದ್ದಾರೆ. ಯಾಕೆಂದರೆ, ಅವರಿಗೆ 'ಸತ್ಯ' ತಿಳಿದಿದೆ. ಅಖಿಲೇಶ್‌ನನ್ನು ನಾನು ಆತನ ಸಣ್ಣ ವಯಸ್ಸಿನಿಂದ ನೋಡುತ್ತಿದ್ದೇನೆ. ಉತ್ತರ ಪ್ರದೇಶದ ಶೇ 80ರಷ್ಟು ಕುಸ್ತಿಪಟುಗಳು ಸಮಾಜವಾದಿ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ' ಎಂದಿದ್ದರು.



❦ ಸುಭಾಷಿತ ❦
ನಿಜವಾದ ಬಡವರೆಂದರೆ, ಸರಿಯಾದ ವಿದ್ಯೆ ಕಲಿತೂ ಸನ್ಮಾರ್ಗದಲ್ಲಿ ನಡೆಯದವರು.
-ಚಾಣಕ್ಯ

# ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಬೇಕು ಇನ್ನಷ್ಟು ಸೌಲಭ್ಯ

**ಶಿಕ್ಷಣದ** ಆರಂಭಿಕ ಹಂತಗಳಲ್ಲಿ ಮತ್ತು ಆರೋಗ್ಯ ಸೇವಾ ವ್ಯವಸ್ಥೆಯ ತಳಮಟ್ಟದಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಪಾತ್ರವು ಬಹಳ ಮಹತ್ವದ್ದು. ಆದರೆ ಸಮುದಾಯಕ್ಕೆ ಸೇವೆ ಒದಗಿಸುವ ಕೆಲಸದಲ್ಲಿ ತೊಡಗಿಸಿಕೊಂಡಿರುವ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ನಿರ್ಲಕ್ಷ್ಯಕ್ಕೆ ಗುರಿಯಾಗಿರುವುದೇ ಹೆಚ್ಚು. ಗ್ರಾಮೀಣ ಪ್ರದೇಶಗಳಲ್ಲಿ ಈ ಕಾರ್ಯಕರ್ತೆಯರ ಪಾತ್ರ ಬಹಳ ಮುಖ್ಯ. ಆದರೆ, 1.35 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಮತ್ತು 40 ಸಾವಿರಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರು ಕೆಲವು ತಿಂಗಳುಗಳಿಂದ ಗೌರವಧನ ಪಡೆದಿಲ್ಲ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ಆಶಾ ಕಾರ್ಯಕರ್ತೆಯರಿಗೆ ಅವರ ಕೆಲಸ ಆಧರಿಸಿ ನೀಡುವ ಹೆಚ್ಚುವರಿ ಪ್ರೋತ್ಸಾಹಧನ ಕೂಡ ಸಿಕ್ಕಿಲ್ಲ. ಎಷ್ಟು ಸಮಯದಿಂದ ಗೌರವಧನ ಸಿಕ್ಕಿಲ್ಲ ಎಂಬುದು ಜಿಲ್ಲೆಯಿಂದ ಜಿಲ್ಲೆಗೆ ಬೇರೆ ಬೇರೆ ಆಗಿದೆ. ಇವರಿಗೆ ಪಾವತಿ ವಿಳಂಬ ಆಗುತ್ತಿರುವುದು ಇದೇ ಮೊದಲು ಅಲ್ಲ. ಕಳೆದ ವರ್ಷ ಕೂಡ ಕನಿಷ್ಠ ಎರಡರಿಂದ ನಾಲ್ಕು ತಿಂಗಳ ಅವಧಿಗೆ ಇವರಿಗೆ ಪಾವತಿ ವಿಳಂಬ ಆಗಿತ್ತು.

ಪಾವತಿ ವಿಳಂಬ ಆಗುವುದಕ್ಕೆ ನೀಡುವ ಕಾರಣವು ಪ್ರತಿ ಬಾರಿಯೂ ಬೇರೆ ಬೇರೆ ಆಗಿರುತ್ತದೆ. ಆ ಕಾರಣಗಳು ಒಪ್ಪಲು ಆಗದಂಥವು. ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಜಾರಿಗೆ ಬಂದಿದ್ದ ಮಾದರಿ ನೀತಿ ಸಂಹಿತೆ ಮತ್ತು ಪಾವತಿಗೆ ಸಂಬಂಧಿಸಿದ ಸರ್ವರ್ ಸ್ಥಳಾಂತರವು ವಿಳಂಬಕ್ಕೆ ಕಾರಣ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಕ್ತ ರಣದೀಪ್ ಡಿ. ಹೇಳಿದ್ದಾರೆ. ಆದರೆ ನೀತಿ ಸಂಹಿತೆಯ ಕಾರಣಕ್ಕೆ ಅಥವಾ ಸರ್ವರ್ ಸ್ಥಳಾಂತರದ ಕಾರಣಕ್ಕೆ ಈ ಅಧಿಕಾರಿ ಸೇರಿದಂತೆ ಯಾರದ್ದಾದರೂ ವೇತನ ಪಾವತಿ ವಿಳಂಬ ಆಗಿತ್ತೇ? ಪಾವತಿಗಳು ನೇರವಾಗಿ ಆಗುವ ವ್ಯವಸ್ಥೆಯನ್ನು ಸುಧಾರಿಸಲು ಕೇಂದ್ರವು ಯತ್ನಿಸುತ್ತಿದೆ, ಅದು ಕೂಡ ವಿಳಂಬಕ್ಕೆ ಒಂದು ಕಾರಣ ಎಂದು ಕೇಂದ್ರದ ಮೇಲೆಯೂ ದೋಷ ಹೊರಿಸಲಾಗಿದೆ. ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ತಾವು ಸಮುದಾಯಕ್ಕೆ ನೀಡುವ ಸೇವೆಯ ಮೌಲ್ಯಕ್ಕಿಂತ ಕಡಿಮೆ ಗೌರವಧನ ಸಿಗುತ್ತಿದೆ. ತಮ್ಮ ಆರೈಕೆಯಲ್ಲಿ ಇರುವ ಮಕ್ಕಳಿಗೆ ಕೊಡಬೇಕಿರುವ ಮೊಟ್ಟೆಯ ಹಣವನ್ನು ಕೆಲವು ಅಂಗನವಾಡಿ ಕಾರ್ಯಕರ್ತೆಯರು ತಾವೇ ನೀಡುತ್ತಿದ್ದಾರೆ, ಇನ್ನು ಕೆಲವೆಡೆ ಅಂಗನವಾಡಿ ಕಟ್ಟಡದ ಬಾಡಿಗೆಯನ್ನು ಭರಿಸುತ್ತಿದ್ದಾರೆ. ಕೊಳೆತ ಮೊಟ್ಟೆಗಳನ್ನು ಪೂರೈಸಿದ ಕಾರಣದಿಂದಾಗಿ, ಅಂಗನವಾಡಿ ಕಟ್ಟಡದ ಬಾಡಿಗೆ ಮೊತ್ತವನ್ನು ಸಕಾಲದಲ್ಲಿ ಬಿಡುಗಡೆ ಮಾಡದ ಪರಿಣಾಮವಾಗಿ ಹೀಗಾಗುತ್ತಿದೆ. ಇವರು ಸರ್ಕಾರಿ ನೌಕರರಲ್ಲ, ಅವರಿಗೆ ಒಳ್ಳೆಯ ವೇತನವೂ ಇಲ್ಲ. ಅಲ್ಲದೆ, ಮೇಲಿನ ಹಂತಗಳಲ್ಲಿ ಆಗುವ ವೈಫಲ್ಯಗಳಿಗೆ ಇವರು ಬೆಲೆ ತೆರುತ್ತಿದ್ದಾರೆ. ಕೆಲವು ಪ್ರಕ್ರಿಯೆಗಳಲ್ಲಿನ ಸಮಸ್ಯೆಯ ಕಾರಣದಿಂದಾಗಿ ಬಾಡಿಗೆ ಪಾವತಿ ಆಗಿರಲಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಅನುರಾಧಾ ಕೆ.ಎನ್. ಹೇಳಿದ್ದಾರೆ. ಅತ್ಯಂತ ಮಹತ್ವದ ಕೆಲಸವನ್ನು ನಿಭಾಯಿಸುತ್ತಿರುವ, ಸಮುದಾಯ ಕಾರ್ಯಕರ್ತೆಯರ ಗೌರವಧನ ಹಾಗೂ ಅವರ ಕೆಲಸದ ವಿಚಾರದಲ್ಲಿ ಹಿರಿಯ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಎಂಬುದು ಇವೆಲ್ಲವನ್ನು ನೋಡಿದಾಗ ಸ್ಪಷ್ಟವಾಗುತ್ತದೆ.



ಈ ಕಾರ್ಯಕರ್ತೆಯರಿಗೆ ಕೊಡಬೇಕಿರುವ ಬಾಕಿಯನ್ನು ಉಳಿಸಿಕೊಳ್ಳಬಾರದು. ಅವರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಬೇಕು

ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಪೈಕಿ ಹಲವರಿಗೆ ಗೌರವಧನದ ರೂಪದಲ್ಲಿ ಸಿಗುವ ಮೊತ್ತವೇ (ತಿಂಗಳಿಗೆ ಅಂದಾಜು ₹ 10 ಸಾವಿರ) ಜೀವನೋಪಾಯ. ಇದೇ ಹಣದಲ್ಲಿ ಅವರು ತಮ್ಮ ಕುಟುಂಬವನ್ನು ಸಲಹಬೇಕು. ಆಶಾ ಕಾರ್ಯಕರ್ತೆಯರ ಕೆಲಸದ ಮೌಲ್ಯ ಏನು ಎಂಬುದು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಗೊತ್ತಾಗಿದೆ. ಅವರನ್ನು ಸರ್ಕಾರ ಹಾಗೂ ಸಮಾಜ ಕೆಟ್ಟದ್ದಾಗಿ ನಡೆಸಿಕೊಳ್ಳಬಾರದು, ಅವರ ಋಣ ಸಮಾಜದ ಮೇಲಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರ ಗೌರವಧನದಲ್ಲಿ ನಿರ್ದಿಷ್ಟ ಹೆಚ್ಚಳ ಮಾಡಲಾಗುವುದು, ಅವರಿಗೆ ನಿವೃತ್ತಿ ಸೌಲಭ್ಯ ಒದಗಿಸಲಾಗುವುದು ಎಂದು ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಭರವಸೆ ನೀಡಿದ್ದರು. ಈಗ ಪಕ್ಷವು ಅಧಿಕಾರದಲ್ಲಿದೆ. ಈ ಕಾರ್ಯಕರ್ತೆಯರಿಗೆ ಕೊಡಬೇಕಿರುವ ಬಾಕಿಯನ್ನು ಉಳಿಸಿಕೊಳ್ಳಬಾರದು. ಭರವಸೆಗಳನ್ನು ಈಡೇರಿಸಬೇಕು.

## ದಿನದ ಟ್ವೀಟ್

### ದುಡಿಯುವ ಅವಕಾಶ ಹೆಚ್ಚಲಿ



**ಹೆಣ್ಮಕ್ಕಳಿಗೆ ಉಚಿತ ಬಸ್ ಸೇವೆಯು ಶಿಕ್ಷಣದಲ್ಲಿ, ಆರ್ಥಿಕತೆಯಲ್ಲಿ ಹೆಣ್ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಬಹುದು. ಮಿಡಲ್ ಇನ್‌ಕಮ್ ಇರುವ ನಮ್ಮಂತಹ ದೇಶದಲ್ಲಿ ಹೆಣ್ಮಕ್ಕಳಿಗೂ ದುಡಿಯುವ ಅವಕಾಶ ಹೆಚ್ಚುವುದು ಮುಖ್ಯ ಕೂಡ. ಇದರ ಲಾಭ ಪಡೆಯಲು ಸ್ಥಳೀಯರಾಗಿರಬೇಕು ಅನ್ನುವ ನಿಯಮದಲ್ಲಿ ತಪ್ಪಿಲ್ಲ.**

**ವಸಂತ ಶೆಟ್ಟಿ,** ಬರಹಗಾರ

## ಕಿಡಿನುಡಿ



**ಬ್ರಿಜ್ ಭೂಷಣ್ ಮೇಲಿನ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರಿಗೆ ವಿಡಿಯೊ, ಆಡಿಯೊ, ಕಾಲ್ ರೆಕಾರ್ಡಿಂಗ್‌ಗಳು, ವಾಟ್ಸ್‌ಆ್ಯಪ್ ಚಾಟ್‌ಗಳನ್ನು ಪುರಾವೆಯಾಗಿ ಸಲ್ಲಿಸಬೇಕಂತೆ. ಅಂದರೆ, ಈಗ ಸಂತ್ರಸ್ತರು ಕ್ಯಾಮೆರಾ ಕ್ಲಿಕ್ಕಿಸಲು ಹಾಗೂ ತಮ್ಮ ಮೇಲೆ ನಡೆಯುವ ದೌರ್ಜನ್ಯವನ್ನು ದಾಖಲಿಸಿಕೊಳ್ಳಲು ಮತ್ತೊಬ್ಬರನ್ನು ಸಿದ್ಧವಾಗಿ ಇರಿಸಿಕೊಂಡಿರಬೇಕು. ಹೀಗಾಗಬೇಕೆಂದರೆ, ಸಂತ್ರಸ್ತರಿಗೆ ಮುಂಚೆಯೇ ತಿಳಿಸಿದ ನಂತರ ದೌರ್ಜನ್ಯಗಳು ನಡೆಯಬೇಕು!**

**ಕಪಿಲ್ ಸಿಬಲ್,** ವಕೀಲ, ರಾಜ್ಯಸಭಾ ಸದಸ್ಯ

## 25 ವರ್ಷಗಳ ಹಿಂದೆ

ಶುಕ್ರವಾರ, 12-6-1998

**• ಕೇಂದ್ರೋದ್ಯಮ: ಆಕರ್ಷಕ ಸ್ವಯಂ ನಿವೃತ್ತಿ ಯೋಜನೆ**

**ನವದೆಹಲಿ, ಜೂನ್ 11 (ಪಿಟಿಐ)**– ಸಾರ್ವಜನಿಕ ವಲಯದ ಉದ್ಯಮಗಳು ನಷ್ಟಕ್ಕೆ ಗುರಿಯಾಗುವುದನ್ನು ತಡೆಯಲು ಕೇಂದ್ರ ಸಚಿವ ಯಶವಂತ ಸಿನ್ಹಾ ಅವರು, 30 ವರ್ಷ ಸೇವೆ ಸಲ್ಲಿಸಿದವರಿಗೆ ಐದು ವರ್ಷಗಳ ವೇತನ ನೀಡುವ ಆಕರ್ಷಕ ಸ್ವಯಂ ನಿವೃತ್ತಿ ಯೋಜನೆಯೊಂದನ್ನು ಇಂದು ಪ್ರಕಟಿಸಿದರು.

ಆಯವ್ಯಯದ ಮೇಲಿನ ಚರ್ಚೆಗೆ ರಾಜ್ಯಸಭೆಯಲ್ಲಿ ಉತ್ತರಿಸಿದ ಸಚಿವರು, 'ಸಾರ್ವಜನಿಕ ಉದ್ದಿಮೆಗಳಲ್ಲಿ ಕೆಲಸ ಮಾಡುವವರು 30 ವರ್ಷ ಸೇವೆ ಸಲ್ಲಿಸಿದ್ದರೆ, ಅವರಿಗೆ ಈ ಮುನ್ನ ಪ್ರತಿ ವರ್ಷದ ಸೇವೆಗೆ ನೀಡುತ್ತಿದ್ದ 45 ದಿನಗಳ ವೇತನದ ಬದಲಾಗಿ 60 ದಿನಗಳ ವೇತನವನ್ನು ನೀಡಲಾಗುವುದು' ಎಂದು ಘೋಷಿಸಿದರು.

**• ನಿಗೂಢ ಸ್ಥಳಗಳಿಗೆ ಸಚಿವರು**

**ಬೆಂಗಳೂರು, ಜೂನ್ 11**– ಸಂಪುಟ ಪುನರ್ರಚನೆಯ ಹಿನ್ನೆಲೆಯಲ್ಲಿ ಶಾಸಕರ ಒತ್ತಡಗಳಿಂದ ತಪ್ಪಿಸಿಕೊಳ್ಳಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೆಗ್ಗಡ ದೇವನಕೋಟೆ ಬಳಿಯ 'ಜಂಗಲ್ ಲಾಡ್ಜ್'ಗೆ ತೆರಳಿದ್ದರೆ, ವರ್ಗಾವಣೆ ಸಂಬಂಧ ಕೊನೇ ಗಳಿಗೆಯಲ್ಲಿ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ತರುತ್ತಿರುವ ಪ್ರಭಾವ-ಒತ್ತಡಗಳಿಂದ ಪಾರಾಗಲು ಸಚಿವರು 'ನಿಗೂಢ' ಸ್ಥಳಗಳನ್ನು ಸೇರಿದ್ದಾರೆ.

ಜೂನ್ 15ರಂದು ಸಂಪುಟ ಪುನರ್ರಚನೆ ನಡೆಯಲಿದ್ದು, ಜೂನ್ 14ರೊಳಗೆ ಸರ್ಕಾರಿ ನೌಕರರ ಈ ವರ್ಷದ ವರ್ಗಾವಣೆಯನ್ನು ಪೂರ್ಣಗೊಳಿಸುವಂತೆ ಮುಖ್ಯಮಂತ್ರಿಗಳು ತಾಕೀತು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ತಮ್ಮ ಇಲಾಖೆಗೆ ಸೇರಿದ ವರ್ಗಾವಣೆ ಪಟ್ಟಿಯನ್ನು ಅಂತಿಮಗೊಳಿಸಲು ಸಚಿವರು ಕಸರತ್ತು ನಡೆಸಿದ್ದಾರೆ.

**• ಚಂಡಮಾರುತಕ್ಕೆ 568 ಬಲಿ**

**ಗಾಂಧಿನಗರ, ಜೂನ್ 11 (ಪಿಟಿಐ)**– ಗುಜರಾತ್ ಸಮುದ್ರ ತೀರದ ಸೌರಾಷ್ಟ್ರ ಹಾಗೂ ಕಚ್ ಪ್ರದೇಶದಲ್ಲಿ ಚಂಡಮಾರುತಕ್ಕೆ ಬಲಿಯಾದವರ ಸಂಖ್ಯೆ 568ಕ್ಕೆ ಏರಿದೆ. ಅಲ್ಲದೆ, ನೂರಾರು ಜನ ಕಣ್ಮರೆಯಾಗಿದ್ದಾರೆ.

## 50 ವರ್ಷಗಳ ಹಿಂದೆ

ಮಂಗಳವಾರ, 12-6-1973

**• ರಾಜಕೀಯ ವ್ಯಕ್ತಿಗಳಿರುವ ಪಂಚಾಯಿತಿ ನೇಮಕ ವಿಧಿಗೆ ಮೇಲ್ಮನೆಯಲ್ಲಿ ಉಗ್ರ ಟೀಕೆ**

**ಬೆಂಗಳೂರು, ಜೂನ್ 11**– ಗೇಣಿದಾರರಿಗೆ ಸಂಬಂಧಿಸಿದ ವಿವಾದಗಳನ್ನು ಸ್ಥಳೀಯ ಮಟ್ಟದಲ್ಲಿಯೇ ಪರಿಶೀಲಿಸಲು, ರಾಜಕೀಯ ವ್ಯಕ್ತಿಗಳನ್ನು ಒಳಗೊಂಡ ಪಂಚಾಯಿತಿಗಳನ್ನು ರಚಿಸುವ ಭೂಸುಧಾರಣಾ ವಿಧೇಯಕದ ವಿಧಿಯನ್ನು ಸಂಸ್ಥಾ ಕಾಂಗ್ರೆಸ್ ಸದಸ್ಯ ಶ್ರೀ ಎಸ್. ಆರ್. ಬೊಮ್ಮಾಯಿ ಅವರು ವಿಧಾನ ಪರಿಷತ್ತಿನಲ್ಲಿ ಉಗ್ರವಾಗಿ ವಿರೋಧಿಸಿದರು.

ಇಂದು ಪರಿಷತ್ತಿನಲ್ಲಿ ಸಂಯುಕ್ತ ಸಲಹಾ ಸಮಿತಿಯ ಪರಿಶೀಲನೆ ನಂತರ ವಿಧಾನಸಭೆಯಿಂದ ಅಂಗೀಕೃತವಾದ ಭೂಸುಧಾರಣೆ ವಿಧೇಯಕದ ಮೇಲೆ ಅವರು ಚರ್ಚೆ ಆರಂಭಿಸಿದರು.

**• ದಕ್ಷಿಣ ಕನ್ನಡ ಜಿಲ್ಲೆಯ ಆಹಾರ ಅಭಾವ ಸ್ಥಿತಿ ತೀವ್ರ: ಶೀಘ್ರ ಕ್ರಮಕ್ಕೆ ಆಗ್ರಹ**

**ಬೆಂಗಳೂರು, ಜೂನ್ 11**– ಹಸಿವಿನಿಂದ ಜನ ಸಾಯುವ ಪರಿಸ್ಥಿತಿ ಇರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ತಕ್ಷಣ ಆಹಾರಧಾನ್ಯವನ್ನು ಕಳುಹಿಸಿಕೊಡಬೇಕೆಂದು ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ಜತ್ತಪ್ಪ ರೈ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಒತ್ತಾಯಪಡಿಸಿದರು.

ಪ್ರಶ್ನೋತ್ತರ ಕಾಲದ ನಂತರ ಜತ್ತಪ್ಪ ರೈ ಅವರು, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಬೆಲೆ ಕೆ.ಜಿ. ಒಂದಕ್ಕೆ 2 ರೂ.ಗೆ ಏರಿದೆ. ಅಲ್ಲಿನ ಪರಿಸ್ಥಿತಿ ಬಹಳ ಕೆಟ್ಟಿದೆ' ಎಂದರು.

ಪಕ್ಷದ ಧೋರಣೆಯನ್ನು ಪಠ್ಯದ ಮೂಲಕ ಮಕ್ಕಳ ಮೇಲೆ ಹೇರುವುದು ಅಪಚಾರ

# ನಿಜವಾದ ಇತಿಹಾಸ ಯಾವುದು?



ವಿಶ್ಲೇಷಣೆ

ಡಾ. ಗುರುರಾಜ ಕರಜಗಿ

**ಸಾಮಾನ್ಯ** ಜ್ಞಾನ ಪರೀಕ್ಷೆಯಲ್ಲಿ ಕೇಳಲಾದ ಎರಡು ಕಾಲ್ಪನಿಕ ಪ್ರಶ್ನೆಗಳ ಬಗ್ಗೆ ಕರ್ನಾಟಕದ ಶಾಲೆಯೊಂದರಲ್ಲಿ ಚರ್ಚೆ ನಡೆಯುತ್ತಿತ್ತು. ಪ್ರಶ್ನೆ 1: ಟಿಪ್ಪು ಯಾರು? ಪ್ರಶ್ನೆ 2: ನಮ್ಮ ದೇಶಕ್ಕೆ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರು ನೀಡಿದ ಕಾಣಿಕೆಗಳು ಯಾವುವು?

ಮೊದಲನೆಯ ವಿದ್ಯಾರ್ಥಿಯ ಹೇಳಿಕೆ ಹೀಗಿತ್ತು- ಟಿಪ್ಪು ಒಬ್ಬ ಧರ್ಮಾಂಧ, ಹಿಂದೂ ದ್ವೇಷಿ. ಅನೇಕರನ್ನು ಬರ್ಬರವಾಗಿ ಹತ್ಯೆ ಮಾಡಿಸಿದವನು. ಮೈಸೂರು ಸಂಸ್ಥಾನದ ಒಡೆಯರನ್ನು ಮೋಸದಿಂದ ಪಕ್ಕಕ್ಕೆ ಸರಿಸಿ ರಾಜ್ಯವನ್ನು ಕಬಳಿಸಿದ ಕ್ರೂರಿ. ಅವನು ಕನ್ನಡ ದ್ವೇಷಿ. ಕನ್ನಡವನ್ನು ತೆಗೆದು ಪರ್ಶಿಯನ್ ಭಾಷೆಯನ್ನು ರಾಜ್ಯ ಭಾಷೆಯನ್ನಾಗಿ ಮಾಡಿದ. ಅವನು ವೀರನೇ ಅಲ್ಲ. ಹೇಡಿಯಂತೆ ಓಡಿಹೋಗುತ್ತಿದ್ದವನನ್ನು ರಸ್ತೆಯಲ್ಲಿ ಓಡಾಡಿಸಿ ಕೊಂದರು ಸೈನಿಕರು.

ಗಾಂಧೀಜಿಯವರ ಅಂಧ ಪ್ರೀತಿಯಿಂದ ನೆಹರೂ ಪ್ರಧಾನಿಯಾದರು. ಭಾರತದ ಇಂದಿನ ಸಮಸ್ಯೆಗಳಿಗೆಲ್ಲ ಅವರ ತಪ್ಪು ನಿರ್ಧಾರಗಳೇ ಕಾರಣ. ಅವರ ಮೂರ್ಖತನದಿಂದ ಕಾಶ್ಮೀರದ ಸಮಸ್ಯೆ ಇನ್ನೂ ಕಗ್ಗಂಟಾಗಿದೆ, ನಾವು ಭಾರತೀಯರು ತೈವಾನ್ ಮತ್ತು ಟಿಬೆಟ್‌ಗಳನ್ನು ಚೀನಾದ ಭೂಭಾಗ ಎಂದು ಒಪ್ಪಿಕೊಳ್ಳಬೇಕಾಯಿತು. ಚೀನಾ ದಾಳಿ ಮಾಡಿದಾಗ ನಾವು ಸೋತು ಅಪಮಾನಿತರಾದದ್ದು ನೆಹರೂ ಅವರ ತಪ್ಪು ನಡೆಗಳಿಂದ. ಮುಸ್ಲಿಮರ ಬಗ್ಗೆ ಅತಿಯಾದ ಉದಾರತೆ ತೋರಿದ್ದರಿಂದಲೇ ಇಂದು ಭಾರತದಲ್ಲಿ ಧಾರ್ಮಿಕ ಅಸಮತೋಲನವಾಗುತ್ತಿದೆ.

ಎರಡನೆಯ ವಿದ್ಯಾರ್ಥಿಯ ಉತ್ತರ ಬೇರೆಯೇ ಆಗಿತ್ತು: ಅಸಾಮಾನ್ಯ ವೀರನಾದ ಟಿಪ್ಪು ಸರ್ವಧರ್ಮಗಳನ್ನೂ ಸಮಾನವಾಗಿ ಕಂಡವನು. ನಂಜನಗೂಡಿನ ದೇವಾಲಯದ ಪಚ್ಚೆಲಿಂಗ ಸ್ಥಾಪನೆಗೆ, ದೇವನಹಳ್ಳಿಯ ವೇಣುಗೋಪಾಲಸ್ವಾಮಿ, ತಮಿಳುನಾಡಿನ ನಾಮಕಲ್ ಕೋಟೆಯ ರಂಗನಾಥಸ್ವಾಮಿ ದೇವಸ್ಥಾನಗಳಿಗೆ ಅಪಾರವಾದ ದತ್ತಿಯನ್ನು ಕೊಟ್ಟವನು. ಅವನು ಮಾಡಿದ ಹೋರಾಟ ಬ್ರಿಟಿಷರ ಚಕ್ರಾಧಿಪತ್ಯವನ್ನೇ ನಡುಗಿಸಿಬಿಟ್ಟಿತ್ತು. ಉಳುವವರಿಗೇ ಭೂಮಿ ಎಂದು ತೀರ್ಮಾನ ಮಾಡಿದವರಲ್ಲಿ ಟಿಪ್ಪು ಮೊದಲಿನವ. ಆತ ಕನ್ನಡದ ಬೆಳವಣಿಗೆಗೆ ಸದಾ ಪ್ರೋತ್ಸಾಹ ನೀಡಿದ. ದೇಶಕ್ಕಾಗಿ ಹೋರಾಡುತ್ತಾ ವೀರಮರಣವನ್ನು ಹೊಂದಿದ.

ಭಾರತದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ನಾಯಕರಲ್ಲಿ ಅಗ್ರಗಣ್ಯರಾದವರು ನೆಹರೂ. ಸ್ವಾತಂತ್ರ್ಯ ದೊರಕಿದಾಗ ದೇಶವನ್ನು ಕಲಕಿದ ಕೋಮುವಾದದ ಬೆಂಕಿಯನ್ನು ಸಮರ್ಥವಾಗಿ ನಂದಿಸಿದವರು. ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ ದೇಶಕ್ಕೆ ಸರಿಯಾದ ಬುನಾದಿಯನ್ನು ಹಾಕಿದವರು. ಅದ್ಭುತ ವಾಗ್ಮಿ, ಚೆಂದದ ಬರಹಗಾರ. ಎಲ್ಲ ದೇಶಗಳೊಡನೆ ಆತ್ಮೀಯ ಸಂಬಂಧವನ್ನು ಬೆಳೆಸಿದ ಚತುರ. ಸಮಾಜವಾದದಲ್ಲಿ, ಸರ್ವಧರ್ಮ ಸಮನ್ವಯದಲ್ಲಿ ಬಲವಾದ ನಂಬಿಕೆಯಿದ್ದ ಅಸಾಮಾನ್ಯ ಆಡಳಿತಗಾರ.

ಮೂರನೆಯ ವಿದ್ಯಾರ್ಥಿ ಹೇಳಿದ: ಈ ಎರಡೂ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ ಮೊದಲು, ಆಗ ಯಾವ ಸರ್ಕಾರ ಆಡಳಿತದಲ್ಲಿತ್ತು ಎನ್ನುವುದು ಮುಖ್ಯವಾಗುತ್ತದೆ. 'ಬಿ' ಸರ್ಕಾರ ಆಡಳಿತ ಮಾಡುತ್ತಿದ್ದರೆ ಮೊದಲನೆಯ ವಿದ್ಯಾರ್ಥಿಯ ಉತ್ತರವೇ ನನ್ನ ಉತ್ತರ. ಒಂದು ವೇಳೆ 'ಸಿ' ಸರ್ಕಾರದ ಆಡಳಿತ ನಡೆಯುತ್ತಿದ್ದರೆ ಎರಡನೆಯ ವಿದ್ಯಾರ್ಥಿಯ ಉತ್ತರ ಸರಿಯಾದದ್ದು.

ಇದು ಮೇಲ್ನೋಟಕ್ಕೆ ತಮಾಷೆ ಎನ್ನಿಸಿದರೂ, ಇದು ನಮ್ಮ ವಿದ್ಯಾರ್ಥಿಗಳ ಕರ್ಮ. ಯಾವುದು ಸರಿ? ಸರ್ಕಾರಗಳು ಬದಲಾದಾಗಲೆಲ್ಲ ಸತ್ಯ ಬದಲಾಗುತ್ತದೆಯೇ? ಪ್ರತಿಯೊಬ್ಬರೂ, ಇನ್ನೊಬ್ಬರು ಇತಿಹಾಸವನ್ನು ತಿರುಚಿದ್ದಾರೆ ಎಂದು ಕೂಗು ಹಾಕುತ್ತಾರೆ. ಯಾವುದು ಸರಿಯಾದ ಇತಿಹಾಸ? ತಿರುಚಿದವರು ಯಾರು? ಆಡಳಿತ ವರ್ಗಕ್ಕೆ ಸೇರಿದ ಪಕ್ಷದ ಧ್ಯೇಯೋದ್ದೇಶಗಳೇನಿದ್ದರೂ ಗೊಂದಲಕ್ಕೆ ಈಡಾಗುವವರು ಮಕ್ಕಳೇ. ಹಿಂದಿನ ವರ್ಷ ಕಲಿತದ್ದು ಸರಿಯೇ, ಈ ವರ್ಷ ಮಾಡಲಾದ ತಿದ್ದುಪಡಿ ಸರಿಯೇ? ಶಿಕ್ಷಕರು ಪಾಠ ಮಾಡುವುದು ಹೇಗೆ?


ನಿಜವಾದ ಇತಿಹಾಸ ಯಾವುದು? 'ಇತಿಹಾಸ' ಎನ್ನುವ ಪದದ ಅರ್ಥವೇ 'ಇದು ನಡೆದದ್ದು ಹೀಗೆ'. ಇದು ಹೀಗೆಯೇ ನಡೆದದ್ದು ಎಂದು ಹೇಳುವವರು ಯಾರು? ಎರಡು ಪಂಗಡದವರೂ ಅದಕ್ಕೆ ಸಾಕ್ಷ್ಯಗಳಿವೆ ಎಂತಲೇ ಹೇಳುತ್ತಾರೆ. ಅದಕ್ಕೆ ಕೆಲವು ಪೂರಕವಾದ ಗ್ರಂಥಗಳನ್ನೂ ಉಲ್ಲೇಖಿಸುತ್ತಾರೆ. ನಮ್ಮಲ್ಲಿ ಇಬ್ಬರನ್ನೂ ಸಂತೈಸುವಂತಹ ಗ್ರಂಥಗಳಿವೆ. ಗಾಂಧೀಜಿಯಿಂದ ದೇಶಕ್ಕೆ ಅಪಚಾರವಾದಷ್ಟು ಇನ್ನಾರಿಂದಲೂ ಆಗಲಿಲ್ಲ ಎಂದು ದೀರ್ಘವಾಗಿ ವಿವರಿಸುವ ಗ್ರಂಥಗಳಿದ್ದಂತೆ, ಅವರೊಬ್ಬರೇ ಮಹಾತ್ಮ, ಮಹಾನ್ ಸಂತ ಎಂದು ದೈವತ್ವಕ್ಕೇರಿಸುವ ಗ್ರಂಥಗಳೂ ಇವೆ. ವಿವೇಕಾನಂದರು ಭಾರತದ ಚೈತನ್ಯದ ಆತ್ಮ, ತರುಣರ ಆರಾಧ್ಯದೈವ ಎಂದು ವರ್ಣಿಸುವ ನೂರಾರು ಗ್ರಂಥಗಳಿವೆ. ಹಾಗೆಯೇ ಅವರೊಬ್ಬ ಸಿಗರೇಟು ಸೇದುವ, ಮಹಿಳೆಯರನ್ನು ಓಲೈಸುವ ಮೋಜುಗಾರ ಎಂದು ತಿಳಿಸಲು ಪ್ರಯತ್ನಿಸುವ ಒಂದೆರಡು ಗ್ರಂಥಗಳೂ ಇವೆ.

ಯಾವುದನ್ನು ಆಯ್ದುಕೊಳ್ಳಬೇಕು ಎನ್ನುವುದು ನಮ್ಮ ಮನೋಧರ್ಮವನ್ನು ಅವಲಂಬಿಸಿದೆ. ಸಾವಿರ ಉತ್ತಮ ವಸ್ತುಗಳ ನಡುವೆ ಇದ್ದ ಎರಡು ಕೊಳಕುಗಳನ್ನು ಎತ್ತಿ ತೋರುವ ಮನೋಧರ್ಮವಿದ್ದಂತೆ, ಎದ್ದು ಕಾಣುವಂತೆ ಮಾಡಿದ ಅಪರಾಧಗಳನ್ನು ಅನವಶ್ಯಕವಾದ ಔದಾರ್ಯದಿಂದ ಕಂಡು, ಮರೆಮಾಚುವ ಮನೋಧರ್ಮವೂ ಇದೆ. ಇದು ಒಂದು ರೀತಿಯ ವೈಚಾರಿಕ ಮೇಲಾಟ. ನಮ್ಮ ಮನಸ್ಸಿಗೆ ಒಪ್ಪಿತವಾದದ್ದನ್ನು ಸಾಧಿಸುವ ದೃಷ್ಟಿಯಿಂದ, ನಮ್ಮ ಚಿಂತನೆಗೇ ಒಗ್ಗುವಂತಹ ವಿಚಾರಗಳನ್ನು, ಹೆಕ್ಕಿ ಹೆಕ್ಕಿ ಜೋಡಿಸಿ ಸಮರ್ಥಿಸಿಕೊಳ್ಳುವ ಕಸರತ್ತು. ಎರಡು ಕಡೆಗೂ ವಿಭಿನ್ನ ವಿಚಾರಧಾರೆಯ 'ವಿದ್ವಾಂಸರು' ಇದ್ದಾರೆ. ಅವರು ತಾವು ಹೇಳಿದ್ದೇ ಸತ್ಯ ಎಂದು ಎತ್ತರದ ಧ್ವನಿಯಲ್ಲಿ ಕೂಗುತ್ತಾರೆ.

ನಮ್ಮ ದೇಶದಲ್ಲಿ ಚರಿತ್ರೆಯ ದಾಖಲೆ ಅಷ್ಟು ವ್ಯವಸ್ಥಿತವಾಗಿಲ್ಲ. ನಮ್ಮ ಬಹಳಷ್ಟು ಪುರಾತನ ದಾಖಲೆಗಳು ಸಾಹಿತ್ಯಿಕವಾಗಿ ದೊರಕಿದಂತಹವು. ಇತಿಹಾಸವು ಸಾಹಿತ್ಯವಾದಾಗ ಒಂದಷ್ಟು ರಂಜಕವಾದ, ಕೊಂಚ ಉತ್ಪ್ರೇಕ್ಷಿತವಾದ, ಪವಾಡಸದೃಶ ವಿವರಗಳು ಸೇರಿಕೊಳ್ಳುತ್ತವೆ. ಐದಾರು ನೂರು ಅಥವಾ ಸಾವಿರಾರು ವರ್ಷಗಳ ಹಿಂದಿನ ಘಟನೆಗಳನ್ನು ಪರಂಪರೆಯಲ್ಲಿ ಬಂದ ನಂಬಿಕೆಯಲ್ಲೇ ಕಟ್ಟಿಕೊಳ್ಳಬೇಕಾಗುತ್ತದೆ.

ಹಾಗಾದರೆ ಶಾಲೆಯಲ್ಲಿ ಮಕ್ಕಳಿಗೆ ಯಾವುದನ್ನು ಸತ್ಯ ಎಂದು ತಿಳಿಸೋಣ? ಅದನ್ನು ಯಾರು ಮಾಡಬೇಕು? ಹಿರಿಯರೊಬ್ಬರು ತಿಳಿಸಿದಂತೆ, ಒಂದು ತಜ್ಞರ ಸಮಿತಿ ಈ ಕಾರ್ಯ ಮಾಡಬೇಕು. ಅದು ರಾಜಕೀಯದಿಂದ ಹೊರಗಿರಬೇಕು. ಪಕ್ಷದ ಧೋರಣೆಯನ್ನು ಮಕ್ಕಳ ಮೇಲೆ ಹೇರುವುದು ಅಪಚಾರ. ಆದರೆ ಅಂತಹ ತಜ್ಞರು ಎಲ್ಲಿದ್ದಾರೆ? ದುರ್ದೈವವೆಂದರೆ, ಬಹಳಷ್ಟು 'ತಜ್ಞರು' ಯಾವುದೋ ಧೋರಣೆಗೆ ಮನತೆತ್ತವರಾಗಿದ್ದಾರೆ.

ಹಿಂದೆ ರಾಜರಿಗೆ ಆಸ್ಥಾನ ವಿದ್ವಾಂಸರಿದ್ದಂತೆ, ಈಗ ಪ್ರತಿಯೊಂದು ಪಕ್ಷಕ್ಕೂ ಕೆಲವು ವಿದ್ವಾಂಸರು ಅಪೇಕ್ಷಿತ ಅಭಿಪ್ರಾಯಗಳನ್ನೇ ಚೆಂದವಾಗಿ ಬರೆದುಕೊಡಲು ಸಿದ್ಧರಾಗಿದ್ದಾರೆ. ಆದರೂ, ಯಾವ ಭಾಗಕ್ಕೂ ಸೇರದೆ ತಮ್ಮ ಶೈಕ್ಷಣಿಕ, ಸಾಹಿತ್ಯಿಕ ಕಾರ್ಯಗಳನ್ನು ನಿರ್ಲಿಪ್ತವಾಗಿ ನಡೆಸಿಕೊಂಡು ಹೋಗುತ್ತಿರುವ ಕೆಲವು 'ಅಲ್ಪಸಂಖ್ಯಾತ' ವಿದ್ವಾಂಸರಿದ್ದಾರೆ. ಅವರು ರಾಜಕಾರಣಿಗಳು, ಅಧಿಕಾರಿಗಳ ಹಿಂದೆ ಸುತ್ತುವವರಲ್ಲ, ಯಾರ ಮುಲಾಜಿಗೂ ಬಗ್ಗುವವರಲ್ಲ. ಅಂಥವರಿಗೆ ಸ್ವಾತಂತ್ರ್ಯ ನೀಡಿ, ಪಠ್ಯಪುಸ್ತಕಗಳನ್ನು ರಚಿಸುವಂತೆ ಕೇಳಿಕೊಳ್ಳಬೇಕು. ಅವರು ಮಾಡಿದ್ದನ್ನು ಕೂಲಂಕಷವಾಗಿ ಪರಿಶೀಲಿಸಿದ ಮೇಲೆ, ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಆಡಳಿತಪಕ್ಷ ಬದಲಾದಾಗ ಪಠ್ಯಪುಸ್ತಕ ಬದಲಾಗಬಾರದು.



ಇನ್ನೊಂದು ಮಾತು. ಪಠ್ಯಪುಸ್ತಕದಲ್ಲಿ ಬರುವ ಯಾವುದೇ ಪಠ್ಯ ಸಕಾರಾತ್ಮಕವಾಗಿರಬೇಕು. ಇಂದು ನಾವು ಸಮಾಜವನ್ನು ಜಾತಿ, ಧರ್ಮ, ಲಿಂಗ, ಭಾಷೆಗಳ ಆಧಾರದ ಮೇಲೆ ಒಡೆದು ಚೂರು ಚೂರು ಮಾಡಿದ್ದೇವೆ. ಈಗ ನಾವು ಮಾಡಬೇಕಾಗಿದ್ದು ಮಕ್ಕಳ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸ. ಅದಾಗಬೇಕಾದರೆ, ಪಠ್ಯದಲ್ಲಿ ಯಾರ ಬಗ್ಗೆಯೇ ಆಗಲಿ, ಯಾವುದರ ಬಗ್ಗೆಯೇ ಆಗಲಿ ವಿಷ ಬೇಡ. ಎಲ್ಲ ಧರ್ಮಗಳಲ್ಲಿ, ಮತಗಳಲ್ಲಿ ಇರುವ ಸುಂದರ, ಸುಭಗ, ಹೃದಯ ತಟ್ಟುವ ವಿಷಯಗಳನ್ನು ಹಾಕಿ, ಮಕ್ಕಳು ತಮ್ಮ ಜಾತಿ, ಮತಗಳಿಗಿಂತ ಹೆಚ್ಚಾಗಿ, ತಾನು ಭಾರತೀಯ ಎಂದು ಹೆಮ್ಮೆಪಡುವಂತೆ ಮಾಡುವುದು ನಮ್ಮ ಇಂದಿನ ಕರ್ತವ್ಯ.

ರಾಜಕೀಯ ಅಧಿಕಾರದ ಅವಧಿ ತುಂಬ ಅಲ್ಪವಾದದ್ದು. ಅದೊಂದು ಜೋಕಾಲಿ. ಐದು ವರ್ಷಕ್ಕೊಮ್ಮೆ ಯಾವುದೋ ದಿಕ್ಕಿನಲ್ಲಿ ತುಯ್ಯುತ್ತದೆ. ಈ ಅಲ್ಪಕಾಲದ ಅಧಿಕಾರಕ್ಕಾಗಿ ದೀರ್ಘಕಾಲದ, ದೇಶಪ್ರೇಮದ, ರಾಷ್ಟ್ರ ಕಲ್ಪನೆಯನ್ನು ಬಲಿ ಕೊಡುವುದು ಬೇಡ.

## ಚುರುಮುರಿ



### ನವೋದ್ಯೋಗಗಳು

• ಸುಮಂಗಲಾ

**ಬೆಕ್ಕಣ್ಣ** ಬಲು ಗಂಭೀರವಾಗಿ ಅರ್ಜಿಗಳನ್ನು ಬರೆಯುತ್ತಿತ್ತು.

'ಏನಲೇ... ಯಾವ ಕೆಲಸಕ್ಕೆ ಅರ್ಜಿ ಹಾಕಾಕೆ ಹತ್ತೀ?' ಕುತೂಹಲದಿಂದ ಕೇಳಿದೆ.

'ನಾಕಾರು ಥರದ ನವೋದ್ಯೋಗಗಳಿಗೆ ಪ್ರಯತ್ನ ಮಾಡಾಕೆ ಹತ್ತೀನಿ. ಇದು ಪೋಸ್ಟ್ ಮಾರ್ಟಂ ಆಫೀಸರ್ ಪೋಸ್ಟಿಗೆ' ಎಂದು ಮೇಲಿದ್ದಿದ್ದನ್ನು ತೋರಿಸಿತು.

ಪೋಸ್ಟ್‌ಮಾರ್ಟಂ ಡಾಕ್ಟರ್ ಗೊತ್ತು... ಆದರೆ ಇದೇನಪ್ಪ ಹೊಸದು ಎಂದು ಅಚ್ಚರಿಪಡುವಷ್ಟರಲ್ಲಿ ಬೆಕ್ಕಣ್ಣ ವಿವರಿಸಿತು. 'ಕಮಲಕ್ಕನ ಮನಿಯವ್ರು ಎಲ್ಲಾ ಜಿಲ್ಲೆವಳಗೂ ಚುನಾವಣೆ ಸೋಲು ಪೋಸ್ಟ್‌ಮಾರ್ಟಂ ಇನ್ನಾ ಮಾಡತಾನೆ ಅದಾರೆ. ಕೆಲವು ಜಿಲ್ಲೆವಳಗ ಖಾಲಿ ಹುದ್ದೆ ಅದಾವು. ಇದಕ್ಕ ಸ್ಪೆಷಲ್ ಅರ್ಹತೆ ಇರಬೇಕಾಗತೈತಿ. ಸೋಲಿಗೆ ಕಾರಣ ಗೊತ್ತಿದ್ದರೂ, ಎಲ್ಲಾನೂ ಆ ಕಾಂಗಿಗಳ ತಲೆಗೋ ಮಂದಿಗಿ ಬುದ್ದೀನೆ ಇಲ್ಲ ಅಂತಲೋ ಮಾಧ್ಯಮಗಳ ಮುಂದೆ ವದರಬೇಕಾಗತೈತಿ'.

'ಈ ಚುರುಮುರಿ ಪೇಪರ್ ಕಟಿಂಗ್ ಎದಕ್ಕ ಒಟ್ಟೆ ಮಾಡೀಯಲೇ?'

'ಯಾವುದಾದರೂ ಸಾಹಿತ್ಯ, ಸಂಸ್ಕೃತಿಯ ಮಂಡಳಿಗೋ ಅಕಾಡೆಮಿಗೋ ಅರ್ಜಿ ಹಾಕೂಣು ಅಂತ. ನಿನ್ ಜೊತಿಗಿ ಸೇರಿ ನಾ ಇಷ್ಟಕೊಂದು ಚುರುಮುರಿ ಬರದೀನಲ' ಎಂದು ಹಲ್ಲು ಕಿರಿಯಿತು. 'ಮಂಗ್ಯಾನಂಥವನೇ... ಇವನ್ನೆಲ್ಲ ಯಾರರೇ ಸಾಹಿತ್ಯ ಅಂತಾರೇನ್? ರಗಡ ಮಂದಿ ಚುನಾವಣೆ ಫಲಿತಾಂಶ ಬರತಿದ್ದಂಗೆ ಬಯೋಡೇಟಾದ ಇಷ್ಟಿಷ್ಟ್ ದಪ್ಪ ಫೈಲ್ ಸಿದ್ಧಮಾಡಿಕೆಂಡು ಕುತ್ತಾರ. ನಿನ್ನ ಈ ಚುರುಮುರಿ ಫೈಲನ್ನೆಲ್ಲ ಯಾರೂ ಮೂಸಿಯೂ ನೋಡಂಗಿಲ್ಲ' ಎಂದೆ.

ಪೆಚ್ಚು ಮುಖ ಮಾಡಿದ ಬೆಕ್ಕಣ್ಣ 'ಹಂಗಾರೆ ಬ್ಯಾರೆದು ನೋಡತೀನಿ' ಎಂದು ಕೆಳಗಿದ್ದ ಅರ್ಜಿಗಳನ್ನು ತೆಗೆಯಿತು. 'ಇದು ಕುಮಾರಣ್ಣಂಗೆ ಕಣ್ಣೀರ ಧಾರೆಗೆ ಡಯಲಾಗ್ ಬರೆದುಕೊಡೋ ಕೆಲಸದ ಅರ್ಜಿ. ಕಣ್ಣೀರು ಹಾಕತಾ, ಎಲ್ಲರಿಗೂ ಬೈಕೋತ, ಮುಂದಿನಸಲ ಕಪ್ ನಮ್ದೇ ಅಂತ ಹ್ಙೂಂಕರಿಸೋ ಡಯಲಾಗ್ ಬರೆದುಕೊಡೋ ಕೆಲಸ ಅದು. ಮತ್ತ ಇದು ಕಮಲಕ್ಕನ ಮನೆಯ ಉರಿನಾಲಿಗೆ ವೀರರಿಗೆ ಸತತವಾಗಿ ಬೆಂಕಿಮಾತುಗಳನ್ನು ಬರೆದುಕೊಡೋ ಕೆಲಸ...'

ಬೆಕ್ಕಣ್ಣನ ಬಳಿಯಿದ್ದ ಹತ್ತಾರು ನವೋದ್ಯೋಗಗಳ ಅರ್ಜಿಗಳನ್ನು ನೋಡಿ ದಂಗಾದೆ!

## ಸಂಗತ

# ದೈವಭಕ್ತಿ ಮತ್ತು ದೈಹಿಕ ಹಿಂಸೆ

ಪ್ರಾಣಿವರ್ಗಗಳಲ್ಲೇ ಶ್ರೇಷ್ಠನೆಂದು ಪರಿಗಣಿತನಾದ ಮನುಷ್ಯ, ದೇವರ ಹೆಸರಿನಲ್ಲಿ ಹಿಂಸೆಗೆ ಒಳಗಾಗುವುದು ಮಾನವ ಬದುಕಿನ ದುರಂತಗಳಲ್ಲೊಂದು

• ರಾಜಕುಮಾರ ಕುಲಕರ್ಣಿ

**ಮಿತ್ರರೊಬ್ಬರು** ಇತ್ತೀಚೆಗೆ ಮುಂಜಾನೆಯ ವಾಕಿಂಗ್ ಸಮಯದಲ್ಲಿ ಸಂಭಾಷಣೆಯ ನಡುವೆ 'ದೇವರು ಹಿಂಸಾಪ್ರಿಯನೋ ಅಥವಾ ಶಾಂತಿಪ್ರಿಯನೋ' ಎಂದು ಕೇಳಿದರು. ಅವರು ಹಾಗೆ ಕೇಳುವುದಕ್ಕೂ ಕಾರಣವಿತ್ತು. ಕೆಲಕ್ಷಣಗಳ ಹಿಂದಷ್ಟೆ ದೂರದ ದೇವಸ್ಥಾನಕ್ಕೆ ಪಾದಯಾತ್ರೆಯ ಮೂಲಕ ತೆರಳುತ್ತಿದ್ದ ಜನರ ಗುಂಪೊಂದು ನಮಗೆ ಎದುರಾಗಿತ್ತು. ಆ ಗುಂಪಿನಲ್ಲಿ ಕೆಲವರು ಸುಮಾರು ಮೂರರಿಂದ ನಾಲ್ಕು ಅಡಿಗಳಷ್ಟು ಉದ್ದದ ಕೋಲುಗಳನ್ನು ಪಾದದ ಕೆಳಗೆ ಕಟ್ಟಿಕೊಂಡು ನಡೆಯುತ್ತಿದ್ದರು. ನೂರಾರು ಕಿಲೊಮೀಟರ್‌ಗಳ ದೂರದ ದಾರಿಯನ್ನು ಹೀಗೆ ಯಾವ ಆಸರೆಯೂ ಇಲ್ಲದೆ ಕೋಲುಗಳ ಮೇಲೆ ಕ್ರಮಿಸುವ ಈ ವಿಧಾನವೇ ನಮ್ಮ ಅಚ್ಚರಿ ಮತ್ತು ಕುತೂಹಲಕ್ಕೆ ಕಾರಣವಾಗಿತ್ತು.

ವಿಚಾರಿಸಿದಾಗ ತಿಳಿಯಿತು, ಈ ರೀತಿ ಕೋಲುಗಳ ಮೇಲೆ ನಡೆದುಬಂದು ದೇವರ ದರ್ಶನ ಪಡೆಯುವ ಹರಕೆ ಅವರದಾಗಿತ್ತು. ಸಹಜವಾಗಿಯೇ ಈ ನಡೆ ನನ್ನ ಮಿತ್ರರಿಗೆ ಮತ್ತು ನನಗೆ ಹಿಂಸೆಯಾಗಿ ತೋರಿತು.

ದೇವರ ಹೆಸರಿನಲ್ಲಿ ದೇಹಕ್ಕೆ ಬಗೆಬಗೆಯ ಹಿಂಸೆಯನ್ನು ನೀಡುವ ಭಕ್ತರ ಸಂಖ್ಯೆ ಬಹಳಷ್ಟಿದೆ. ಕೆಂಡದ ಮೇಲೆ ನಡೆಯುವುದು, ಅಂಗೈಯಲ್ಲಿ ಕರ್ಪೂರದಾರತಿ ಬೆಳಗುವುದು, ಮುಳ್ಳಿನ ಪಾದುಕೆಗಳ ಮೇಲೆ ನಿಲ್ಲುವುದು, ರಕ್ತ ಜಿನುಗುವಂತೆ ಚಾಟಿಯಿಂದ ಮೈಮೇಲೆ ಹೊಡೆದುಕೊಳ್ಳುವುದು, ಬೆನ್ನಿಗೆ ಕಬ್ಬಿಣದ ಕೊಂಡಿ ಸಿಕ್ಕಿಸಿಕೊಂಡು ಗಾಳಿಯಲ್ಲಿ ತೇಲಾಡುವುದು, ನಾಲಗೆಗೆ ಕಬ್ಬಿಣದ ಸಲಾಕೆ ಚುಚ್ಚಿಕೊಳ್ಳುವುದು, ಅನ್ನಾಹಾರ ತ್ಯಜಿಸಿ ವೃಥಾ ಉಪವಾಸವಿರುವುದು ಹೀಗೆ ಆಯಾ ದೇವಸ್ಥಾನದ ನಿಯಮಗಳಿಗೆ ಅನುಗುಣವಾಗಿ ಭಕ್ತಗಣ ದೈಹಿಕ ಹಿಂಸೆಗೆ ಒಳಗಾಗುತ್ತದೆ.

ಕೆಲವು ವರ್ಷಗಳ ಹಿಂದೆ ಭಕ್ತನೊಬ್ಬ ದೇವರಿಗೆ ತನ್ನ ನಾಲಗೆಯನ್ನೇ ಸಮರ್ಪಿಸಿದ್ದ. ಬಾಗಲಕೋಟೆ ಹತ್ತಿರದ ಊರಿನಲ್ಲಿ ಅನಕ್ಷರಸ್ಥನೊಬ್ಬ ದೇವರಿಗೆ ತನ್ನ ಕಣ್ಣುಗಳನ್ನು ನೀಡಿ ಭಕ್ತಿಯ ಪರಾಕಾಷ್ಠೆ ಮೆರೆದಿದ್ದ. ಗ್ರಹಣದ ದಿನ ಪಾರ್ಶ್ವವಾಯುಪೀಡಿತರನ್ನು ಗುಂಡಿಗಳಲ್ಲಿ ಕುತ್ತಿಗೆಯವರೆಗೆ ಹೂಳುವುದರಿಂದ ರೋಗ ಗುಣಪಡಿಸಬಹುದು ಎನ್ನುವ ನಂಬಿಕೆ ಗ್ರಾಮೀಣ ಭಾಗಗಳಲ್ಲಿ ಬಲವಾಗಿದೆ.

ಪ್ರಾಣಿ ಬಲಿ ಬೇಡುವ ಹಿಂಸಾಪ್ರಿಯ ದೇವರನ್ನು ಸಹ ಮನುಷ್ಯ ಸೃಷ್ಟಿಸಿದ್ದಾನೆ. ಕುರಿ, ಕೋಳಿ, ಕೋಣಗಳನ್ನು ಬಲಿ ಕೊಡುವ ಸಂಪ್ರದಾಯ ಇನ್ನೂ ಅನೇಕ ಊರುಗಳಲ್ಲಿ ಚಾಲ್ತಿಯಲ್ಲಿದೆ. ಭಕ್ತರು ತಮ್ಮ ಆರ್ಥಿಕ ಶಕ್ತ್ಯಾನುಸಾರ ಪ್ರಾಣಿಗಳನ್ನು ಖರೀದಿಸಿ ಬಲಿ ಕೊಡುತ್ತಾರೆ. ಹಣವಿಲ್ಲದವರು ದೇವರ ಇಷ್ಟಾರ್ಥವನ್ನು ಪೂರೈಸಲು ಸಾಲ ಮಾಡಿ ಪ್ರಾಣಿಗಳನ್ನು ಬಲಿ ಕೊಡುವುದುಂಟು. ಸಮಾಜದಲ್ಲಿ ಮನುಷ್ಯನು ನೀತಿ ಮತ್ತು ಪ್ರಾಮಾಣಿಕತೆಗೆ ಹೆದರುವುದಿಲ್ಲವಾದರೂ ದೇವರಿಗೆ ಹೆದರುತ್ತಾನೆ. ದೇವರನ್ನು ಸಂತೃಪ್ತಿಪಡಿಸಲು ನಾನಾ ರೀತಿಯ ಪ್ರಯತ್ನಗಳನ್ನು ಮಾಡುತ್ತಾನೆ. ಇದರಲ್ಲಿ ಸ್ವಯಂ ಹಿಂಸೆಗೆ ಒಳಗಾಗುವುದು ಕೂಡ ಒಂದು. ಪ್ರೀತಿ ಮತ್ತು ಯುದ್ಧದಲ್ಲಿ ಎಲ್ಲವೂ ನ್ಯಾಯಸಮ್ಮತ ಎನ್ನುವ ಮಾತು ದೇವರ ಮೇಲಿನ ಭಕ್ತಿಗೂ ಅನ್ವಯಿಸುತ್ತಿದೆ. ಆದರೆ ಇಂಥ ಪದ್ಧತಿಗಳ ಮೊರೆ ಹೋಗುವವರು ದುರ್ಬಲ ಮನಸ್ಸಿನವರೆಂದು ಅನೇಕ ಅಧ್ಯಯನಗಳು ರುಜುವಾತುಪಡಿಸಿವೆ.

ಗೋಕಾಕರ 'ಭಾರತ ಸಿಂಧುರಶ್ಮಿ' ಕೃತಿಯಲ್ಲಿ ಮನುಷ್ಯವರ್ಗದ ಮಹತ್ವದ ಕುರಿತು ಹೀಗೆ ಹೇಳಲಾಗಿದೆ- 'ಜಗತ್ತಿನಲ್ಲಿ ಮನುಷ್ಯನಿಗಿಂತ ಕೆಳಸ್ತರದ ಪ್ರಾಣಿಗಳು ಮಾತ್ರವಲ್ಲ ಮೇಲಿನ ವರ್ಗಗಳ ವಿದ್ಯಾಧರ, ಗಂಧರ್ವ, ಅಪ್ಸರರು ಸಹ ಸ್ವಪ್ರಯತ್ನದಿಂದ ಬೆಳೆಯಲಾರರು. ಭಾವ, ಬುದ್ಧಿ, ಕರ್ಮದ ಮಿಲನದಿಂದ ಬೆಳೆಯಬಲ್ಲವನು ಮನುಷ್ಯ ಮಾತ್ರ'.

ಬಸವಣ್ಣನವರು ಕಾಯಕವೇ ಕೈಲಾಸ ಎಂದು ಹೇಳಿದರು. ಕಾಯವನ್ನು ಕಾಯಕದ ಮೂಲಕ ದಂಡಿಸಬೇಕೆ ವಿನಾ ಅನಗತ್ಯವಾದ ಮೂಢ ನಂಬಿಕೆಗಳನ್ನು ಆಚರಿಸುವುದರಲ್ಲಿ ಮನುಷ್ಯರ ಶ್ರಮ ವ್ಯರ್ಥವಾಗಬಾರದು. ಜನಪದರು ಹೇಳಿದಂತೆ, ಜಂಗಮನ ಜೋಳಿಗೆಯೆಂದು ಅದನ್ನು ಮೂಲೆಯಲ್ಲಿ ಇಟ್ಟರೆ ಅದು ತುಂಬುವುದಿಲ್ಲ. ಬದುಕಿನ ಪ್ರತಿಯೊಂದು ಆಗುಹೋಗಿಗೆ ಹಣೆಬರಹ, ಕೆಟ್ಟಕಾಲ ಎಂದು ದೈವದ ಮೇಲೆ ಭಾರ ಹಾಕಿ ಕೈಕಟ್ಟಿ ಕುಳಿತುಕೊಳ್ಳುವವರಿಗೆ ಯಾವ ದೇವರೂ ಸಹಾಯಹಸ್ತ ಚಾಚುವುದಿಲ್ಲ.



ದೇವರ ಅಸ್ತಿತ್ವದ ಕುರಿತು ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ತಮ್ಮ 'ಐನ್‌ಸ್ಟೀನ್-ದಿ ಹ್ಯೂಮನ್ ಸೈಡ್' ಪುಸ್ತಕದಲ್ಲಿ ಹೀಗೆ ವಿವರಿಸುತ್ತಾರೆ: 'ದೇವರು ಎಂಬ ವ್ಯಕ್ತಿಯೊಬ್ಬನಿದ್ದಾನೆ ಎಂದು ನಾನು ನಂಬುವುದಿಲ್ಲ. ಹಾಗೆಂದು ಕಲ್ಪಿಸಿಕೊಳ್ಳುವುದೂ ನನಗೆ ಸಾಧ್ಯವಿಲ್ಲ. ಮನುಷ್ಯನ ಪ್ರಯತ್ನಗಳಲ್ಲಿ ಅತ್ಯಂತ ಮುಖ್ಯವಾದದ್ದೆಂದರೆ, ನಮ್ಮ ಕರ್ಮವೆಲ್ಲ ನೀತಿಯುತವಾಗಿರಬೇಕೆಂದು ಮಾಡುವ ಪ್ರಯತ್ನ. ನಮ್ಮ ಉಳಿವು, ಅಸ್ತಿತ್ವ ಕೂಡ ಅದನ್ನು ಅವಲಂಬಿಸಿದೆ. ನಾವು ಮಾಡುವ ಕೆಲಸ ನೀತಿಯುತವಾಗಿದ್ದರೆ ಮಾತ್ರ ಬದುಕಿಗೊಂದು ಸೌಂದರ್ಯ, ಗಾಂಭೀರ್ಯ ಇರುತ್ತದೆ'.

'ದೇವರು' ಪುಸ್ತಕ ಬರೆದು ದೇವರ ಅಸ್ತಿತ್ವವನ್ನೇ ಪ್ರಶ್ನಿಸಿದ ಎ.ಎನ್.ಮೂರ್ತಿ ರಾವ್ ಅವರು 'ನಾವು ನಂಬಿಕೆ ಇಡಬಹುದಾದ ಏಕಮೇವ ದೇವರು ಮನುಷ್ಯರಲ್ಲಿ ವಾಸಿಸುವ ಒಳ್ಳೆಯತನ-ದುಷ್ಟತನದೊಂದಿಗೆ ವಾಸಿಸುವ ಒಳ್ಳೆಯತನ. ನಾವು ನಮ್ಮೊಳಗಿರುವ ಒಳ್ಳೆಯತನವೆನ್ನುವ ಆ ದೇವರನ್ನು ಚೈತನ್ಯಗೊಳಿಸಬೇಕು, ಅವನನ್ನು ದುಷ್ಟತನಕ್ಕೆ ಎದುರಾಗಿ ನಿಲ್ಲಿಸಬೇಕು' ಎಂದಿರುವರು.

ಮನುಷ್ಯ ಹಿಂಸಾಪ್ರಿಯನೇ ವಿನಾ ದೇವರು ಹಿಂಸಾವಿನೋದಿಯಲ್ಲ. ದೇವರ ಹೆಸರಿನಲ್ಲಿ ಮನುಷ್ಯ ರೂಢಿಗೆ ತಂದಿರುವ ಪದ್ಧತಿಗಳಿವು. ಆದರೆ ನ್ಯಾಯ, ಸತ್ಯ ಮತ್ತು ಪ್ರಾಮಾಣಿಕವಾಗಿ ಬದುಕುವ ಮನುಷ್ಯ ಅಂಧಾನುಚರಣೆಗಳಿಗೆ ಹೆದರುವ ಅಗತ್ಯವಿಲ್ಲ. ನಾವು ಹೆದರಬೇಕಾಗಿರುವುದು ನಮ್ಮೊಳಗಿನ ದುಷ್ಟತನಕ್ಕೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಿದೆ.

## ವಾಚಕರ ವಾಣಿ

### ವಾಸ್ತವದಿಂದ ದೂರವಾದ 'ಆತ್ಮಾವಲೋಕನ'

ವಿಧಾನಸಭಾ ಚುನಾವಣೆಯಲ್ಲಿನ ಸೋಲಿಗೆ ಬಿಜೆಪಿ ನಡೆಸಿದ ಆತ್ಮಾವಲೋಕನ ಸಭೆಯಲ್ಲಿ ಬಹುತೇಕ ಎಲ್ಲ ನಾಯಕರು ಕಾಂಗ್ರೆಸ್‌ನ ಗ್ಯಾರಂಟಿಗಳೇ ಪಕ್ಷದ ಸೋಲಿಗೆ ಕಾರಣ ಎಂದು ಹೇಳಿರುವುದಾಗಿ ವರದಿಯಾಗಿದೆ. ವಾಸ್ತವವಾಗಿ ಇದು ಶುದ್ಧ ಸುಳ್ಳು. ಗ್ಯಾರಂಟಿಗಳಿಂದ ಸ್ವಲ್ಪಮಟ್ಟಿಗೆ ಕಾಂಗ್ರೆಸ್‌ಗೆ ಲಾಭವಾಗಿರಬಹುದು. ಆದರೆ ಮುಖ್ಯವಾಗಿ, ಮಿತಿಮೀರಿದ ಭ್ರಷ್ಟಾಚಾರ, ಕೆಲವು ಮಂತ್ರಿಗಳ ದುರಹಂಕಾರದ ವರ್ತನೆ, ಆಗಿನ ಮುಖ್ಯಮಂತ್ರಿಯವರ ದುರ್ಬಲ ನಾಯಕತ್ವ, ಮೋದಿ ಅವರೊಬ್ಬರನ್ನೇ ನಂಬಿ ನಡೆಸಿದ ರೋಡ್ ಷೋ, ಸಾರ್ವಜನಿಕ ಸಭೆಗೆ ಸೇರುತ್ತಿದ್ದ ಜನರನ್ನು ನೋಡಿ, ಅವೆಲ್ಲವೂ ಮತಗಳಾಗಿ ಪರಿವರ್ತನೆಯಾಗುತ್ತವೆ ಎಂದು ತಪ್ಪಾಗಿ ಭಾವಿಸಿದ್ದು, ದೇಶದ ಪ್ರಧಾನಿಯೊಬ್ಬರನ್ನು ಹತ್ತಿರದಿಂದ ನೋಡುವ ಕುತೂಹಲದಿಂದ ಜನ ಬರುತ್ತಿದ್ದಾರೆ ಎಂಬುದನ್ನು ನಾಯಕರು ಗ್ರಹಿಸದೇ ಹೋದದ್ದು, ವ್ಯವಸ್ಥಿತ ರೀತಿಯಲ್ಲಿ ಚುನಾವಣಾ ಪ್ರಚಾರ ಮಾಡಲು ವಿಫಲರಾದದ್ದು, ಮುಖ್ಯವಾಗಿ ಬಡ ಮತ್ತು ತಳಸಮುದಾಯದವರ ಅತೃಪ್ತಿಯ ಅಲೆ... ಇಂತಹ ವಾಸ್ತವಗಳನ್ನು ಬಿಟ್ಟು ಬೇರೆಲ್ಲಾ ಕಾರಣಗಳು ಮುನ್ನೆಲೆಗೆ ಬಂದಿವೆ.

**ಬೂಕನಕೆರೆ ವಿಜೇಂದ್ರ,** ಮೈಸೂರು

**ಈಗ ಗ್ಯಾರಂಟಿ**
ಆಯಿತು ಸರ್ಕಾರದ ನಡೆ
ಈಗ ಗ್ಯಾರಂಟಿ...
ಯೋಜನೆಗಳ ಬಳಸದಿರಲಿ
ಫಲಾನುಭವಿಗಳು
ಬೇಕಾಬಿಟ್ಟಿ!
**ಮ.ಗು.ಬಸವಣ್ಣ**
ನಂಜನಗೂಡು

### ಗದ್ದಲ ಸಲ್ಲ, ಸೌಹಾರ್ದದ ನಡೆ ಇರಲಿ

ರಾಜ್ಯ ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೇವೆ ಭಾನುವಾರ ಮಧ್ಯಾಹ್ನದಿಂದ ಅಧಿಕೃತವಾಗಿ ಆರಂಭವಾಗಿದೆ. ಈ ಸಂದರ್ಭದಲ್ಲಿ ಕೆಲ ಕಾಲ ಸಾರಿಗೆ ಸಿಬ್ಬಂದಿ ಮತ್ತು ಪ್ರಯಾಣಿಕರ ನಡುವೆ ಸಣ್ಣಪುಟ್ಟ ಗದ್ದಲ ನಡೆಯುತ್ತಿದ್ದುದು ಕಂಡುಬಂತು. ಸರಿಯಾದ ಮಾಹಿತಿ ಕೊರತೆಯೋ ಮತ್ತೆ ಇನ್ನೇನೋ ಕಾರಣಕ್ಕೆ ಹೀಗೆ ಗದ್ದಲ ಆಗಿರಬಹುದು. ಫಲಾನುಭವಿಗಳು ಮತ್ತು ಸಿಬ್ಬಂದಿ ವರ್ಗ ಸೌಹಾರ್ದದಿಂದ ನಡೆದುಕೊಳ್ಳುವುದು ವಿಹಿತ.

**ರುದ್ರಮೂರ್ತಿ ಎಂ.ಜೆ.,** ಚಿತ್ರದುರ್ಗ

### ಬೇಕಾಗಿದೆ ದೂರಗಾಮಿ ಆಡಳಿತಾತ್ಮಕ ಸ್ಪಷ್ಟತೆ

ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಸೇವೆಯ ಲಾಭ ಸಿಗಬೇಕಾದರೆ ಕರಾವಳಿ ಜಿಲ್ಲೆಗಳಲ್ಲಿ ಸರ್ಕಾರಿ ಸಾರಿಗೆ ವ್ಯವಸ್ಥೆ ಬಲಗೊಳ್ಳಬೇಕೆಂಬ ಕೂಗು ಎದ್ದಿರುವುದನ್ನು ಗಮನಿಸಿದರೆ, ರಾಜ್ಯ ಸರ್ಕಾರಕ್ಕೆ ತಾನು ತೆಗೆದುಕೊಂಡಿರುವ 'ಕ್ರಾಂತಿಕಾರಿ' ನಿರ್ಧಾರಗಳ ಪೂರ್ಣ ಪರಿಣಾಮಗಳ ಅರಿವು ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಹಲವು ಹಳ್ಳಿಗಳಿಗೆ ಸೇವೆ ಒದಗಿಸುವುದು ದಶಕಗಳಿಂದಲೂ ಸರ್ಕಾರಿ ಬಸ್ಸುಗಳಿಗೆ ಸಾಧ್ಯವಾಗಿಲ್ಲ. ಅಂಥ ಕಡೆಗಳಲ್ಲೆಲ್ಲ ಸಹಕಾರ ಸಾರಿಗೆ ಮತ್ತು ಖಾಸಗಿ ಬಸ್ ಸರ್ವಿಸ್ ಕಂಪನಿಗಳು ಉತ್ತಮ ಸೇವೆ ಕೊಡುತ್ತಾ ಬಂದಿವೆ. ಮಹಿಳೆಯರಿಗೆ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣವನ್ನು ಉಚಿತವಾಗಿಸಿ, ಉತ್ತಮ ರೀತಿಯಲ್ಲಿ ಸೇವೆ ನೀಡುತ್ತಿರುವ ಖಾಸಗಿ ಬಸ್ ಕಂಪನಿಗಳ ಅಸ್ತಿತ್ವಕ್ಕೆ ಸವಾಲು ಹಾಕಿರುವ ಸರ್ಕಾರದ ಕ್ರಮದಿಂದ ಇನ್ನು ಯಾವ ಯಾವ ರೀತಿಯ ಸಮಸ್ಯೆಗಳು ಬರುತ್ತವೋ ಗೊತ್ತಿಲ್ಲ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಮಕ್ಕಳು ಮತ್ತು ವೃದ್ಧರ ಆಹಾರ ಹಾಗೂ ಎಲ್ಲರ ಆರೋಗ್ಯದಂತಹ ಕ್ಷೇತ್ರಗಳು ಉಚಿತ ಸೇವೆಗೆ ಅರ್ಹ. ಆದರೆ, ಅಧಿಕಾರಸ್ಥರು ಸರ್ಕಾರಿ ಶಾಲೆಗಳು ಮತ್ತು ಆರೋಗ್ಯ ಸೇವೆಯನ್ನು ನಿರ್ಲಕ್ಷಿಸುತ್ತಾ ಬಂದಿದ್ದಾರೆ. ಖಾಸಗಿ ಶಾಲಾ ಕಾಲೇಜುಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಆದರೆ ಶಿಕ್ಷಣ ದುಬಾರಿಯಾಗಿದೆ. ಸರ್ಕಾರಿ ಅಥವಾ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಸಾಯಲು ಬಿಟ್ಟ ರಾಜಕಾರಣಿಗಳೇ ಮಕ್ಕಳ ಶಿಕ್ಷಣವನ್ನು ತಮ್ಮ ಕಿಸೆ ತುಂಬಿಸಿಕೊಳ್ಳುವ ಖಾಸಗಿ ಉದ್ಯಮವನ್ನಾಗಿಸಿಕೊಂಡಿದ್ದಾರೆ. ಕೆಲವನ್ನು ಹೊರತುಪಡಿಸಿ ಬಹುತೇಕ ಖಾಸಗಿ ಶಾಲೆ ಮತ್ತು ಆಸ್ಪತ್ರೆಗಳೊಂದಿಗೆ ಗುಣಮಟ್ಟದಲ್ಲಿ ಸ್ಪರ್ಧೆ ಒಡ್ಡುವುದು ಸರ್ಕಾರಿ ಶಾಲೆ ಹಾಗೂ ಆಸ್ಪತ್ರೆಗಳಿಗೆ ಇಂದಿಗೂ ಸಾಧ್ಯವಾಗಿಲ್ಲ.

ಸರ್ಕಾರಿ ಬಸ್ ಸೇವೆ ಇಲ್ಲದಿರುವ ಕಡೆ ಖಾಸಗಿಯವರು ಅದನ್ನು ಒದಗಿಸುತ್ತಿದ್ದಾರೆ. ಈಗ 'ಮಹಿಳೆಯರಿಗೆ ಉಚಿತ' ಎನ್ನುವ ನೀತಿಯು ಖಾಸಗಿ ಸಾಮಾನ್ಯ ಸಾರಿಗೆ ವ್ಯವಸ್ಥೆಯ ಮೇಲೆ ಪರೋಕ್ಷವಾಗಿ ಒತ್ತಡ ಹೇರುತ್ತದೆ. ಯಾವುದರಲ್ಲಿ ಗುಣಮಟ್ಟ ಕಾಯ್ದುಕೊಳ್ಳುತ್ತ ಅರ್ಹರಿಗೆ ಸಿಗುವ ಸೇವೆಗಳನ್ನು ಹಕ್ಕಿನ ರೂಪದಲ್ಲಿ ತಲುಪಿಸಬೇಕೆಂಬ ನೈತಿಕ ಮತ್ತು ದೂರಗಾಮಿ ಆಡಳಿತಾತ್ಮಕ ಸ್ಪಷ್ಟತೆ ಸರ್ಕಾರಕ್ಕೆ ಇಲ್ಲದಿರುವುದು ಉಚಿತ ಗ್ಯಾರಂಟಿಗಳ ಮೂಲಭೂತ ಸಮಸ್ಯೆ ಎಂದೇ ಹೇಳಬೇಕಾಗುತ್ತದೆ.

**ಶ್ರೀಕಂಠ,** ಬೆಂಗಳೂರು

### ಕಸಾಪ ನಿಲುವು ಎತ್ತ ಸಾಗಿದೆ?

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸ ಇರುವ ಈ ಸಂಸ್ಥೆಯ ನೇತೃತ್ವ ವಹಿಸುವುದೇ ಒಂದು ದೊಡ್ಡ ಗೌರವ. ಕಾಲಕಾಲಕ್ಕೆ ಅನೇಕ ಮಹನೀಯರು ಆ ಗೌರವ ಪಡೆದಿದ್ದಾರೆ ಹಾಗೂ ತಮ್ಮ ವಿದ್ವತ್ತಿನ ಪ್ರತಿಭೆಯನ್ನು ಬಳಸಿ ಮುನ್ನಡೆಸುವ ಕೆಲಸ ಮಾಡಿದ್ದಾರೆ.

ಜಿ.ನಾರಾಯಣ ಮತ್ತು ಹಂಪನಾ ಅವರು ಅಧ್ಯಕ್ಷರಾಗಿದ್ದಾಗ ಕಸಾಪ ಅಂಗಳದಲ್ಲಿ ಸದಾಕಾಲವೂ ಹಬ್ಬದ ವಾತಾವರಣ ಇತ್ತು. ಸಲಹೆ ಸೂಚನೆಗಳನ್ನು ನೀಡುವವರಿಗೆ ಹಾಗೂ ಪಡೆಯುವವರಿಗೆ ಕಸಾಪ ಬಾಗಿಲು ಸದಾ ತೆರೆದಿತ್ತು. ಸಮ್ಮೇಳನಕ್ಕಷ್ಟೇ ಮಹತ್ವ ಕೊಡದೆ, ನಾಡಿನ ಬೇರೆ ಬೇರೆ ಕಡೆಗಳಲ್ಲಿ ಸಾಹಿತ್ಯ ಕಮ್ಮಟಗಳು, ಗೋಷ್ಠಿಗಳು ನಡೆಯುತ್ತಿದ್ದವು. ಈಗ ಕಸಾಪ ನಿಲುವು ಎತ್ತ ಸಾಗುತ್ತಿದೆ?

ಅಧಿಕಾರಶಾಹಿ ಸಂಸ್ಥೆಯಾಗಿ ರೂಪಾಂತರ ಹೊಂದಿದೆ ಎಂಬುದು, ಮೊದಲಿನಿಂದಲೂ ಕಸಾಪ ಜೊತೆಯಲ್ಲಿ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಅನೇಕ ಸಂಘ ಸಂಸ್ಥೆಗಳ ಆರೋಪ. ಅಧ್ಯಕ್ಷರಿಗೆ ಅವರನ್ನೆಲ್ಲಾ ಕರೆದು ಕೂಡಿಸಿ ಅವರ ಅಹವಾಲನ್ನು ಕೇಳಿ ಬಗೆಹರಿಸಬಹುದಾದ ಹಿರಿತನವಿದೆ. ನಾಡು ನುಡಿ ಮತ್ತು ಕಸಾಪ ಹಿತದೃಷ್ಟಿಯಿಂದ ಅದರ ಅಗತ್ಯವೂ ಇದೆ. ಮಾತಿನಲ್ಲೇ ಬಗೆಹರಿಸಬಹುದಾದ ಈ ಸಂಗತಿಯನ್ನು ಲಘುವಾಗಿ ಪರಿಗಣಿಸಿ, ಕನ್ನಡದ ಹಿತಚಿಂತಕರಿಂದಲೇ ಸೋಮವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯಲು ಬಿಟ್ಟಿರುವುದು ಎಷ್ಟು ಸರಿ?

**ತಾ.ಸಿ.ತಿಮ್ಮಯ್ಯ,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಉದ್ಯೋಗ ಖಾತರಿಗೆ ಕತ್ತರಿ



• ಅಮೃತ ಕಿರಣ್ ಬಿ.ಎಂ.

‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ’ಯ (ಎಂಜಿಎನ್‌ಆರ್‌ಇಜಿಎಸ್-ನರೇಗಾ) ಫಲಾನುಭವಿ ಕುಟುಂಬಗಳ ಸಂಖ್ಯೆಯು ಕೋವಿಡ್ ನಂತರದ ಆರ್ಥಿಕ ವರ್ಷದಲ್ಲಿ ಇಳಿಕೆಯಾಗುತ್ತ ಸಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗದ ‘ಗ್ಯಾರಂಟಿ’ ನೀಡಲು 2005ರಲ್ಲಿ ಅಂದಿನ ಯುಪಿಎ ನೇತೃತ್ವದ ಸರ್ಕಾರ ಆರಂಭಿಸಿದ್ದ ಯೋಜನೆಯು ಕೋವಿಡ್ ಬಾಧಿಸಿದ್ದ ವರ್ಷಗಳಲ್ಲಿ ಗ್ರಾಮೀಣರ ಬದುಕಿಗೆ ಹೆಚ್ಚು ಆಸರೆಯಾಗಿತ್ತು. 2020–21ರ ಆರ್ಥಿಕ ವರ್ಷದಲ್ಲಿ 7.55 ಕೋಟಿ ಕುಟುಂಬಗಳು ಯೋಜನೆಯ ಲಾಭ ಪಡೆದುಕೊಂಡಿದ್ದವು. ಇದು ಈವರೆಗಿನ ಗರಿಷ್ಠ ಸಂಖ್ಯೆಯಾಗಿದೆ. ಆದರೆ ಕೋವಿಡ್ ನಂತರದ ಆರ್ಥಿಕ ವರ್ಷಗಳಲ್ಲಿ ಫಲಾನುಭವಿ ಕುಟುಂಬಗಳ ಸಂಖ್ಯೆ ಕುಸಿಯುತ್ತಿದೆ. 2022–23ರ ಆರ್ಥಿಕ ವರ್ಷದಲ್ಲಿ ಫಲಾನುಭವಿ ಕುಟುಂಬಗಳ ಸಂಖ್ಯೆ 6.19 ಕೋಟಿಗೆ ಇಳಿಕೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯದ ದತ್ತಾಂಶಗಳು ತಿಳಿಸುತ್ತವೆ.


ಕೋವಿಡ್ ಹರಡುವುದನ್ನು ತಡೆಯುವ ಉದ್ದೇಶದಿಂದ ದೇಶದಾದ್ಯಂತ ವಿಧಿಸಲಾದ ಲಾಕ್‌ಡೌನ್‌ನಿಂದ ನಗರವಾಸಿ ದಿನಗೂಲಿ ಕಾರ್ಮಿಕರು ಸಂಕಷ್ಟಕ್ಕೆ ಒಳಗಾದರು. ಅವರು ತಮ್ಮ ತಮ್ಮ ಗ್ರಾಮಗಳಿಗೆ ಮರಳಿದರು. ಗ್ರಾಮೀಣ ಭಾಗದಲ್ಲಿ ಜಾರಿಯಲ್ಲಿದ್ದ ಉದ್ಯೋಗ ಖಾತರಿ ಯೋಜನೆಯು ವಲಸೆ ಕಾರ್ಮಿಕರ ಹಸಿವನ್ನು ನೀಗಿಸಿತು. ತಮ್ಮ ಗ್ರಾಮದಲ್ಲಿಯೇ ಕಾರ್ಮಿಕರು ಕೆಲಸ ಪಡೆದುಕೊಂಡರು.


ಕೋವಿಡ್ ಬಳಿಕ ಒಂದಷ್ಟು ಜನರು ತಮ್ಮ ಊರುಗಳಲ್ಲೇ ಕಾಯಂ ಆಗಿ ನೆಲೆ ನಿಂತರೆ, ಇನ್ನೊಂದಿಷ್ಟು ಜನರು ನಗರ ಪ್ರದೇಶಗಳಿಗೆ ಮತ್ತೆ ವಲಸೆ ಹೋದರು. ಇನ್ನೂ ಕೆಲವರು ಇತರೆ ಉದ್ಯೋಗಗಳತ್ತ ಮುಖ ಮಾಡಿದರು. ಆದರೆ ಫಲಾನುಭವಿ ಕುಟುಂಬಗಳ ಸಂಖ್ಯೆಯಲ್ಲಿ ಕುಸಿತ ಕಾಣಲು ಬೇರೆಯೇ ಕಾರಣಗಳಿವೆ ಎಂದು ಸಾಮಾಜಿಕ ಕಾರ್ಯಕರ್ತರು ಪಟ್ಟಿ ಮಾಡಿದ್ದಾರೆ. ಕಾರ್ಮಿಕರ ದಿನಗೂಲಿ ಪಾವತಿಯಲ್ಲಿ ವಿಳಂಬ ಮಾಡಲಾಗುತ್ತಿದೆ ಎಂಬ ಆರೋಪವಿದೆ. ಇದು, ಕಾರ್ಮಿಕರು ಅನ್ಯ ಕೆಲಸಗಳತ್ತ ಮುಖಮಾಡಲು ಕಾರಣ ಎನ್ನಲಾಗಿದೆ. ಕೆಲಸ ಮುಗಿದ ಬಳಿಕ ಹಣ ಪಾವತಿಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸ್ಥಾಯಿ ಸಮಿತಿಯೂ ಬೊಟ್ಟು ಮಾಡಿದೆ. ಸಮಿತಿ ಸದಸ್ಯರು ಖುದ್ದು ಭೇಟಿ ನೀಡಿ, ಪಾವತಿಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ವರದಿ ಮಾಡಿದ್ದಾರೆ. ಒಂದು ವೇಳೆ ಪಾವತಿ ವಿಳಂಬವಾದರೆ, ಅದಕ್ಕೆ ಪರಿಹಾರ ನೀಡಬೇಕು ಎಂದು ನರೇಗಾ ಕಾಯ್ದೆಯ ಎರಡನೇ ಪರಿಚ್ಛೇದದ 29ನೇ ಪ್ಯಾರಾದಲ್ಲಿ ಹೇಳಲಾಗಿದೆ. ಆದರೆ ಅದು ಸಹ ಪಾಲನೆಯಾಗುತ್ತಿಲ್ಲ ಎಂದು 2022–23ನೇ ಸಾಲಿನ ಸ್ಥಾಯಿ ಸಮಿತಿ ವರದಿ ಆಕ್ಷೇಪ ವ್ಯಕ್ತಪಡಿಸಿದೆ. 2023ರ ಜನವರಿ 25ರ ಮಾಹಿತಿಯಂತೆ, ಕೇಂದ್ರ ಸರ್ಕಾರವು ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ರಾಜ್ಯಗಳಿಗೆ ₹6,231 ಕೋಟಿ ವೇತನ ಬಾಕಿ ಪಾವತಿಸಬೇಕಿದೆ.

ಕೋವಿಡ್ ಬಳಿಕ ಎಲ್ಲವೂ ಸಹಜ ಸ್ಥಿತಿಗೆ ಬಂದಿದ್ದು, ಗ್ರಾಮೀಣ ಭಾಗದ ಆರ್ಥಿಕತೆ ಸುಧಾರಿಸಿದೆ ಎಂದು 2022–23ರ ಆರ್ಥಿಕ ಸಮೀಕ್ಷೆಯ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಉತ್ತಮ ಕೆಲಸದ ಅವಕಾಶಗಳ ಬಾಗಿಲು ತೆರೆದಿದ್ದರಿಂದ, ಗ್ರಾಮೀಣ ಜನರಿಗೆ ಉದ್ಯೋಗ ಖಾತರಿಯ ಮೇಲಿನ ಅವಲಂಬನೆ ಕಡಿಮೆಯಾಯಿತು ಎಂದು ವರದಿ ಹೇಳಿತ್ತು.

ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಕೇಂದ್ರ ಸರ್ಕಾರ ಕಡಿತಗೊಳಿಸಿದೆ. ಕೋವಿಡ್ ಇದ್ದ ಎರಡು ಆರ್ಥಿಕ ವರ್ಷಗಳಲ್ಲಿ ಅತಿಹೆಚ್ಚು ಕಾರ್ಮಿಕರು ಯೋಜನೆಯಡಿ ಕೆಲಸ ಮಾಡಿದ್ದರೂ ಈ ಆರ್ಥಿಕ ವರ್ಷದಲ್ಲಿ ಅನುದಾನವನ್ನು ಇಳಿಸಿದೆ. ಅನುದಾನ ಕಡಿತದ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸ್ಥಾಯಿ ಸಮಿತಿಯ ವರದಿಯಲ್ಲಿಯೂ ಆಕ್ಷೇಪ ವ್ಯಕ್ತವಾಗಿತ್ತು. ರಾಜ್ಯ ಸರ್ಕಾರಗಳಿಗೆ ಕೇಂದ್ರ ಬಿಡುಗಡೆ ಮಾಡಬೇಕಿರುವ ಅನುದಾನವೂ ವಿಳಂಬವಾಗುತ್ತಿದೆ.

ಕಾರ್ಮಿಕರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ಜಾರಿಗೆ ತಂದಿರುವ ಆಧಾರ್ ಆಧಾರಿತ ‘ನ್ಯಾಷನಲ್ ಮೊಬೈಲ್ ಮಾನಿಟರಿಂಗ್ ಸಿಸ್ಟಂ’ ಪಾವತಿ ವ್ಯವಸ್ಥೆ ಕೂಡಾ ಇದಕ್ಕೆ ಒಂದು ಕಾರಣ ಎಂದು ಸ್ಥಾಯಿ ಸಮಿತಿ ಆರೋಪಿಸಿತ್ತು. ಅಂಚಿನ ಸಮುದಾಯಗಳಿಗೆ ಸೇರಿದ ಹಾಗೂ ಆರ್ಥಿಕವಾಗಿ ದುರ್ಬಲರಾದ ಕೂಲಿಕಾರ್ಮಿಕರು ದಿನಗೂಲಿ ಪಡೆಯಬೇಕಾದರೆ, ಅವರು ಆ್ಯಪ್ ಆಧಾರಿತ ಪಾವತಿ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡಿರಬೇಕು ಎಂದು ಸರ್ಕಾರ ಬಯಸುವುದು ಸರಿಯಲ್ಲ ಎಂದು ಕನಿಮೊಳಿ ಅಧ್ಯಕ್ಷತೆಯ ಸ್ಥಾಯಿ ಸಮಿತಿ ಅಸಮಾಧಾನ ವ್ಯಕ್ತಪಡಿಸಿತ್ತು.





ಆರಂಭದಲ್ಲಿ ದೇಶದ ಅತಿ ಹಿಂದುಳಿದಿರುವ 200 ಜಿಲ್ಲೆಗಳಲ್ಲಿ ಯೋಜನೆಯನ್ನು ಜಾರಿಗೆ ತರಲಾಗಿತ್ತು. 2007–08ರಲ್ಲಿ ಇದಕ್ಕೆ 130 ಜಿಲ್ಲೆಗಳನ್ನು ಸೇರಿಸಲಾಯಿತು. 2008–09ರ ಅವಧಿಯಲ್ಲಿ ಇಡೀ ದೇಶಕ್ಕೆ ಅನ್ವಯ ಮಾಡಲಾಯಿತು. ಗ್ರಾಮೀಣ ಭಾಗದ ಪ್ರತಿ ಕುಟುಂಬದ ವಯಸ್ಕ ವ್ಯಕ್ತಿಗೆ ಒಂದು ವರ್ಷದಲ್ಲಿ ಗರಿಷ್ಠ 100 ದಿನಗಳ ಕೆಲಸವನ್ನು ಖಚಿತವಾಗಿ ನೀಡುವುದು ಈ ಯೋಜನೆಯ ಉದ್ದೇಶ

## ಉದ್ಯೋಗದ ದಿನ ಖೋತಾ

ಕುಟುಂಬಕ್ಕೆ ನೀಡುತ್ತಿದ್ದ ಸರಾಸರಿ ಉದ್ಯೋಗದ ದಿನಗಳಲ್ಲಿ ಕಡಿಮೆಯಾಗಿದೆ. 2020–21ನೇ ಆರ್ಥಿಕ ವರ್ಷದಲ್ಲಿ ಕುಟುಂಬವೊಂದರ ಸದಸ್ಯನಿಗೆ ಸರಾಸರಿ 51.52 ದಿನಗಳ ಕೆಲಸ ನೀಡಲಾಗಿತ್ತು. ಇವುಗಳ ಸಂಖ್ಯೆ 2022–23ನೇ ಆರ್ಥಿಕ ವರ್ಷದಲ್ಲಿ 47.84ಕ್ಕೆ ಕುಸಿದಿದೆ. ಎರಡು ವರ್ಷಗಳ ಅವಧಿಯಲ್ಲಿ ಸುಮಾರು ನಾಲ್ಕು ದಿನಗಳಷ್ಟು ಕೆಲಸ ಖೋತಾ ಆಗಿದೆ. ಕೋವಿಡ್ ಪೂರ್ವದ (2019–20;48.4) ಅವಧಿಗಿಂತಲೂ ಕಳೆದ ಆರ್ಥಿಕ ವರ್ಷದಲ್ಲಿ ಕೆಲಸದ ದಿನಗಳು ಇಳಿಕೆಯಾಗಿವೆ.




## 100 ದಿನಗಳ ಕೆಲಸ: 4 ವರ್ಷಗಳಲ್ಲೇ ಕನಿಷ್ಠ

ವರ್ಷದಲ್ಲಿ ಗರಿಷ್ಠ 100 ದಿನಗಳವರೆಗೆ ಕೆಲಸ ಮಾಡಲು ಅವಕಾಶವಿದೆ. ಆದರೆ ಈ ಪ್ರಮಾಣದ ಕೆಲಸ ಪಡೆದ ಕುಟುಂಬಗಳ ಸಂಖ್ಯೆ ಕಡಿಮೆಯಾಗಿದೆ ಎಂದು ದತ್ತಾಂಶಗಳು ಹೇಳುತ್ತವೆ. 2022–23ನೇ ಆರ್ಥಿಕ ವರ್ಷದಲ್ಲಿ 36.01 ಲಕ್ಷ ಕುಟುಂಬಗಳು ಮಾತ್ರ 100 ದಿನ ಕೆಲಸ ಮಾಡಿವೆ. ಇದು ನಾಲ್ಕು ವರ್ಷಗಳಲ್ಲೇ ಕನಿಷ್ಠ. 2020–21ನೇ ಆರ್ಥಿಕ ವರ್ಷದಲ್ಲಿ 71.97 ಲಕ್ಷ ಕುಟುಂಬಗಳು ನೂರು ದಿನಗಳ ಉದ್ಯೋಗದ ಸಂಪೂರ್ಣ ಲಾಭ ಪಡೆದಿದ್ದವು.

### 100 ದಿನಗಳ ಕೆಲಸ ಪಡೆದ ಕುಟುಂಬಗಳು

**40.60** ಲಕ್ಷ — 2019-20ರ ಫಲಾನುಭವಿ ಕುಟುಂಬಗಳ ಸಂಖ್ಯೆ

**71.97** ಲಕ್ಷ — 2020-21ರ ಫಲಾನುಭವಿ ಕುಟುಂಬಗಳ ಸಂಖ್ಯೆ

**59.14** ಲಕ್ಷ — 2021-22ರ ಫಲಾನುಭವಿ ಕುಟುಂಬಗಳ ಸಂಖ್ಯೆ

**36.01** ಲಕ್ಷ — 2022-23ರ ಫಲಾನುಭವಿ ಕುಟುಂಬಗಳ ಸಂಖ್ಯೆ

## ₹29,400 ಕೋಟಿ ಕಡಿತ

ಕೇಂದ್ರ ಸರ್ಕಾರವು ನರೇಗಾ ಯೋಜನೆಗೆ 2022–23ನೇ ಆರ್ಥಿಕ ವರ್ಷದ ಬಜೆಟ್‌ನಲ್ಲಿ ₹73 ಸಾವಿರ ಕೋಟಿಯನ್ನು ತೆಗೆದಿರಿಸಿತ್ತು. ಪರಿಷ್ಕೃತ ಅಂದಾಜಿನಲ್ಲಿ ಇದನ್ನು ₹89,400 ಕೋಟಿಗೆ ಹೆಚ್ಚಳ ಮಾಡಿತ್ತು. ಆದರೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅನುದಾನವನ್ನು ₹60 ಸಾವಿರ ಕೋಟಿಗೆ ಮಿತಿಗೊಳಿಸಿದೆ. ಅಂದರೆ ಒಂದು ವರ್ಷದಲ್ಲಿ ₹29,400 ಕೋಟಿಯಷ್ಟು ಅನುದಾನ ಕಡಿತ ಮಾಡಲಾಗಿದೆ. ಈ ಕಡಿತವು ಗ್ರಾಮೀಣರಿಗೆ ಕಟ್ಟಕಡೆಯ ಕೆಲಸದ ಆಸರೆ ಎನಿಸಿರುವ ಉದ್ಯೋಗ ಖಾತರಿ ಯೋಜನೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ತಜ್ಞರು ಹೇಳಿದ್ದಾರೆ.




ಆಧಾರ: ನರೇಗಾ ಡ್ಯಾಶ್‌ಬೋರ್ಡ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸ್ಥಾಯಿಸಮಿತಿಯ 2022–23ರ ವರದಿ, ಕೇಂದ್ರ ಬಜೆಟ್ 2023–24, ಪಿಐಬಿ

## ತೆರೆಗೆ ಬರಲು ‘ರಾಜು ಜೇಮ್ಸ್‌ಬಾಂಡ್’ ತಯಾರಿ

**ಗುರುನಂದನ್** ನಟನೆಯ ‘ಫಸ್ಟ್ ರ‍್ಯಾಂಕ್ ರಾಜು’ ಚಿತ್ರ ಯಶಸ್ವಿಯಾಗಿತ್ತು. ಬಳಿಕ ಅವರು ‘ರಾಜು ಕನ್ನಡ ಮೀಡಿಯಂ’ ಚಿತ್ರದಲ್ಲಿ ನಟಿಸಿದ್ದರು. ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ನಿರೀಕ್ಷಿಸಿದಷ್ಟು ಗಳಿಕೆ ಮಾಡಲಿಲ್ಲ. ಒಂದು ವಿರಾಮ ತೆಗೆದುಕೊಂಡಿದ್ದ ಅವರು, ನಂತರ ‘ರಾಜು ಜೇಮ್ಸ್ ಬಾಂಡ್’ ಚಿತ್ರ ಘೋಷಿಸಿದ್ದರು. ಈ ಚಿತ್ರ ಕೂಡ ಚಿತ್ರೀಕರಣದ ಬಳಿಕ ಹೆಚ್ಚು ಅಪ್‌ಡೇಟ್ ಇರಲಿಲ್ಲ. ಇದೀಗ ತಂಡ ಚಿತ್ರದ ಒಂದು ಹಾಡು ಬಿಡುಗಡೆಗೊಳಿಸಿದ್ದು, ಆಗಸ್ಟ್‌ನಲ್ಲಿ ಚಿತ್ರ ತೆರೆಗೆ ಬರಲಿದೆ ಎಂಬ ಮಾಹಿತಿ ನೀಡಿದೆ.

‘ಬೇಕಿತ್ತಾ ಬೇಕಿತ್ತಾ, ಈ ಲವ್ವು ಬೇಕಿತ್ತಾ’ ಎಂಬ ಹಾಡು ಬಿಡುಗಡೆಗೊಂಡಿದೆ. ಅಂತೋನಿ ದಾಸ್ ಹಾಡಿರುವ ಈ ಹಾಡಿಗೆ ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ‘ಚಿತ್ರೀಕರಣ ಮುಕ್ತಾಯವಾಗಿದೆ. ಆಗಸ್ಟ್‌ನಲ್ಲಿ ತೆರೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ. ಲಂಡನ್‌ನಲ್ಲಿ 21 ದಿನಗಳ ಚಿತ್ರೀಕರಣವಾಗಿದೆ’ ಎಂದು ನಿರ್ದೇಶಕ ದೀಪಕ್ ಮಧುವನಹಳ್ಳಿ ಹೇಳಿದರು.

ಚಿತ್ರದ ನಾಲ್ಕು ಹಾಡುಗಳಿಗೆ ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ಮನೋಹರ್ ಜೋಷಿ ಅವರ ಛಾಯಾಗ್ರಹಣವಿದೆ. ಸಂಕಲನ ಅಮಿತ್ ಜವಾಲ್ಕರ್ ಅವರದು. ಮಾಸ್ ಮಾದ ಸಾಹಸ ನಿರ್ದೇಶಿಸಿದ್ದಾರೆ. ಮಂಜುನಾಥ ವಿಶ್ವಕರ್ಮ ಮತ್ತು ಕಿರಣ್ ಬಾತೋಡ್ ನಿರ್ಮಾಪಕರು. ಮೃದುಲಾ ಈ ಚಿತ್ರದ ನಾಯಕಿ. ಅಚ್ಯುತ್‌ಕುಮಾರ್, ರವಿಶಂಕರ್, ಚಿಕ್ಕಣ್ಣ, ತಬಲಾ ನಾಣಿ ಮುಂತಾದವರು ತಾರಾಗಣದಲ್ಲಿದ್ದಾರೆ. ❖


ಗುರುನಂದನ್

## ‘ಅಗ್ರಸೇನಾ’ಗೆ ಡಾಲಿ ಬಲ!


ಚಿತ್ರತಂಡದೊಂದಿಗೆ ನಟ ಧನಂಜಯ

**ಅಮರ್ ವಿರಾಜ್** ಹಾಗೂ ರಚನಾ ದಶರಥ್ ಜೋಡಿಯಾಗಿ ನಟಿಸಿರುವ ‘ಅಗ್ರಸೇನಾ’ ಚಿತ್ರದ ಟ್ರೇಲರ್ ಅನ್ನು ನಟ ಡಾಲಿ ಧನಂಜಯ ಇತ್ತೀಚೆಗೆ ಬಿಡುಗಡೆ ಮಾಡಿದರು. ಜೂನ್ 23ರಂದು ಚಿತ್ರ ತೆರೆಗೆ ಬರಲಿದ್ದು, ಈ ಹಿಂದೆ ‘ಭಜರಂಗಿ’ ಹರ್ಷ ಜೊತೆ ಕೆಲಸ ಮಾಡಿದ್ದ ಮುರುಗೇಶ್ ಕಣ್ಣಪ್ಪ ಈ ಚಿತ್ರ ನಿರ್ದೇಶಿಸಿದ್ದಾರೆ. ಮಮತಾ ಜಯರಾಮ ರೆಡ್ಡಿ ಚಿತ್ರದ ನಿರ್ಮಾಪಕರು. ಟ್ರೇಲರ್ ಬಿಡುಗಡೆಗೊಳಿಸಿ ಮಾತನಾಡಿದ ಡಾಲಿ ಧನಂಜಯ, ‘ಇಡೀ ತಂಡ ಒಂದು ಒಳ್ಳೆಯ ಸಿನಿಮಾ ಮಾಡಿದೆ. ನಿರ್ದೇಶಕರು ನಮ್ಮ ಅರಸೀಕೆರೆಯವರು, ಒಂದು ಹೊಸ ತಂಡಕ್ಕೆ ಬೆಂಬಲ ನೀಡಲು ಇಲ್ಲಿಗೆ ಬಂದಿರುವೆ’ ಎಂದರು.

ಅಗಸ್ತ್ಯ ಬೆಳಗೆರೆ ಚಿತ್ರದ ಮತ್ತೋರ್ವ ನಾಯಕ. ಹಿರಿಯನಟ ರಾಮಕೃಷ್ಣ ಅವರು ತಂದೆಯ ಪಾತ್ರವನ್ನು ನಿರ್ವಹಿಸಿದ್ದಾರೆ. ‘ಹೊಸ ತಂಡಕ್ಕೆ ಪ್ರೋತ್ಸಾಹಿಸಿ, ಡಾಲಿ ಧನಂಜಯ ಅವರು ಆಗಮಿಸಿದ್ದು ಒಂದು ಶಕ್ತಿ ಬಂದಂತಾಯ್ತು. ವಿಜಯ ಪ್ರಕಾಶ್ ಚಿತ್ರದ ‘ದಸರಾ’ ಹಾಡನ್ನು ಬಿಡುಗಡೆ ಮಾಡಿದ್ದರು. ಶಿವರಾಜ್‌ಕುಮಾರ್ ಮತ್ತೊಂದು ಹಾಡಿಗೆ ಸಾಥ್ ನೀಡಿದ್ದರು. ಈಗ ಡಾಲಿ ಟ್ರೇಲರ್ ಬಿಡುಗಡೆ ಮಾಡಿಕೊಟ್ಟಿದ್ದಾರೆ’ ಎಂದು ಮಮತಾ ಜಯರಾಮ ರೆಡ್ಡಿ ಸಂತಸ ಹಂಚಿಕೊಂಡರು.

ಚಿತ್ರಕ್ಕೆ ಎಂ.ಎಸ್.ತ್ಯಾಗರಾಜ್ ಸಂಗೀತ ನಿರ್ದೇಶನವಿದೆ. ಆರ್.ಪಿ.ರೆಡ್ಡಿ ಅವರ ಛಾಯಾಗ್ರಹಣ, ವಿಜಯ್ ಎಂ.ಕುಮಾರ್ ಅವರ ಸಂಕಲನ ಈ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಬಸ್** ನಿಲ್ದಾಣವೊಂದರಲ್ಲಿ ಮಹಿಳೆಯರು ನಿಂತಿದ್ದರೂ, ಬಸ್ ಒಂದು ನಿಲ್ಲಿಸದೆ ವೇಗವಾಗಿ ಮುಂದಕ್ಕೆ ಹೋಗುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಡಿಯೊಗೆ, ‘ಮಹಿಳೆಯರಿಗೆ ಹೆದರಿ ಓಡಿದ ಬಿಎಂಟಿಸಿ. ಕರ್ತೃ:ಕಾಂಗ್ರೆಸ್’ ಎಂಬ ವಿವರಣೆ ನೀಡಲಾಗಿದೆ. ‘ಮಹಿಳೆಯರಿಗೆ ಉಚಿತ ಪ್ರಯಾಣ ನೀಡುವುದರಿಂದ ತಪ್ಪಿಸಿಕೊಳ್ಳಲು ಬಸ್ ನಿಲ್ಲಿಸಬೇಡಿ ಎಂದು ರಾಜ್ಯ ಸರ್ಕಾರ ಸೂಚನೆ ನೀಡಿದೆ’ ಎಂದು ಹಲವರು ಕಾಮೆಂಟ್ ಮಾಡಿದ್ದಾರೆ. ಆದರೆ, ಇದು ತಿರುಚಲಾದ ವಿಡಿಯೊ.




**ವಿಡಿಯೊದಲ್ಲಿ** ಇರುವುದು ಬಿಎಂಟಿಸಿ ಬಸ್ ಅಲ್ಲ. ಬದಲಿಗೆ ದೆಹಲಿಯ ಸರ್ಕಾರಿ ಬಸ್. ದೆಹಲಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶವಿದ್ದು, ಅದರಿಂದ ತಪ್ಪಿಸಿಕೊಳ್ಳಲು ಚಾಲಕ ಬಸ್ ನಿಲ್ಲಿಸದೆ ಹೋಗಿದ್ದಾನೆ ಎಂಬ ವಿವರಣೆ ಮೂಲ ವಿಡಿಯೊದಲ್ಲಿ ಇತ್ತು. ವಿಡಿಯೊಗೆ ಪ್ರತಿಕ್ರಿಯೆ ನೀಡಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಈ ರೀತಿ ಮಾಡಬಾರದು ಎಂದು ಬಸ್ ಚಾಲಕರಿಗೆ ಸೂಚನೆ ನೀಡಿದ್ದರು. ಜತೆಗೆ, ವಿಡಿಯೊದಲ್ಲಿ ಇರುವ ಬಸ್‌ನ ಚಾಲಕ ಮತ್ತು ನಿರ್ವಾಹಕನ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದೂ ತಿಳಿಸಿದ್ದರು. ಆದರೆ, ಈಗ ಆ ವಿಡಿಯೊವನ್ನು ಬೆಂಗಳೂರಿನ ಬಿಎಂಟಿಸಿ ಬಸ್ ವಿಡಿಯೊ ಎಂದು ಸತ್ಯವನ್ನು ತಿರುಚಿ ಹಂಚಿಕೊಳ್ಳಲಾಗಿದೆ. ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ.

## ಗುಂಡಣ್ಣ




## ಬೆರಗಿನ ಬೆಳಕು
ಗುರುರಾಜ ಕರಜಗಿ



### ಸ್ವತಃ ಸಿದ್ಧ ಮೋಕ್ಷ

**ಮೋಕ್ಷದಾಶೆಯೊಳಮತ್ಯಾತುರತೆಯೊಳಿತಲ್ಲ |**
**ಶಿಕ್ಷೆ ಬಹುಕಾಲ ನಡೆಯದೆ ಮೋಕ್ಷವಿಲ್ಲ ||**
**ಲಕ್ಷ್ಯ ತಪ್ಪದೆ ಚರಿಸು ಸಾಮಾನ್ಯಧರ್ಮಗಳ |**
**ಮೋಕ್ಷ ಸ್ವತಸ್ಸಿದ್ಧ – ಮಂಕುತಿಮ್ಮ || 903 ||**

ಪದ-ಅರ್ಥ: ಮೋಕ್ಷದಾಶೆಯೊಳಮತ್ಯಾತುರತೆಯೊಳಿತಲ್ಲ = ಮೋಕ್ಷದ + ಆಶೆಯೊಳಂ + ಅತ್ಯಾತುರತೆ (ಅತಿಯಾದ ಆತುರತೆ) + ಒಳಿತಲ್ಲ, ಚರಿಸು = ನಡೆಸು.

**ವಾಚ್ಯಾರ್ಥ:** ಮೋಕ್ಷವನ್ನು ಪಡೆಯುವ ಆಸೆಯಲ್ಲಿ ಅತಿಯಾದ ಆತುರತೆ ಒಳ್ಳೆಯದಲ್ಲ. ದೀರ್ಘಕಾಲದ ಪರಿಶ್ರಮವಿಲ್ಲದೆ ಮೋಕ್ಷವಿಲ್ಲ. ಸಾಮಾನ್ಯಧರ್ಮಗಳನ್ನು ಲಕ್ಷ್ಯ ತಪ್ಪದೆ ನಡೆಸಿದರೆ ಮೋಕ್ಷ ತಾನೇ ತಾನಾಗಿ ದೊರೆಯುತ್ತದೆ.

**ವಿವರಣೆ:** ಮಾನವನ ಊರ್ಧ್ವಮುಖ ಸಾಧನೆಗೆ ನಮ್ಮ ಹಿರಿಯರು ನಾಲ್ಕು ಸೋಪಾನಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಅವುಗಳನ್ನು ಪುರುಷಾರ್ಥಗಳು ಎಂದು ಕರೆದರು. ಅವು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಇವುಗಳಲ್ಲಿ ವೇದಾಂತಕ್ಕೆ ವಿಷಯವಾಗಿರುವುದು ಮೋಕ್ಷ. ಮೋಕ್ಷ ಪದದ ಅರ್ಥವೇ ಬಿಡುಗಡೆ. ಯಾವುದರಿಂದ ಬಿಡುಗಡೆ? ಸಾಂಸಾರಿಕ ಬಂಧನದಿಂದ, ಚಿಂತೆ, ದು:ಖ, ಅಶಾಂತಿ, ನಿರಾಸೆ, ಹತಾಶೆ, ಔದಾಸೀನ್ಯಗಳಿಂದ ಬಿಡುಗಡೆ. ಮೋಕ್ಷವು ಅಂತ್ಯವಿಲ್ಲದ ಆನಂದಮಯ ಸ್ಥಿತಿ. ಮೋಕ್ಷದ ದಾರಿಯಲ್ಲಿ ಧರ್ಮ, ಅರ್ಥ, ಕಾಮಗಳ ಮೆಟ್ಟಿಲುಗಳು ಬರುತ್ತವೆ. ಹಾಗೆಂದರೆ, ನಮ್ಮ ಅರ್ಥ ಮತ್ತು ಕಾಮಗಳು ಧರ್ಮದ ತಳಹದಿಯ ಮೇಲೆಯೇ ನಿಂತಿರಬೇಕು. ಧರ್ಮದ ನೆಲೆಯಿಲ್ಲದ ಅರ್ಥಾಪೇಕ್ಷೆ ಭ್ರಷ್ಟಾಚಾರವಾಗುತ್ತದೆ. ಅಂತೆಯೇ, ಧರ್ಮದ ಆಧಾರದ ಮೇಲೆ ಇದ್ದ ಕಾಮ ಆತ್ಮಸಾಧನೆಗೆ ದಾರಿಯಾಗುತ್ತದೆ. ಹಾಗಿಲ್ಲದೆ ಹೋದರೆ ಮತ್ತಷ್ಟು ಕಾಮನೆಗಳನ್ನು ಹುಟ್ಟಿಸುವ ಕರ್ಮವಾಗಿ ಕಾಡುತ್ತದೆ. ವಿವೇಕದಿಂದ ಕಾಮನೆಗಳನ್ನು ಸಂಯಮದಿಂದ ಕಂಡು, ಧರ್ಮದಿಂದ ತೃಪ್ತ ಜೀವನ ನಡೆಸುತ್ತಿದ್ದರೆ ಒಂದು ದಿನ ಆತ್ಯಂತಿಕ ಮೋಕ್ಷ ದೊರಕಬಹುದು. ಭಗವದ್ಗೀತೆ ಮೋಕ್ಷವನ್ನು ಪಡೆಯುವ ಮಾರ್ಗವನ್ನು ತೋರುತ್ತದೆ.

“ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ | ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚ: ||”

“ಎಲ್ಲ ಆಚಾರಗಳನ್ನು, ಎಲ್ಲ ಧರ್ಮಗಳನ್ನು ಬದಿಗಿರಿಸಿ ಸರ್ವಾರ್ಪಣ ಬುದ್ಧಿಯಿಂದ ನನ್ನಲ್ಲಿ ಶರಣಾಗು. ನಾನು ನಿನ್ನ ಸರ್ವಪಾಪಗಳನ್ನು ಕಳೆದು ಮೋಕ್ಷ ನೀಡುತ್ತೇನೆ”. ಹೇಳಿಕೆಯೇನೋ ಚೆನ್ನಾಗಿದೆ. ಆದರೆ ಅದನ್ನು ಸಾಧಿಸುವುದು ಸುಲಭವೇ? ಅದಕ್ಕೇ ಕಗ್ಗ ಹೇಳುತ್ತದೆ, ಮೋಕ್ಷಸಾಧನೆಗಾಗಿ ಅವಸರ ಬೇಡ. ಅದಕ್ಕೆ ದೀರ್ಘಕಾಲದ ಸತತವಾದ ಪ್ರಯತ್ನ, ಆತ್ಮಶಿಕ್ಷಣ ಅವಶ್ಯವಾಗಿ ಬೇಕು. ಅದಕ್ಕಾಗಿ ವಿಶೇಷ ಕಾರ್ಯವೇನೂ ಮಾಡಬೇಕಿಲ್ಲ. ನಮ್ಮ ನಿತ್ಯದ ಸಾಮಾನ್ಯ ಕಾರ್ಯಗಳನ್ನು ತಪ್ಪದೇ ವ್ಯವಸ್ಥಿತವಾಗಿ ಮಾಡುತ್ತ ಬರಬೇಕು. ಇಂಗ್ಲೀಷಿನಲ್ಲಿ ಒಂದು ಮಾತಿದೆ. “Extraordinary people do not do extraordinary things. They do ordinary things extraordinarily well” ಅಸಾಮಾನ್ಯರು ಅಸಾಮಾನ್ಯ ಕಾರ್ಯಗಳನ್ನು ಮಾಡುವುದಿಲ್ಲ. ಸಾಮಾನ್ಯ ಕಾರ್ಯಗಳನ್ನೇ ಅಸಾಮಾನ್ಯ ರೀತಿಯಲ್ಲಿ ಮಾಡುತ್ತಾರೆ. ಹಾಗೆ ಸಾಮಾನ್ಯಕರ್ಮಗಳನ್ನು ತತ್ಪರತೆಯಿಂದ, ನಿಷ್ಠೆಯಿಂದ ಮಾಡುತ್ತ ಬಂದರೆ ಮೋಕ್ಷ ತಾನಾಗಿಯೇ ಸಿದ್ಧಿಸುತ್ತದೆಯೆಂದು ಕಗ್ಗ ಭರವಸೆ ನೀಡುತ್ತದೆ. ❖

## ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್ 12, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ಕೃಷ್ಣ ನವಮಿ ಗಂ. 10-35, ನಕ್ಷತ್ರ: ಉತ್ತರಾಭಾದ್ರ ಗಂ. 13-50 ಯೋಗ: ಆಯುಷ್ಮಾನ್ 07-52 ಕರಣ: ಗರ ಗಂ. 10-35, ವೃಷಭ ಮಾಸದ 28 ನೇ ದಿನ, ಮಳೆನಕ್ಷತ್ರ: ಮೃಗಶಿರ 2. ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 23 ಜುಲ್ಖಾಯಿದ್
ಅದೃಷ್ಟ ಸಂಖ್ಯೆ : 11, 12

**ಮೇಷ:** ಎಂಜಿನಿಯರಿಂಗ್ ವಿದ್ಯಾರ್ಥಿಗಳು ಓದಿನ ಬಗ್ಗೆ ಗಮನ ವಹಿಸಬೇಕಾಗುವುದು. ಹಿರಿಯರ ಮಧ್ಯಸ್ಥಿಕೆ ಯಿಂದ ಭೂ ವಿವಾದ ಬಗೆ ಹರಿಯುವುದು. ಮಗಳ ಮದುವೆ ವಿಚಾರ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು.

**ವೃಷಭ:** ದೈವಬಲ ನಿಮ್ಮ ಮೇಲಿದ್ದು ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಣೆಯತ್ತ ಸಾಗಲಿದೆ. ಅಧಿಕಾರಿ ವರ್ಗದವರ ಉತ್ತೇಜನದಿಂದಾಗಿ ಕೆಲಸ ಕಾರ್ಯಗಳಲ್ಲಿ ಶೀಘ್ರ ಜಯ ಲಭಿಸಲು ಸಾಧ್ಯವಾಗುವುದು.

**ಮಿಥುನ:** ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆ ಕಾಣಿಸದು. ಈ ದಿನ ನೀವು ಯಾರಿಗೂ ಜಾಮೀನುದಾರರಾಗುವುದು ಸರಿಯಲ್ಲ. ನಿರುದ್ಯೋಗಿಗಳಿಗೆ ಉತ್ತಮ ಅವಕಾಶಗಳು ಒದಗಿ ಬರಲಿದೆ.

**ಕರ್ಕಾಟಕ:** ಇತರರಿಗೆ ನೋವಾಗದಂತೆ ಹಾಗೂ ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳುವುದು ಉತ್ತಮ. ಎಲೆಕ್ಟ್ರಿಕಲ್ ಕಂಟ್ರಾಕ್ಟ್ ಮಾಡುವವರಿಗೆ ಉದ್ಯೋಗ ದೊರೆತು ಸಂತೋಷ.

**ಸಿಂಹ:** ಮಾನಸಿಕ ನೆಮ್ಮದಿಗೆ ಧಾರ್ಮಿಕ ಕಾರ್ಯ ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡಲಿರುವಿರಿ.ನವದಂಪತಿಗೆ ಸಂತಾನದ ಶುಭ ಸುದ್ದಿ ಕೇಳಿ ಬರುವುದು. ಸ್ವಪ್ರಯತ್ನದಿಂದ ಕೆಲಸ ಸಾಧಿಸಿ.

**ಕನ್ಯಾ:** ಸ್ವಲ್ಪ ಜಾಗ್ರತೆ ವಹಿಸಿದಲ್ಲಿ ನೀವು ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಕಲ್ಲಿನ ಅಥವಾ ಟೈಲ್ಸ್ ಕೆಲಸ ಮಾಡುವವರು ಉದ್ಯೋಗದಲ್ಲಿ ಹೆಚ್ಚಿನ ಜಾಗ್ರತೆವಹಿಸಿ.

**ತುಲಾ:** ಬಿಸಿನೆಸ್ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜೊತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು. ನಿಮ್ಮ ವಾಸ ಸ್ಥಾನ ಅಥವಾ ಉದ್ಯೋಗ ಬದಲಾಗುವ ಸಂಭವವಿದೆ. ವ್ಯವಹಾರದಲ್ಲಿ ಕೊಂಚ ಹಿನ್ನಡೆ ಉಂಟಾಗಲಿದೆ.

**ವೃಶ್ಚಿಕ:** ಅತಿ ಔದರ್ಯತನ ತೋರಬೇಕೆನಿಸಿದಲ್ಲಿ ಹಣಕಾಸಿನ ಸ್ಥಿತಿಯನ್ನು ಒಮ್ಮೆ ಗಮನಿಸಿಕೊಳ್ಳಿರಿ. ಅಪರಿಚಿತ ವ್ಯಕ್ತಿಯೊಬ್ಬರಿಂದ ಮುಖ್ಯ ಸಲಹೆ ಪಡೆಯಲಿದ್ದೀರಿ, ಅದನ್ನು ಜೀವನದಲ್ಲಿ ರೂಢಿಸಿಕೊಳ್ಳಿ.

**ಧನು:** ದೇವತಾ ಕೃಪೆಯಿಂದ ನಿಮ್ಮ ಎಲ್ಲಾ ಕೆಲಸಗಳನ್ನೂ ಲಾಭಮಯವಾಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ, ಬುದ್ಧಿವಂತಿಕೆಯನ್ನೂ ಉಪಯೋಗಿಸಬೇಕಾಗುತ್ತದೆ. ಅಲಂಕಾರಿಕ ವಸ್ತುಗಳಿಗಾಗಿ ಹಣ ವಿನಿಯೋಗಿಸುವಿರಿ.

**ಮಕರ:** ಉದ್ಯೋಗದಲ್ಲಿ ಸ್ಥಳ ಬದಲಾವಣೆ ಪಡೆಯುವ ಉದ್ದೇಶವಿದ್ದರೆ, ನಿಮ್ಮ ಬಗ್ಗೆ ಅಧಿಕಾರಿಗಳೊಡನೆ ಹೇಳಿ ಕೊಳ್ಳಲು ಹಿಂಜರಿಕೆ ಬೇಡ. ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ಹಾದಿ ಸುಗಮವಾಗಿ ಸಾಗುತ್ತದೆ.


**ಕುಂಭ:** ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂತಹ ಉತ್ತಮ ಅವಕಾಶಗಳು ಎದುರಾಗುವುವು. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟವು ಅತ್ಯಂತ ಲಾಭದಾಯಕವೆನಿಸುವುದು. ಶೈಕ್ಷಣಿಕ ವಿಚಾರದಲ್ಲಿ ಮುತುವರ್ಜಿಯನ್ನು ತೋರಿಸಿ.

**ಮೀನ:** ದಿನಗೂಲಿ ನೌಕರರಿಗೆ ಅನುಕೂಲ ವಾತಾವರಣ ಸಿಗಲಿದೆ. ನಿಮ್ಮ ಚಂಚಲ ಮನೋಭಾವದಿಂದಾಗಿ ಕೆಲವು ತೀರ್ಮಾನ ತೆಗೆದುಕೊಳ್ಳುವುದು ಕಷ್ಟಕರ ಎನಿಸುವುದು. ಹೊಸ ಉದ್ಯೋಗದಲ್ಲಿ ಸ್ವಾತಂತ್ರ್ಯವಿರುವುದು.

## ಪದಬಂಧ 5347
– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಅಭಿಮಾನಿಯಿಂದ ಹೆಚ್ಚಿದ ಆತ್ಮಗೌರವ! (4)
3.ದಾಯಾದಿಯ ಬೀಳ್ಕೊಡುಗೆ (3)
4.ಗಹನವೇನಲ್ಲ!ಇದು ಆಕಾಶ (3)
6.ಕಾರನ್ನೇರಿದ ಚಾರನ ಕೆಲಸವೆಲ್ಲಾಬೇಕಾಬಿಟ್ಟಿ! (4)
8.ಯತಿಗೆ ಅನುಗುಣವಾಗಿ ಉಚಿತವಾಗುವಂತೆ(4)
10.ಅನುಸ್ವಾರ ಬರೆದಾಗ ಕೇಳಿಸಿದ ನಾದ (2)
11.ಸಂಕಟದಿಂದ ಕಟ್ಟುವ ತೆರಿಗೆ (2)
12.ತರಂಗದಂತಿರುವ ಒಳಮನಸ್ಸು (4)
14.ಹರಿಯನ್ನು ನೆನೆದು ನಡೆಸಿದ ದೋಣಿ (4)
15.ದಾವಣಿ ಧರಿಸಿ ಹೇಳಿದ ಜನಪದ ಹಾಡು (3)
16.ಗೊರಟೆಯಲ್ಲ!ಹಣ್ಣಿನ ಮೇಲುಹೊದಿಕೆ (3)
17.ಎಳೆತನದಿಂದಲೇ ಮೊಳೆತ ಸ್ನೇಹ (4)

**ಮೇಲಿಂದ ಕೆಳಕ್ಕೆ**
2.ನರನು ನೋಡುತ್ತಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
5.ದೂರನ್ನು ತರುತ್ತಿರುವ ರಾಯಭಾರಿ (2)
7.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು (3)
9. ಬಾಗಿಲಿನ ಕೊಂಡಿ (3)
10. ಸ್ವಾಗತ ಕೋರುತ್ತಾ ತನಗೆ ತಾನು ಮಾತಾಡಿಕೊಳ್ಳುವುದು (3)
11.ವಂದರಿ ಹಿಡಿದಿರುವ ಚಲುವೆ (3)
12.ಅಂಬುಧಿಗೆ ಬಿದ್ದ ಬಾಣ (2)
13.ಲಾಗ ಹಾಕುವಾಗ ಆದ ಗದ್ದಲ (3)
14.ಹೆಣ್ಣಿಗೆ ಬೇಕಾದ ಬಾಚಣಿಕೆ (3)



### 5346ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಕೊನರು 4.ಅನರ್ಥ 5.ಚತುರ
6.ಮುನಿ 8.ಸವತಿ
10.ಲವ 12.ಮದುವೆ
14.ಗರ 16.ಶುನಕ
18.ಬರ 20.ಡಿಕಾವು
22.ಜುಲುಮೆ 23.ಸತ್ಕಾರ

**ಮೇಲಿಂದ ಕೆಳಕ್ಕೆ:**
1.ಕೊತವಾಲ 2.ರುಸುಮು
3.ಮಂಚ 4.ಅರಸ
7.ನಿಗಮ 9.ವನ್ಯಮೃಗ
11.ವರ್ತಮಾನ 13.ವೆಣಬ
15.ರತ್ನಾಕರ 17.ಕಡಿಮೆ
19.ರಕ್ಕಸ 21.ವುಹಾ

## ಸುಡೊಕು 5733

| | | | | | | | | |
|---|---|---|---|---|---|---|---|---|
| 4 | | | 9 | | 1 | | 3 | |
| | | | | | | | | 4 |
| 8 | | 3 | 4 | | 5 | 9 | | |
| 7 | | | | | | | | 8 |
| | 8 | | 1 | 6 | 2 | | 9 | |
| | | 9 | 7 | | | 2 | | |
| | | 8 | | 1 | | | 4 | |
| 9 | 6 | 4 | 8 | | 7 | 1 | | 5 |
| | 1 | | | 9 | | | 8 | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5732 ಸುಡೊಕು

| | | | | | | | | |
|---|---|---|---|---|---|---|---|---|
| 6 | 2 | 4 | 9 | 1 | 7 | 3 | 5 | 8 |
| 5 | 1 | 3 | 8 | 4 | 6 | 9 | 2 | 7 |
| 9 | 7 | 8 | 2 | 5 | 3 | 4 | 1 | 6 |
| 7 | 4 | 9 | 5 | 3 | 8 | 1 | 6 | 2 |
| 1 | 8 | 6 | 4 | 2 | 9 | 7 | 3 | 5 |
| 2 | 3 | 5 | 6 | 7 | 1 | 8 | 4 | 9 |
| 4 | 9 | 2 | 3 | 8 | 5 | 6 | 7 | 1 |
| 3 | 6 | 1 | 7 | 9 | 2 | 5 | 8 | 4 |
| 8 | 5 | 7 | 1 | 6 | 4 | 2 | 9 | 3 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹326-483 |
| ದ್ವಿತಳಿ (ಬಿ.ವಿ) | ₹235-700 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | | |
|---|---|---|
| ಬೆಂಗಳೂರು | 100 ಮೊಟ್ಟೆಗೆ | ₹565 |
| | 12 ಮೊಟ್ಟೆಗೆ | ₹73 |
| ಮೈಸೂರು | 100 ಮೊಟ್ಟೆಗೆ | ₹572 |

## ಜಿಡಿಪಿ ಶೇ 6.3 ಬೆಳವಣಿಗೆ: ಮೂಡೀಸ್

ನವದೆಹಲಿ (ಪಿಟಿಐ): ಭಾರತದ ಆರ್ಥಿಕತೆಯು ಜೂನ್ ತ್ರೈಮಾಸಿಕದಲ್ಲಿ ಶೇಕಡ 6ರಿಂದ ಶೇ 6.3ರ ಮಟ್ಟದಲ್ಲಿ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಮೂಡೀಸ್ ಇನ್‌ವೆಸ್ಟರ್ಸ್ ಸರ್ವಿಸಸ್ ಭಾನುವಾರ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸರ್ಕಾರದ ವರಮಾನವು ನಿರೀಕ್ಷೆಗಿಂತಲೂ ಕಡಿಮೆ ಆಗಿ, ಅದರಿಂದಾಗಿ ವಿತ್ತೀಯ ಕೊರತೆಯು ಹೆಚ್ಚಾಗುವ ಆತಂಕವನ್ನು ಅದು ವ್ಯಕ್ತಪಡಿಸಿದೆ. ಆರ್ಥಿಕ ಬೆಳವಣಿಗೆಯ ಕುರಿತು ಮೂಡೀಸ್ ಮಾಡಿರುವ ಅಂದಾಜು ಆರ್‌ಬಿಐ ಮಾಡಿರುವುದಕ್ಕಿಂತಲೂ ಕಡಿಮೆ ಇದೆ. ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಶೇ 8ರಷ್ಟು ಬೆಳವಣಿಗೆ ಕಾಣಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ.











# ಯಾವಾಗ ಬಂದೀತು ಬಡ್ಡಿ ಇಳಿಕೆ ಕಾಲ?



**ಹಣಕಾಸು ಸಾಕ್ಷರತೆ**

**ರಾಜೇಶ್ ಕುಮಾರ್ ಟಿ.ಆರ್.**

**ಸಾಲಗಳ ಮೇಲಿನ** ಬಡ್ಡಿ ದರ ಹೆಚ್ಚಳದಿಂದ ತೊಂದರೆಗೆ ಒಳಗಾಗಿರುವವರಿಗೆ 2023ರ ವರ್ಷಾಂತ್ಯದಲ್ಲಿ ಬಡ್ಡಿ ದರ ಕಡಿತದ ಸಿಹಿ ಸುದ್ದಿ ಸಿಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಕಳೆದ ಎರಡು ಸಭೆಗಳಲ್ಲಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಇರಿಸಿರುವುದು ಇಂಥದ್ದೊಂದು ಆಶಾಭಾವನೆ ಹುಟ್ಟುಹಾಕಿದೆ. ಸಾಲದ ಮೇಲಿನ ಬಡ್ಡಿ ಕಡಿತದ ಮುನ್ಸೂಚನೆ ಸಿಕ್ಕಿರುವ ಈ ಸಂದರ್ಭದಲ್ಲಿ ಈಗಾಗಲೇ ಸಾಲ ಪಡೆದಿರುವವರು ಏನು ಮಾಡಬೇಕು, ಹೊಸದಾಗಿ ಸಾಲದ ಮೊರೆ ಹೋಗುವವರು ಯಾವ ಮಾರ್ಗ ಅನುಸರಿಸಬೇಕು, ಸಾಲವನ್ನು ಅವಧಿಗೆ ಮುನ್ನ ಮರುಪಾವತಿ ಮಾಡಬೇಕೇ ಎಂಬ ಪ್ರಶ್ನೆಗಳು ಮೂಡಬಹುದು. ಆ ಬಗ್ಗೆ ಒಂದು ನೋಟ ಹರಿಸೋಣ.

**ಹೆಚ್ಚಾಗಿದೆ ಸಾಲದ ಇಎಂಐ:** 2022ರ ಮೇ ತಿಂಗಳಿನಿಂದ ಈಚೆಗೆ ಆರ್‌ಬಿಐ, ರೆಪೊ ದರವನ್ನು (ಅಂದರೆ, ಬ್ಯಾಂಕ್‌ಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರ) ಒಟ್ಟಾರೆ ಶೇಕಡ 2.5ರಷ್ಟು ಹೆಚ್ಚಳ ಮಾಡಿದೆ. ಬೆಲೆ ಏರಿಕೆ (ಹಣದುಬ್ಬರ) ನಿಯಂತ್ರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ. ರೆಪೊ ದರ ಹೆಚ್ಚಳದ ಪರಿಣಾಮವಾಗಿ ಗೃಹ ಸಾಲ, ವಾಹನ ಸಾಲ, ವೈಯಕ್ತಿಕ ಸಾಲಗಳ ಮೇಲಿನ ಬಡ್ಡಿ ತುಟ್ಟಿಯಾಗಿದೆ. ಕಳೆದ ಒಂದು ವರ್ಷದಲ್ಲಿ ಆಗಿರುವ ಬಡ್ಡಿ ದರ ಹೆಚ್ಚಳದಿಂದಾಗಿ, ಸಾಲ ಪಡೆದಿರುವವರ ಮಾಸಿಕ ಕಂತುಗಳ ಮೊತ್ತದಲ್ಲಿ ಹೆಚ್ಚಳವಾಗಿದೆ.

ಉದಾಹರಣೆಗೆ, ಬಡ್ಡಿ ಹೆಚ್ಚಳದ ಪರಿಣಾಮ ಹೇಗಿದೆ ಎಂದರೆ, 15 ವರ್ಷಗಳ ಅವಧಿಗೆ ಸಾಲ ಪಡೆದಿರುವವರ ಮಾಸಿಕ ಕಂತಿನ ಮೊತ್ತದಲ್ಲಿ (ಇಎಂಐ) ಶೇಕಡ 16ರಷ್ಟು ಹೆಚ್ಚಳವಾಗಿದೆ. 20 ವರ್ಷಗಳ ಅವಧಿಗೆ ಸಾಲ ತೆಗೆದುಕೊಂಡಿದ್ದರೆ, ಮಾಸಿಕ ಕಂತಿನ ಮೊತ್ತವು ಶೇ 20ರಷ್ಟು ಮತ್ತು 30 ವರ್ಷಕ್ಕೆ ಸಾಲ ಪಡೆದಿದ್ದರೆ ಇಎಂಐ ಶೇ 26.5ರಷ್ಟು ಏರಿಕೆಯಾಗಿದೆ. ಸರಳವಾಗಿ ಹೇಳುವುದಾದರೆ 2022ರ ಏಪ್ರಿಲ್‌ನಲ್ಲಿ ನಿಮ್ಮ ಸಾಲದ ಮೇಲಿನ ಬಡ್ಡಿ ದರ ಶೇ 6.75ರಷ್ಟಿದ್ದರೆ ಈಗ ಬಡ್ಡಿ ದರ ಶೇ 9.25ಕ್ಕೆ ತಲುಪಿದೆ. ಆದರೆ, ಇನ್ನು ಎರಡು ತ್ರೈಮಾಸಿಕ ಅವಧಿಗಳ ಬಳಿಕ ಬಡ್ಡಿ ದರದ ಇಳಿಕೆ ಕಾಲ ಶುರುವಾಗುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ.

**ಫ್ಲೋಟಿಂಗ್ ದರ ಸೂಕ್ತ:** ಹೊಸದಾಗಿ ಗೃಹ ಸಾಲ ಪಡೆಯುವವರು ಫ್ಲೋಟಿಂಗ್ ರೇಟ್ ಬಡ್ಡಿ ದರದಲ್ಲಿ ಸಾಲ ಪಡೆಯುವುದು ಸೂಕ್ತ. ಮುಂದಿನ ಕೆಲವು ತಿಂಗಳ ಬಳಿಕ ಬಡ್ಡಿ ದರದಲ್ಲಿ ಇಳಿಕೆ ಆಗಬಹುದು ಎಂದು ಹಣಕಾಸು ತಜ್ಞರು ನಿರೀಕ್ಷೆ ಮಾಡಿರುವ ಕಾರಣ, ನಿಶ್ಚಿತ ಬಡ್ಡಿ ದರಕ್ಕೆ ಸಾಲ ಪಡೆಯುವುದು ಅಷ್ಟು ಸೂಕ್ತ ನಿರ್ಧಾರವಾಗುವುದಿಲ್ಲ. ಸದ್ಯದ ಬಡ್ಡಿ ದರದ ಸ್ಥಿತಿಯಲ್ಲಿ ಗೃಹ ಸಾಲ ಪಡೆಯುವಾಗ ನಿಶ್ಚಿತ ಬಡ್ಡಿ ದರ ಆಯ್ಕೆ ಮಾಡಿಕೊಂಡರೆ ಹೆಚ್ಚೆಂದರೆ ಶೇ 9.5ರ ನಿಗದಿತ ದರದಲ್ಲಿ ಸಾಲ ಲಭಿಸಬಹುದು. ಆದರೆ ಈಗ ನೀವು ಫ್ಲೋಟಿಂಗ್ ರೇಟ್ ಆಯ್ಕೆ ಮಾಡಿಕೊಂಡರೆ, ಮುಂದೆ ಆರ್‌ಬಿಐ ರೆಪೊ ದರವನ್ನು ಶೇ 1ರಷ್ಟು ಇಳಿಕೆ ಮಾಡಿದರೂ ನಿಮ್ಮ ಸಾಲದ ಬಡ್ಡಿ ದರ ಶೇ 8.5ಕ್ಕೆ ಇಳಿಕೆಯಾಗಬಹುದು. ಹಾಗಾಗಿ ನಿಶ್ಚಿತ ಬಡ್ಡಿ ದರದಲ್ಲಿ ಸಾಲ ಪಡೆಯುವುದು ಸದ್ಯಕ್ಕೆ ಸೂಕ್ತವಲ್ಲ.

**ಗೃಹ ಸಾಲ ಸ್ವಿಚ್ ಮಾಡಿ:** ಹಾಲಿ ಸಾಲ ಪಡೆದಿರುವ ಬ್ಯಾಂಕಿನಲ್ಲಿ ಬಡ್ಡಿ ದರ ವಿಪರೀತವಾಗಿದ್ದರೆ ಗೃಹ ಸಾಲ ಸ್ವಿಚ್ ಮಾಡುವ ಬಗ್ಗೆ ಚಿಂತನೆ ಮಾಡಬಹುದು. ಬಡ್ಡಿ ದರದಲ್ಲಿ ಶೇ 0.5ಕ್ಕಿಂತ ಹೆಚ್ಚು ವ್ಯತ್ಯಾಸವಿದ್ದರೆ ಗೃಹ ಸಾಲವನ್ನು ಕಡಿಮೆ ಬಡ್ಡಿ ದರಕ್ಕೆ ಸಾಲ ನೀಡುವ ಮತ್ತೊಂದು ಬ್ಯಾಂಕಿಗೆ ವರ್ಗಾಯಿಸಿಕೊಳ್ಳುವ ಆಲೋಚನೆ ಮಾಡಬಹುದು. ಗೃಹ ಸಾಲ ವರ್ಗಾವಣೆಗೆ ಮುಂದಾಗುವಾಗ ಸಾಧಕ ಬಾಧಕಗಳನ್ನು ಅಳೆದು ತೂಗಿ ಮುಂದುವರಿಯಬೇಕು.

**ಬೇಗ ಸಾಲ ಮರುಪಾವತಿ ಮಾಡಬೇಕಾ?:** ಆರ್‌ಬಿಐ ಮೇಲಿಂದ ಮೇಲೆ ರೆಪೊ ದರ ಹೆಚ್ಚಳ ಮಾಡಿದ ಪರಿಣಾಮವಾಗಿ ಸಾಲ ಪಡೆದವರಿಗೆ ಇಎಂಐ ಹೊರೆ ಜಾಸ್ತಿಯಾಗುತ್ತಿತ್ತು. ಸದ್ಯ ಆರ್‌ಬಿಐ ರೆಪೊ ದರವನ್ನು ಶೇ 6.5ರಲ್ಲಿ ಇರಿಸಿದೆ. ಇಂತಹ ಹೊತ್ತಿನಲ್ಲಿ, ಗೃಹಸಾಲದ ಭಾಗಶಃ ಪಾವತಿ ಅಥವಾ ಪೂರ್ಣ ಮರುಪಾವತಿ ಪರಿಗಣಿಸಬಹುದು. ಬೇಗ ಸಾಲ ಮರುಪಾವತಿ ಮಾಡಿದಾಗ ಸಾಲಕ್ಕೆ ಕಟ್ಟುವ ದೊಡ್ಡ ಮೊತ್ತದ ಬಡ್ಡಿ ಉಳಿತಾಯವಾಗುತ್ತದೆ.

**ಎಫ್.ಡಿ.ಗಳಿಗಿಂತ ಉತ್ತಮ:** ಸದ್ಯ ಬಡ್ಡಿ ದರ ಹೆಚ್ಚಿದೆ ಎನ್ನುವ ಕಾರಣಕ್ಕೆ ಅನೇಕರು ನಿಶ್ಚಿತ ಠೇವಣಿ (ಎಫ್.ಡಿ) ಹೂಡಿಕೆ ಮಾಡಿದ್ದಾರೆ. ಆದರೆ ಬಡ್ಡಿ ದರ ಇಳಿಕೆಯ ಸಮಯ ಬಂದಾಗ ಎಫ್.ಡಿ. ಹೂಡಿಕೆಗಳಿಂದ ಪ್ರಯೋಜನವಾಗುವುದಿಲ್ಲ. ರೆಪೊ ದರ ಇಳಿಕೆಯಾದಂತೆ ಎಫ್.ಡಿ ಬಡ್ಡಿ ದರಗಳೂ ತಗ್ಗುತ್ತವೆ. ಹಾಗಾಗಿ ಹಣದುಬ್ಬರ ಪ್ರಮಾಣ ಮೀರಿದ ಲಾಭಾಂಶ ಕೊಡುವ ಮ್ಯೂಚುವಲ್ ಫಂಡ್‌ನಂತಹ ಹೂಡಿಕೆಗಳತ್ತ ಚಿತ್ತ ಹರಿಸುವುದು ಒಳಿತು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)




### ಅಲ್ಪ ಏರಿಕೆ ಕಂಡ ಷೇರುಪೇಟೆ

ಜೂನ್ 9ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಗಳಿಕೆ ದಾಖಲಿಸಿವೆ. 63,625 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ 78.52 ಅಂಶಗಳಷ್ಟು ಗಳಿಸಿಕೊಂಡಿದೆ. 18,563 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ 29.3 ಅಂಶಗಳಷ್ಟು ಜಿಗಿದಿದೆ.

ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಇಟ್ಟಿರುವುದು, ಮುಂಗಾರು ವಿಳಂಬ, ಷೇರು ವಹಿವಾಟಿನಲ್ಲಿ ತಗ್ಗಿದ ವಿದೇಶಿ ಸಾಂಸ್ಥಿಕ ಹೂಡಿಕೆದಾರ ಪಾಲ್ಗೊಳ್ಳುವಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 5ರಷ್ಟು, ಪವರ್ ಸೂಚ್ಯಂಕ ಶೇ 3.3ರಷ್ಟು, ಆಟೊ ಸೂಚ್ಯಂಕ ಶೇ 1.5ರಷ್ಟು ಹೆಚ್ಚಳ ದಾಖಲಿಸಿವೆ. ಮತ್ತೊಂದೆಡೆ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 2.5ರಷ್ಟು ಮತ್ತು ಎಫ್‌ಎಂಸಿಜಿ ಸೂಚ್ಯಂಕ ಶೇ 1ರಷ್ಟು ತಗ್ಗಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹970.73 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹1,939.76 ಕೋಟಿ ಮೌಲ್ಯದ ಷೇರುಗಳನ್ನು ಪಡೆದುಕೊಂಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪೇಟಿಎಂ, ಜೊಮಾಟೊ, ಜೆಎಸ್‌ಡಬ್ಲ್ಯು ಸ್ಟೀಲ್, ಲಾರ್ಸೆನ್ ಆ್ಯಂಡ್ ಟ್ಯೂಬ್ರೊ, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಪ್ರೂಡೆನ್ಷಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ ಗಳಿಸಿಕೊಂಡಿವೆ. ಟೆಕ್ ಮಹೀಂದ್ರ, ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ, ಕೋಟಕ್ ಮಹೀಂದ್ರ ಬ್ಯಾಂಕ್, ಎಸ್‌ಆರ್‌ಎಫ್, ಎಲ್‌ಟಿಐ ಮೈಂಡ್ ಟ್ರೀ, ಬಂಧನ್ ಬ್ಯಾಂಕ್ ಮತ್ತು ಐಷರ್ ಮೋಟರ್ಸ್ ಕುಸಿತ ಕಂಡಿವೆ.

**ಮುನ್ನೋಟ:** ಜೂನ್ 13 ಮತ್ತು 14ರಂದು ಅಮೆರಿಕದ ಫೆಡರಲ್ ಬ್ಯಾಂಕಿನ ಮುಕ್ತ ಮಾರುಕಟ್ಟೆ ಸಮಿತಿ ಸಭೆ ನಡೆಯಲಿದ್ದು ಬಡ್ಡಿ ದರ ಹೆಚ್ಚಳದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಯಿದೆ. ಬಡ್ಡಿ ದರ ಹೆಚ್ಚಳವಾದರೂ ಅಥವಾ ಯಥಾಸ್ಥಿತಿ ಕಾಯ್ದುಕೊಂಡರೂ ಅದು ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

## ಭಾರತದಲ್ಲಿ ಹೂಡಿಕೆ: 4ನೇ ಸ್ಥಾನಕ್ಕೇರಿದ ಯುಎಇ


ನವದೆಹಲಿ (ಪಿಟಿಐ): 2022–23ರಲ್ಲಿ ಭಾರತದಲ್ಲಿ ಹೆಚ್ಚಿನ ಹೂಡಿಕೆ ಮಾಡಿರುವ ದೇಶಗಳ ಸಾಲಿನಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಾಲ್ಕನೇ ಸ್ಥಾನ ಪಡೆದುಕೊಂಡಿದೆ. 2021–22ರಲ್ಲಿ ಯುಎಇ ಏಳನೇ ಸ್ಥಾನದಲ್ಲಿ ಇತ್ತು.

ಕಳೆದ ಹಣಕಾಸು ವರ್ಷದಲ್ಲಿ ಯುಎಇನಿಂದ ಭಾರತಕ್ಕೆ ಬಂದಿರುವ ವಿದೇಶಿ ನೇರ ಹೂಡಿಕೆಯು (ಎಫ್‌ಡಿಐ) ಮೂರುಪಟ್ಟು ಹೆಚ್ಚಾಗಿದ್ದು ₹27,470 ಕೋಟಿಗೆ ತಲುಪಿದೆ. 2021–22ರಲ್ಲಿ ಇದು ₹8,446 ಕೋಟಿಯಷ್ಟು ಇತ್ತು ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ಮಾಹಿತಿ ನೀಡಿದೆ.

ಭಾರತವು 2022ರ ಫೆಬ್ರುವರಿ 18ರಂದು ಯುಎಇನೊಂದಿಗೆ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಪಿಎ) ಮಾಡಿಕೊಂಡಿದೆ. ಭಾರತದಲ್ಲಿ ಯುಎಇ ಹೂಡಿಕೆ ಹೆಚ್ಚಾಗಲು ಇದು ಪ್ರಮುಖ ಪಾತ್ರ ವಹಿಸಿದೆ ಎಂದು ಶಾರ್ದೂಲ್ ಅಮರ್‌ಚಂದ್ ಮಂಗಲ್‌ದಾಸ್ ಆ್ಯಂಡ್ ಕೋ. ಪಾಲುದಾರ ರುದ್ರಕುಮಾರ್ ಪಾಂಡೆ ಹೇಳಿದ್ದಾರೆ.

ಸೇವೆಗಳು, ಜಲ ಸಾರಿಗೆ, ವಿದ್ಯುತ್ ಮತ್ತು ನಿರ್ಮಾಣ ಚಟುವಟಿಕೆಗಳ ವಲಯಗಳಲ್ಲಿ ಯುಎಇ ಹೂಡಿಕೆ ಮಾಡಿದೆ.

**2022–23ರಲ್ಲಿ ಭಾರತದಲ್ಲಿ ಹೂಡಿಕೆ ಮಾಡಿರುವ ಪ್ರಮುಖ ದೇಶಗಳು**
**(₹ ಕೋಟಿಗಳಲ್ಲಿ)**




## ಜಿಎಸ್‌ಟಿ ಸಚಿವರ ಸಮಿತಿ: ಸಿದ್ದರಾಮಯ್ಯ ನೇತೃತ್ವ?

ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಸುಧಾರಣೆಗೆ ರಚಿಸಿರುವ ಸಚಿವರ ಸಮಿತಿಯ ಸಂಚಾಲಕ ಸ್ಥಾನಕ್ಕೆ ಯಾರನ್ನು ನೇಮಕ ಮಾಡಬೇಕು ಎಂಬ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಆಲೋಚನೆ ನಡೆಸಿದೆ.

ಬಸವರಾಜ ಬೊಮ್ಮಾಯಿ ಅವರು ಕರ್ನಾಟಕದ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವ ಆಗಿದ್ದಾಗ, ಈ ಸಮಿತಿಯ ಸಂಚಾಲಕ ಆಗಿದ್ದರು. ಅವರ ಅಧಿಕಾರ ಅವಧಿ ಪೂರ್ಣಗೊಂಡ ನಂತರ ಈ ಸ್ಥಾನವು ಖಾಲಿ ಇದೆ. ಜಿಎಸ್‌ಟಿ ಮಂಡಳಿಯು ಏಳು ಸದಸ್ಯರ ಈ ಸಮಿತಿಯನ್ನು 2021ರ ಸೆಪ್ಟೆಂಬರ್‌ನಲ್ಲಿ ರಚಿಸಿದೆ.

ಈಗ ಹೊಸ ಸಂಚಾಲಕರನ್ನು ನೇಮಿಸುವ ಉದ್ದೇಶದಿಂದ ಹಣಕಾಸು ಸಚಿವಾಲಯವು ಇತರ ಸದಸ್ಯರ ಜೊತೆ ಸಮಾಲೋಚನೆ ಆರಂಭಿಸಿದೆ. 'ಕರ್ನಾಟಕವು ಸಮಿತಿಯ ಸದಸ್ಯ ರಾಜ್ಯವಾಗಿ ಮುಂದುವರಿಯಬಹುದು. ಸದಸ್ಯರ ನಡುವಿನ ಸಮಾಲೋಚನೆ ಆಧರಿಸಿ ಹೊಸ ಸಂಚಾಲಕರನ್ನು ಆಯ್ಕೆ ಮಾಡಲಾಗುತ್ತದೆ' ಎಂದು ಮೂಲಗಳು ಹೇಳಿವೆ.

ಸಾಮಾನ್ಯವಾಗಿ, ಸಮಿತಿಯ ಅತ್ಯಂತ ಹಿರಿಯ ಸದಸ್ಯರನ್ನು ಸಂಚಾಲಕ ಆಗಿ ನೇಮಿಸುವ ಪರಿಪಾಠ ಇದೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಣಕಾಸು ಖಾತೆಯನ್ನು ತಮ್ಮಲ್ಲಿಯೇ ಇರಿಸಿಕೊಂಡಿರುವ ಕಾರಣ, ಅವರನ್ನೇ ಸಂಚಾಲಕ ಆಗಿ ನೇಮಿಸುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಇರುವ ತೆರಿಗೆ ಹಂತಗಳನ್ನು ಸರಳಗೊಳಿಸುವುದು, ವಿನಾಯಿತಿ ಪಟ್ಟಿಯಲ್ಲಿರುವ ಉತ್ಪನ್ನಗಳು ಹಾಗೂ ಸೇವೆಗಳನ್ನು ಪರಿಶೀಲನೆಗೆ ಒಳಪಡಿಸುವುದು ಹಾಗೂ ಜಿಎಸ್‌ಟಿ ವರಮಾನವನ್ನು ಹೆಚ್ಚಿಸುವುದು ಈ ಸಮಿತಿಯ ಹೊಣೆ.

### ಅಮೆರಿಕದಲ್ಲಿ ಪ್ರಧಾನಿ ನರೇಂದ್ರ ಮೋದಿಗೆ ಸಮುದಾಯದ ಒತ್ತಾಯ

## 'ಎಲ್‌ಜಿಬಿಟಿಕ್ಯೂ: ಸಮಾನ ಹಕ್ಕು ನೀಡಿ'

ವಾಷಿಂಗ್ಟನ್ (ಪಿಟಿಐ): ಎಲ್‌ಜಿಬಿಟಿಕ್ಯೂ ಸಮುದಾಯದವರಿಗೆ (ಸಲಿಂಗಿಗಳು, ದ್ವಿಲಿಂಗಿಗಳು, ಲಿಂಗ ಪರಿವರ್ತಿತರು) ಭಾರತದಲ್ಲಿ ಸಮಾನ ಹಕ್ಕುಗಳನ್ನು ಒದಗಿಸಬೇಕು ಎಂದು ಇಲ್ಲಿರುವ ಈ ಸಮುದಾಯದವರು ಪ್ರಧಾನಿ ಮೋದಿ ಅವರಿಗೆ ಒತ್ತಾಯಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಜೋ ಬೈಡನ್ ಅವರ ಆಹ್ವಾನದ ಮೇರೆಗೆ ಜೂನ್ 21ರಿಂದ ನಾಲ್ಕು ದಿನ ಅಮೆರಿಕಕ್ಕೆ ಭೇಟಿ ನೀಡುತ್ತಿದ್ದಾರೆ. 22ರಂದು ಮೋದಿ ಗೌರವಾರ್ಥ ಬೈಡನ್ ದಂಪತಿ ಔತಣಕೂಟ ಆಯೋಜಿಸಿದ್ದಾರೆ.

'ಸಲಿಂಗ ವಿವಾಹ, ಎಲ್‌ಜಿಬಿಟಿಕ್ಯೂ ಸಮುದಾಯದವರ ವಿವಾಹ ಕುರಿತ ಪ್ರಕರಣದ ವಿಚಾರಣೆಯನ್ನು ಭಾರತದ ಸುಪ್ರೀಂ ಕೋರ್ಟ್ ಕೆಲ ತಿಂಗಳಿನಿಂದ ನಡೆಸುತ್ತಿದೆ. ವಿವಾಹ ಕುರಿತ ಬೇಡಿಕೆಗೆ ಪ್ರಧಾನಿ ಬೆಂಬಲಿಸಬೇಕು ಹಾಗೂ ಸಮಾನ ಹಕ್ಕುಗಳನ್ನು ನೀಡಬೇಕು ಎಂದು ಒತ್ತಾಯಿಸುತ್ತೇವೆ. ನಾವೆಲ್ಲರೂ ಮನುಷ್ಯರೇ ಆಗಿದ್ದು, ಎಲ್‌ಜಿಬಿಟಿಕ್ಯೂ ಸಮುದಾಯದವರು ಸಮಾನ ಹಕ್ಕುಗಳಿಗೆ ಅರ್ಹರು' ಎಂದು ದೇಸಿ ರೇನ್‌ಬೋ ಸಂಘಟನೆ ಕಾರ್ಯನಿರ್ವಾಹಕ ನಿರ್ದೇಶಕ ಅರುಣಾ ರಾವ್ ಸುದ್ದಿಸಂಸ್ಥೆಗೆ ತಿಳಿಸಿದರು.



ವಾಷಿಂಗ್ಟನ್‌ನಲ್ಲಿ ನಡೆದ ಪ್ರೈಡ್ ಪರೇಡ್‌ನಲ್ಲಿ ಎಲ್‌ಜಿಬಿಟಿಕ್ಯೂ ಸಮುದಾಯದ ಹಲವರು ಭಾಗವಹಿಸಿದ್ದರು –ಎಎಫ್‌ಪಿ ಚಿತ್ರ

ಶ್ವೇತಭವನದಲ್ಲಿ ನಡೆದ ಐತಿಹಾಸಿಕ ಪ್ರೈಡ್ ರ‍್ಯಾಲಿಯಲ್ಲಿ ಭಾಗವಹಿಸಲು ಆಹ್ವಾನ ಪಡೆದಿದ್ದ ಹಲವು ಭಾರತೀಯ ಅಮೆರಿಕನ್ನರಲ್ಲಿ ಅರುಣಾ ಕೂಡಾ ಒಬ್ಬರು. ರ‍್ಯಾಲಿ ಉದ್ದೇಶಿಸಿ ಅಧ್ಯಕ್ಷ ಜೋ ಬೈಡನ್, ಅವರ ಪತ್ನಿ ಡಾ.ಜಿಲ್ ಬೈಡನ್ ಮಾತನಾಡಿದ್ದರು.

'ನನ್ನ ಪ್ರಕಾರ, ಮೆಟ್ರೊ, ನಗರ ಪ್ರದೇಶಗಳಲ್ಲಿ ಎಲ್‌ಜಿಬಿಟಿಕ್ಯೂ ಜನರಿಗೆ ಕೆಲ ಮಟ್ಟಿಗೆ ಬೆಂಬಲವಿದೆ. ಸಣ್ಣ ಪಟ್ಟಣಗಳು, ಗ್ರಾಮಗಳಲ್ಲಿ ಪರಿಸ್ಥಿತಿ ಸುಧಾರಿಸಬೇಕಾಗಿದೆ. ಅಲ್ಲಿ, ಈ ಸಮುದಾಯವರಿಗೆ ಸಮಾನ ಹಕ್ಕುಗಳು ಸಿಗುತ್ತಿಲ್ಲ' ಎಂದು ಅರುಣಾ ಹೇಳಿದರು.

ಈ ಸಮುದಾಯದವರಿಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಒಟ್ಟಾರೆಯಾಗಿ ದಕ್ಷಿಣ ಏಷ್ಯಾ ವಲಯದಲ್ಲಿ ಹೆಚ್ಚಿನ ಬೆಂಬಲದ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು.

## ಅಮೆಜಾನ್ ಕಾಡಿನಲ್ಲಿ ಹಣ್ಣು, ಬೇರು ತಿಂದು ಬದುಕಿದ್ದ ಮಕ್ಕಳು

ಬೊಗೋಟಾ (ಎಎಫ್‌ಪಿ): ಅಮೆಜಾನ್ ದಟ್ಟ ಕಾಡಿನಲ್ಲಿ 40 ದಿನಗಳ ಬಳಿಕ ಪತ್ತೆಯಾದ ನಾಲ್ವರು ಮಕ್ಕಳಿಗೆ ಸೇನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸಣ್ಣಪುಟ್ಟ ಗಾಯಗಳಾಗಿದ್ದು, ಅವರು ಚೇತರಿಸಿಕೊಳ್ಳುತ್ತಿದ್ದಾರೆ.

ಮಕ್ಕಳು ಬಳಲಿದ್ದಾರೆ. ಆದರೆ ಖುಷಿಯಾಗಿದ್ದಾರೆ. ಆಟವಾಡಲು ಬಯಸುತ್ತಿದ್ದಾರೆ. ಓದಲು ಪುಸ್ತಕಗಳನ್ನು ನೀಡುವಂತೆ ಕೇಳುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಕ್ಕಳು ಕಾಡಿನಲ್ಲಿ ಸೇವಿಸಲು ಯೋಗ್ಯವಾದ ಬೀಜಗಳು, ಹಣ್ಣುಗಳು ಮತ್ತು ಬೇರನ್ನು ತಿಂದು ಬದುಕಿದ್ದಾರೆ. ಅದರ ಜೊತೆಗೆ ರಕ್ಷಣಾ ಪಡೆಗಳು ಹೆಲಿಕಾಪ್ಟರ್ ಮೂಲಕ ಅನೇಕ ಕಡೆ ಬೀಳಿಸಿದ್ದ ಆಹಾರವನ್ನೂ ಸೇವಿಸಿದ್ದಾರೆ ಎಂದು ಕೊಲಂಬಿಯಾದ ಆದಿವಾಸಿ ಜನರ ರಾಷ್ಟ್ರೀಯ ಸಂಸ್ಥೆ (ಒಪಿಐಎಸಿ) ಹೇಳಿದೆ.

ಮೇ 1ರಂದು ಲಘು ವಿಮಾನ ಅಪಘಾತಕ್ಕೀಡಾದ ಕಾರಣ ಮಕ್ಕಳು ಕಾಡಿನಲ್ಲಿ ನಾಪತ್ತೆಯಾಗಿದ್ದರು. ಸೈನಿಕರು ಮತ್ತು ಸ್ವಯಂ ಸೇವಕರ ತಂಡವು ಶುಕ್ರವಾರ ಅವರನ್ನು ಪತ್ತೆ ಮಾಡಿ ಕಾಡಿನಿಂದ ಹೊರತಂದಿತ್ತು. ಮಕ್ಕಳೆಲ್ಲರೂ ಒಡಹುಟ್ಟಿದವರಾಗಿದ್ದು, 1 ವರ್ಷದಿಂದ 13 ವರ್ಷದೊಳಗಿನ ವಯೋಮಾನದವರಾಗಿದ್ದಾರೆ. ಕಾಡಿನ ಬಗ್ಗೆ ಇದ್ದ ಜ್ಞಾನದಿಂದ ಮಕ್ಕಳು ಬದುಕಲು ಸಾಧ್ಯವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಕ್ಕಳಿಗೆ ಚಿಕ್ಕಪುಟ್ಟ ಗಾಯಗಳಾಗಿವೆ. ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಈಗ ಅವರಿಗೆ ಘನಾಹಾರ ನೀಡಲಾಗುತ್ತಿಲ್ಲ. 2–3 ವಾರಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದು' ಎಂದು ಕೊಲಂಬಿಯ ರಕ್ಷಣಾ ಸಚಿವ ಇವಾನ್ ವೆಲಸ್ಕ್ವೀಸ್ ತಿಳಿಸಿದ್ದಾರೆ. ಕೊಲಂಬಿಯಾ ಅಧ್ಯಕ್ಷ ಗಸ್ಟೊವೊ ಪೆಟ್ರೊ ಮತ್ತವರ ಕುಟುಂಬ ಮಿಲಿಟರಿ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಯೋಗಕ್ಷೇಮ ವಿಚಾರಿಸಿದೆ.

'ದಟ್ಟ ಕಾಡಿನಲ್ಲಿ ನಾಲ್ವರು ಮಕ್ಕಳು ಬದುಕುಳಿದಿದ್ದಕ್ಕೆ ಅವರಿಗೆ ಸ್ಥಳೀಯ ಪರಿಸರದ ಕುರಿತು ಇದ್ದ ಜ್ಞಾನ ಮತ್ತು ಪರಿಸರದ ಜೊತೆಗಿದ್ದ ಸಂಬಂಧವೇ ಕಾರಣ. ಅಂಥ ಕಲಿಕೆಯು ಮಕ್ಕಳು ತಾಯಿಯ ಗರ್ಭದಲ್ಲಿದ್ದಾಗಲೇ ಆರಂಭವಾಗುತ್ತದೆ' ಎಂದು ಒಪಿಐಎಸಿ ಶ್ಲಾಘಿಸಿದೆ.

**ಸಂಕ್ಷಿಪ್ತ ಸುದ್ದಿ**

### ಪಾಕ್: ಧಾರಾಕಾರ ಮಳೆಗೆ 34 ಮಂದಿ ಸಾವು

ಪೆಶಾವರ (ಪಾಕಿಸ್ತಾನ), (ಎಎಫ್‌ಪಿ): ವಾಯವ್ಯ ಪಾಕಿಸ್ತಾನದಲ್ಲಿ ಬಿರುಗಾಳಿ ಹಾಗೂ ಧಾರಾಕಾರ ಮಳೆಯಿಂದಾಗಿ ಎಂಟು ಮಕ್ಕಳು ಸೇರಿದಂತೆ ಕನಿಷ್ಠ 34 ಜನರು ಮೃತಪಟ್ಟಿದ್ದು, ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಪ್ರಾಂತೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, ಶನಿವಾರ ಈ ಪ್ರದೇಶದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಬನ್ನು, ದಿಖಾನ್, ಲಕ್ಕಿ ಮಾರ್ವತ್ ಮತ್ತು ಕರಕ್ ಜಿಲ್ಲೆಗಳಲ್ಲಿ ಜನರು ಸಾವಿಗೀಡಾಗಿದ್ದಾರೆ.

ಮನೆಗಳ ಚಾವಣಿ, ಗೋಡೆಗಳು ಕುಸಿದಿರುವುದು ಹಾಗೂ ಮರಗಳು ಬುಡಸಮೇತ ಬಿದ್ದ ಪರಿಣಾಮ ಸಾವು, ನೋವು ಹೆಚ್ಚಾಗಿದೆ. ಗಾಯಗೊಂಡಿರುವ 110ಕ್ಕೂ ಹೆಚ್ಚು ಜನರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. 69 ಮನೆಗಳಿಗೆ ಹಾನಿಯಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ನಾಲ್ಕು ಜಿಲ್ಲೆಗಳಲ್ಲೂ ಅಧಿಕಾರಿಗಳು ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದಾರೆ.

### ಲಾಹೋರ್‌ಗೆ ಹೋಗಿದ್ದ ವಿಮಾನ!

ಇಸ್ಲಾಮಾಬಾದ್ (ಪಿಟಿಐ): ಅಮೃತಸರದಿಂದ ಅಹಮದಾಬಾದ್‌ಗೆ ಹೊರಟಿದ್ದ ಇಂಡಿಗೊ ಏರ್‌ಲೈನ್ಸ್ ವಿಮಾನವು ಪ್ರತಿಕೂಲ ಹವಾಮಾನದಿಂದ ಲಾಹೋರ್ ಸಮೀಪ ಹೋಗಿತ್ತು ಎಂದು ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ಗುಜ್ರನ್‌ವಾಲಾವರೆಗೆ ಹಾರಾಟ ನಡೆಸಿದ ಈ ವಿಮಾನ ನಂತರ, ಭಾರತದ ವಾಯುಪ್ರದೇಶ ಪ್ರವೇಶಿಸಿತು. ಈ ವೇಳೆ ಯಾವುದೇ ಅವಘಡ ಸಂಭವಿಸಿಲ್ಲ ಎಂದೂ ವರದಿ ಮಾಡಿವೆ. 'ಶನಿವಾರ ರಾತ್ರಿ 7.30ರ ವೇಳೆಗೆ ಲಾಹೋರ್‌ನ ಉತ್ತರದ ವಾಯು ಪ್ರದೇಶವನ್ನು ಪ್ರವೇಶಿಸಿದ ವಿಮಾನ 8.01 ಗಂಟೆಗೆ ಭಾರತದ ವಾಯುಪ್ರದೇಶಕ್ಕೆ ಮರಳಿತು. ಈ ವೇಳೆ ಪಾಕಿಸ್ತಾನ ಅಧಿಕಾರಿಗಳು ಹಾಗೂ ಅಮೃತಸರದ ವಿಮಾನ ಸಂಚಾರ ನಿಯಂತ್ರಣ ಕೇಂದ್ರದ ನಡುವೆ ಸಮನ್ವಯ ಇತ್ತು' ಎಂದು ಇಂಡಿಗೊ ಏರ್‌ಲೈನ್ಸ್ ತಿಳಿಸಿದೆ.





### ಪ್ರತಿಭಟಿಸದಿದ್ದರೆ ಇತರೆ ರಾಜ್ಯಗಳಿಗೂ ಇಂಥದ್ದೇ ಆದೇಶ ಸಾಧ್ಯತೆ: ಕೇಜ್ರಿವಾಲ್ ಎಚ್ಚರಿಕೆ

# ‘ಪ್ರಜಾಪ್ರಭುತ್ವ ಹತ್ತಿಕ್ಕಿದ ಸುಗ್ರೀವಾಜ್ಞೆ’

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಸೇವಾ ವಲಯದ ಮೇಲಿನ ನಿಯಂತ್ರಣ ಕುರಿತು ಸುಗ್ರೀವಾಜ್ಞೆ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ವಾಗ್ದಾಳಿ ನಡೆಸಿದರು. ‘ದೆಹಲಿಯಲ್ಲಿ ಮೊದಲಿಗೆ ಜಾರಿಗೆ ಬಂದಿದ್ದು, ಇಂಥದ್ದೇ ಸುಗ್ರೀವಾಜ್ಞೆ ಇತರೆ ರಾಜ್ಯಗಳಿಗೆ ಸಂಬಂಧಿಸಿದಂತೆಯೂ ಬರಬಹುದು’ ಎಂದು ಎಚ್ಚರಿಸಿದ್ದಾರೆ.

ಆಮ್ ಆದ್ಮಿ ಪಕ್ಷ (ಎಎಪಿ) ಇಲ್ಲಿನ ರಾಮ್‌ಲೀಲಾ ಮೈದಾನದಲ್ಲಿ ಏರ್ಪಡಿಸಿದ್ದ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಈ ಸುಗ್ರೀವಾಜ್ಞೆ ನಗರದ ಜನರಿಗೆ ಮಾಡಿರುವ ಅವಮಾನ. ಅದರ ಪ್ರಕಾರ ದೆಹಲಿಯಲ್ಲಿ ಪ್ರಜಾಪ್ರಭುತ್ವವೇ ಇಲ್ಲವಾಗಿದೆ’ ಎಂದರು.

‘ಬಿಜೆಪಿಯು ನನ್ನನ್ನು ನಿಂದಿಸಬಹುದು. ಆ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ, ದೆಹಲಿಯ ಜನರಿಗೆ ಅಪಮಾನ ಆಗುವುದನ್ನು ನಾನು ಸಹಿಸುವುದಿಲ್ಲ’ ಎಂದರು.

ಉರಿಬಿಸಿಲು ಲೆಕ್ಕಿಸದೇ ಸಾವಿರಾರು ಸಂಖ್ಯೆಯಲ್ಲಿ ಜನರು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್ ಅವರೂ ಭಾಗವಹಿಸಿದ್ದರು.

ಬಿಜೆಪಿಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ. ರಾಜಧಾನಿ ದೆಹಲಿಯಲ್ಲಿ ಸರ್ವಾಧಿಕಾರ ಆಡಳಿತವಿದೆ. ಲೆಫ್ಟಿನಂಟ್ ಗವರ್ನರ್ ಅವರದೇ ಪರಮಾಧಿಕಾರ. ಇಲ್ಲಿನ ಜನರು ಯಾರಿಗಾದರೂ ಮತ ನೀಡಲಿ, ಕೇಂದ್ರ ಸರ್ಕಾರವೇ ಇಲ್ಲಿ ಆಡಳಿತವನ್ನು ನಡೆಸಲಿದೆ ಎಂದು ಕೇಜ್ರಿವಾಲ್ ಟೀಕಿಸಿದರು.

**ಮುಖ್ಯಾಂಶಗಳು**

- ಪ್ರಧಾನಿ ನರೇಂದ್ರ ಮೋದಿ ವಿರುದ್ಧ ನೇರ ವಾಗ್ದಾಳಿ
- ಸುಗ್ರೀವಾಜ್ಞೆ– ಜನರಿಗೆ ಮಾಡಿದ ಅವಮಾನ ಎಂದು ತರಾಟೆ
- ಉರಿ ಬಿಸಿಲು ಲೆಕ್ಕಿಸದೇ ರ‍್ಯಾಲಿಯಲ್ಲಿ ಅಪಾರ ಜನರು ಭಾಗಿ

‘ಸುಪ್ರೀಂ ಕೋರ್ಟ್ ತೀರ್ಪನ್ನೇ ನಾನು ಒಪ್ಪಿಕೊಳ್ಳುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುವುದಾದರೆ ಅದು ಹಿಟ್ಲರ್‌ನ ಮನಸ್ಥಿತಿ. ಸುಗ್ರೀವಾಜ್ಞೆ ಮೂಲಕ ಅವರು ನಾನು ಪ್ರಜಾಪ್ರಭುತ್ವವನ್ನು ಒಪ್ಪಿಕೊಳ್ಳುವುದಿಲ್ಲ’ ಎಂದು ಘೋಷಿಸಿದ್ದಾರೆ ಎಂದರು.

ನಾನು ದೇಶದಾದ್ಯಂತ ಪ್ರವಾಸವನ್ನು ಮಾಡಲಿದ್ದೇನೆ. ನೀವು ಏಕಾಂಗಿಯಲ್ಲ. ನಿಮ್ಮೊಂದಿಗೆ 140 ಕೋಟಿ ಜನರೂ ಇದ್ದಾರೆ ಎಂದು ರಾಜಧಾನಿಯ ಜನತೆಗೆ ಈ ಮೂಲಕ ಭರವಸೆ ನೀಡಲು ಬಯಸುತ್ತೇನೆ ಎಂದು ಹೇಳಿದರು.

ಎಎಪಿ ನಾಯಕರಾದ ಮನೀಶ್ ಸಿಸೋಡಿಯಾ ಮತ್ತು ಸತ್ಯೇಂದ್ರ ಜೈನ್ ಅವರ ಬಂಧನವನ್ನು ಉಲ್ಲೇಖಿಸಿದ ಕೇಜ್ರಿವಾಲ್, ರಾಜಧಾನಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ತಡೆಯೊಡ್ಡುವುದೇ ಈ ಇಬ್ಬರ ಬಂಧನದ ಉದ್ದೇಶ. ಆದರೆ, ಪಕ್ಷದಲ್ಲಿ ಇಂತಹ ನೂರು ಮಂದಿ ಸಿಸೋಡಿಯಾ ಮತ್ತು ಜೈನ್‌ಗಳಿದ್ದಾರೆ. ಅವರೆಲ್ಲರೂ ಉತ್ತಮ ಕೆಲಸಗಳನ್ನು ಮುಂದುವರಿಸುತ್ತಾರೆ ಎಂದರು.

‘ಮೋದಿ ಮೊದಲು ಗುಜರಾತ್ ಮುಖ್ಯಮಂತ್ರಿ, ನಂತರ ದೀರ್ಘ ಕಾಲ ಪ್ರಧಾನಿ ಆಗಿದ್ದಾರೆ. ಕೇಜ್ರಿವಾಲ್ ಎಂಟು ವರ್ಷಗಳಿಂದ ಅಧಿಕಾರದಲ್ಲಿದ್ದಾರೆ. ಜನರಿಗಾಗಿ ಯಾರು ಹೆಚ್ಚು ಕೆಲಸ ಮಾಡಿದ್ದಾರೆ ಎಂದು ಕೇಳಬಯಸುತ್ತೇನೆ ಎಂದು ಸವಾಲು ಹಾಕಿದರು.

ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್ ಅವರು, 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಹೋರಾಡಲು ವಿರೋಧಪಕ್ಷಗಳು ಒಗ್ಗೂಡಬೇಕಾದ ಅಗತ್ಯವಿದೆ ಎಂದು ಸಲಹೆ ಮಾಡಿದರು.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು, ಬಿಜೆಪಿಯನ್ನು ಭಾರತೀಯ ಜುಗಾದ್ ಪಾರ್ಟಿ ಎಂದು ಟೀಕಿಸಿದರು. ಆ ಪಕ್ಷಕ್ಕೆ ಚುನಾಯಿತ ಸರ್ಕಾರಗಳನ್ನು ಹೇಗೆ ಪದಚ್ಯುತಗೊಳಿಸಬೇಕು ಎಂಬುದು ಗೊತ್ತಿದೆ ಎಂದರು.

ಸೇವಾ ವಲಯಗಳಿಗೆ ಸಂಬಂಧಿಸಿ ಚುನಾಯಿತ ಸರ್ಕಾರಕ್ಕೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಆ ನಂತರ ಕೇಂದ್ರ ಮೇ 19ರಂದು ಸುಗ್ರೀವಾಜ್ಞೆ ಹೊರಡಿಸಿತ್ತು. ಆ ಪ್ರಕಾರ, ಗ್ರೂಪ್ ಎ ಹಂತದ ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆ ನಿರ್ವಹಣೆಗಾಗಿ ಪ್ರಾಧಿಕಾರ ರಚಿಸಲಾಗಿದ್ದು, ವರ್ಗಾವಣೆ ಮತ್ತು ನಿಯೋಜನೆ ಅಧಿಕಾರವನ್ನು ಎಲ್‌.ಜಿ ಅವರಿಗೆ ನೀಡಲಾಗಿತ್ತು.

ಸುಗ್ರೀವಾಜ್ಞೆ ವಿರುದ್ಧದ ಹೋರಾಟಕ್ಕೆ ವಿವಿಧ ಪಕ್ಷಗಳ ಬೆಂಬಲ ಪಡೆಯುವ ನಿಟ್ಟಿನಲ್ಲಿ ಕೇಜ್ರಿವಾಲ್ ವಿವಿಧ ಪಕ್ಷಗಳ ಮುಖಂಡರನ್ನು ಭೇಟಿ ಆಗುತ್ತಿದ್ದಾರೆ. ಸುಗ್ರೀವಾಜ್ಞೆಗೆ ಕಾಯ್ದೆಯ ರೂಪ ನೀಡಲು ಮಂಡಿಸುವ ಮಸೂದೆಯ ವಿರುದ್ಧ ರಾಜ್ಯಸಭೆಯಲ್ಲಿ ಮತ ಚಲಾಯಿಸುವಂತೆ ಬೆಂಬಲ ಪಡೆಯುವುದು ಈ ಭೇಟಿಯ ಉದ್ದೇಶವಾಗಿದೆ.



ದೆಹಲಿಯಲ್ಲಿ ಭಾನುವಾರ ನಡೆದ ಎಎಪಿ ರ‍್ಯಾಲಿಯಲ್ಲಿ ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಭಾಗವಹಿಸಿದ್ದರು

### ಭ್ರಷ್ಟಾಚಾರ ಮುಚ್ಚಿಕೊಳ್ಳಲು ರ‍್ಯಾಲಿ: ಬಿಜೆಪಿ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ರಾಮ್‌ಲೀಲಾ ಮೈದಾನದಲ್ಲಿ ನಡೆಸಿದ ಎಎಪಿ ರ‍್ಯಾಲಿ ಮೂಲಕ ತಮ್ಮ ಸರ್ಕಾರದ ಭ್ರಷ್ಟಾಚಾರವನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವಾ, ಸಂಸದರಾದ ಮನೋಜ್ ತಿವಾರಿ, ರಮೇಶ್ ಬಿಧೂರಿ ಅವರು, ‘ಎಎಪಿ ಕೇಜ್ರಿವಾಲ್ ನೇತೃತ್ವದಲ್ಲಿ ಖಾಸ್ ಆದ್ಮಿ ಪಕ್ಷವಾಗಿ (ಶ್ರೀಮಂತರ ಪಕ್ಷ) ಪರಿವರ್ತನೆಗೊಂಡಿದೆ‘ ಎಂದು ಟೀಕಿಸಿದರು.

ಕೇಜ್ರಿವಾಲ್ ಹಿಂದೆ ಅಣ್ಣಾ ಹಜಾರೆ ಜೊತೆಗೂಡಿ ರಾಮ್‌ಲೀಲಾ ಮೈದಾನದಲ್ಲಿ ಭ್ರಷ್ಟಾಚಾರ ವಿರುದ್ಧ ಹೋರಾಟ ನಡೆಸಿದ್ದರು. ಈಗ ಅದೇ ಮೈದಾನದಲ್ಲಿ ಭ್ರಷ್ಟಾಚಾರ ಮರೆಮಾಚಲು ಹೋರಾಡುತ್ತಿದ್ದಾರೆ ಎಂದು ಮನೋಜ್ ತಿವಾರಿ ವ್ಯಂಗ್ಯವಾಡಿದರು.

ಸಚ್‌ದೇವಾ ಅವರು, ಎಎಪಿ ಈಗ ಸಾಮಾನ್ಯ ಜನರಿಗಾಗಿ ಕೆಲಸ ಮಾಡುತ್ತಿಲ್ಲ. ಅದೀಗ ದೆಹಲಿಯಲ್ಲಿ ಜನರ ದರೋಡೆಗೆ ಇಳಿಸಿದೆ ಎಂದು ಟೀಕಿಸಿದರು.



ರಾಜಸ್ಥಾನದ ದೌಸಾದಲ್ಲಿ ಭಾನುವಾರ ರಾಜೇಶ್ ಪೈಲಟ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದ ನಿಮಿತ್ತ ನಡೆದ ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಅವರ ಪುತ್ರ, ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಭಾಗವಹಿಸಿದ್ದರು —ಪಿಟಿಐ ಚಿತ್ರ

# ಪಕ್ಷ ತೊರೆಯದ ಪೈಲಟ್

### ನ್ಯಾಯಕ್ಕಾಗಿ ಹೋರಾಟ ನಿಲ್ಲದು– ಸಚಿನ್ ಪುನರುಚ್ಚಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ ಕಾಂಗ್ರೆಸ್‌ನ ಬಂಡಾಯ ನಾಯಕ, ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಅವರು ಭ್ರಷ್ಟಾಚಾರ ಪ್ರಕರಣಗಳ ತನಿಖೆ ಕುರಿತ ತಮ್ಮ ಬೇಡಿಕೆ ಈಡೇರಿಕೆಗೆ ಪಟ್ಟು ಹಿಡಿದಿದ್ದು, ಪಕ್ಷ ತೊರೆಯುವ ಯಾವುದೇ ಇಂಗಿತವನ್ನು ವ್ಯಕ್ತಪಡಿಸಿಲ್ಲ.

ಈ ಬೆಳವಣಿಗೆಯು ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಸಮಾಧಾನ ನೀಡಿದೆ. ಸಚಿನ್ ಪೈಲಟ್ ತಮ್ಮ ತಂದೆ ರಾಜೇಶ್ ಪೈಲಟ್ ಅವರ ಪುಣ್ಯತಿಥಿ ದಿನವಾದ ಭಾನುವಾರ, ‘ಪಕ್ಷ ತೊರೆದು ಹೊಸ ಪಕ್ಷ ಸ್ಥಾಪಿಸುವ ನಿರ್ಧಾರ ಪ್ರಕಟಿಸುವರು’ ಎಂಬ ವದಂತಿ ಹಬ್ಬಿತ್ತು.

ಆದರೆ, ಅಂತಹ ನಿರೀಕ್ಷಿತ ಬೆಳವಣಿಗೆಗಳು ಭಾನುವಾರ ಘಟಿಸಿಲ್ಲ. ರಾಜಸ್ಥಾನ ವಿಧಾನಸಭೆಗೆ ಈ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ. ಪಕ್ಷದಲ್ಲಿನ ಬೆಳವಣಿಗೆಗಳಿಂದಾಗಿ ಕಾಂಗ್ರೆಸ್ ನಾಯಕರು ಆತಂಕಗೊಂಡಿದ್ದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಪ್ರತ್ಯೇಕವಾಗಿ ರಾಜೇಶ್ ಪೈಲಟ್ ಅವರ ಸೇವೆಯನ್ನು ಸ್ಮರಿಸಿ ಟ್ವೀಟ್ ಮಾಡಿದ್ದು, ಪಕ್ಷದಲ್ಲಿ ‘ಎಲ್ಲವೂ ಸರಿಯಾಗಿದೆ’ ಎಂಬ ಸಂದೇಶ ರವಾನಿಸಿದರು.

‘ರೈತರು, ನೊಂದವರು, ಶೋಷಿತರ ಪರವಾಗಿ ದನಿ ಎತ್ತಿದ್ದ ರಾಜೇಶ್ ಪೈಲಟ್ ಅವರು, ವಾಯುಪಡೆ ಮೂಲಕವೂ ದೇಶ ಸೇವೆ ಮಾಡಿದ್ದರು’ ಎಂದು ಖರ್ಗೆ ಸ್ಮರಿಸಿದರು. ದೌಸಾದಲ್ಲಿ ನಡೆದ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿನ್ ಪೈಲಟ್, ‘ಜನರ ವಿಶ್ವಾಸವೇ ನನ್ನ ಬಹುದೊಡ್ಡ ಆಸ್ತಿ. ನನ್ನ ಬೇಡಿಕೆಗಳಿಂದ ಹಿಂದೆ ಸರಿಯುವುದಿಲ್ಲ. ಹೋರಾಟ ಮುಂದುವರಿಯಲಿದೆ’ ಎಂದು ಹೇಳಿದರು.

20–22 ವರ್ಷಗಳ ತಮ್ಮ ರಾಜಕೀಯ ಬದುಕಿನಲ್ಲಿ ಜನರ ವಿಶ್ವಾಸಕ್ಕೆ ಧಕ್ಕೆ ತರುವ ಯಾವುದೇ ಯತ್ನವನ್ನು ಮಾಡಿಲ್ಲ ಎಂದು ಪೈಲಟ್ ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಅವರು ರಾಜೇಶ್ ಪೈಲಟ್ ಅವರ ಪ್ರತಿಮೆ ಅನಾವರಣಗೊಳಿಸಿದರು.

ಹಿಂದಿನ ಮುಖ್ಯಮಂತ್ರಿ ಬಿಜೆಪಿಯ ವಸುಂಧರಾ ರಾಜೇ ಅವಧಿಯಲ್ಲಿ ನಡೆದಿದ್ದ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಸೋರಿಕೆ ಪ್ರಕರಣ ಕುರಿತು ತನಿಖೆ ನಡೆಸಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿದರು.

### ಅಭಿವೃದ್ಧಿಯ ಇತಿಹಾಸ ಸೃಷ್ಟಿ: ಸಿ.ಎಂ

ಜೈಪುರ (ಪಿಟಿಐ): ‘ರಾಜಸ್ಥಾನದಲ್ಲಿ ಕಳೆದ ನಾಲ್ಕುವರೆ ವರ್ಷದ ಆಡಳಿತದಲ್ಲಿ ಕಾಂಗ್ರೆಸ್ ಪಕ್ಷ ಅಭಿವೃದ್ಧಿಯ ಇತಿಹಾಸವನ್ನೇ ಸೃಷ್ಟಿಸಿದೆ’ ಎಂದು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹೇಳಿಕೊಂಡಿದ್ದಾರೆ.

ಪ್ರತಾಪ್‌ಗಢ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದ ಸಾಧನೆಗಳ ಪಟ್ಟಿ ಮಾಡಿದರು.

70 ವರ್ಷಗಳಲ್ಲಿ ರಾಜ್ಯದಲ್ಲಿ 250 ಕಾಲೇಜುಗಳು ಆರಂಭವಾಗಿದ್ದವು. ನಮ್ಮ ಸರ್ಕಾರ ನಾಲ್ಕುವರೆ ವರ್ಷದಲ್ಲಿ 300 ಕಾಲೇಜುಗಳನ್ನು ಆರಂಭಿಸಿದ್ದು, ಬಾಲಕಿಯರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ ಎಂದು ಹೇಳಿದರು.

ಮೂಲಸೌಕರ್ಯ, ಆರೋಗ್ಯ, ಸಾಮಾಜಿಕ ಭದ್ರತೆ, ಬುಡಕಟ್ಟು ಜನರ ಕಲ್ಯಾಣ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಉಲ್ಲೇಖಿಸಿ, ಅಭಿವೃದ್ಧಿಯ ಇತಿಹಾಸವೇ ರಾಜ್ಯದಲ್ಲಿ ಸೃಷ್ಟಿಯಾಗಿದೆ ಎಂದು ಬಣ್ಣಿಸಿದರು.

### ಮತಾಂತರ: ಪ್ರಮುಖ ಆರೋಪಿ ಬಂಧನ

ಠಾಣೆ (ಪಿಟಿಐ): ಆನ್‌ಲೈನ್ ಗೇಮಿಂಗ್ ಆ್ಯಪ್ ಮೂಲಕ ಯುವಜನರನ್ನು ಧಾರ್ಮಿಕ ಮತಾಂತರ ಮಾಡುವ ಜಾಲದಲ್ಲಿ ತೊಡಗಿದ್ದ ಪ್ರಮುಖ ಆರೋಪಿ ಶಹನವಾಜ್ ಖಾನ್ ಅಲಿಯಾಸ್ ಬಡ್ಡೊ ಎಂಬಾತನನ್ನು ಉತ್ತರ ಪ್ರದೇಶ ಪೊಲೀಸರು ರಾಯಗಢ ಜಿಲ್ಲೆಯಲ್ಲಿ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ವಿಚಾರಣೆಗೆಂದು ಖಾನ್ ಅವರನ್ನು ಮುಂಬ್ರಾಗೆ ಕರೆದೊಯ್ಯಲಾಗಿದೆ, ಆದರೆ ಪ್ರಕರಣದ ಬಗ್ಗೆ ವಿವರವಾಗಿ ಹೇಳಲು ಅವರು ನಿರಾಕರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ಗಡಿಪಾರು ಆದೇಶಕ್ಕೆ ತಡೆ; ವಿದ್ಯಾರ್ಥಿಗಳು ನಿರಾಳ

ನವದೆಹಲಿ (ಪಿಟಿಐ): ಕೆನಡಾದಲ್ಲಿ ಗಡಿಪಾರು ಭೀತಿ ಎದುರಿಸುತ್ತಿದ್ದ ಭಾರತೀಯ ವಿದ್ಯಾರ್ಥಿಗಳು ಸದ್ಯ ನಿರಾಳರಾಗಿದ್ದು, ಕೆನಡಾದ ಆಡಳಿತದಿಂದ ಗಡಿಪಾರು ವಿರುದ್ಧ ತಡೆಯಾಜ್ಞೆ ಆದೇಶವನ್ನು ಪಡೆದಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ನಕಲಿ ಪ್ರವೇಶಪತ್ರವನ್ನು ನೀಡಿ ವಿದ್ಯಾರ್ಥಿಗಳು ವೀಸಾ ಪಡೆದಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಕೆನಡಾ ಆಡಳಿತವು ಈ ವಿದ್ಯಾರ್ಥಿಗಳಿಗೆ ಗಡಿಪಾರು ಮಾಡಲು ಆದೇಶಿಸಿತ್ತು. ಈ ವಿದ್ಯಾರ್ಥಿಗಳು ಕೆಲ ಏಜೆಂಟರ ಸಂಚಿನ ಬಲಿಪಶುಗಳಾಗಿದ್ದಾರೆ. ಮಾನವೀಯ ದೃಷ್ಟಿಯಿಂದ ಈ ಪ್ರಕರಣ ಪರಿಗಣಿಸಬೇಕು ಎಂದು ಕೇಂದ್ರ ಸರ್ಕಾರವು ಕೆನಡಾ ಸರ್ಕಾರಕ್ಕೆ ಮನವಿ ಮಾಡಿತ್ತು.

ಕೆನಡಾದಿಂದ ಗಡಿಪಾರು ಭೀತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 700ಕ್ಕಿಂತಲೂ ಕಡಿಮೆ ಇದೆ. ಹೆಚ್ಚಿನವರು 2017–18ರಲ್ಲಿ ಕೆನಡಾಗೆ ಹೋಗಿದ್ದರು. ಶಿಕ್ಷಣದ ಬಳಿಕ ಕೆಲವರು ಉದ್ಯೋಗ ಮಾಡಲು ಅನುಮತಿ ಪಡೆದಿದ್ದರೆ, ಇನ್ನೂ ಕೆಲವರು ಶಿಕ್ಷಣವನ್ನು ಮುಂದುವರಿಸಿದ್ದರು. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ಬಗ್ಗೆ ಕೆನಡಾದೊಂದಿಗೆ ಚರ್ಚಿಸಿದ್ದರು.

**ಸಂಕ್ಷಿಪ್ತ ಸುದ್ದಿ**

### ಶಕ್ತಿಶಾಲಿ ರಾಷ್ಟ್ರವಾಗಿ ಭಾರತ: ಹೊಸಬಾಳೆ



ದತ್ತಾತ್ರೇಯ ಹೊಸಬಾಳೆ

ಸುಲ್ತಾನ್‌ಪುರ (ಉತ್ತರ ಪ್ರದೇಶ, ಪಿಟಿಐ): ‘ವಿರೋಧಿ ಶಕ್ತಿಗಳ ತೀವ್ರ ಪ್ರತಿರೋಧದ ನಡುವೆಯೂ ಭಾರತ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿದೆ’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಶನಿವಾರ ಇಲ್ಲಿ ತಿಳಿಸಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು ‘ಯುವ ಸಮೂಹಕ್ಕೆ ದೇಶದ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ತಿಳಿಸಬೇಕಿದೆ. ಇದರಿಂದ ಸ್ಫೂರ್ತಿ ಪಡೆದು ಅವರು ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡಬೇಕು’ ಎಂದರು.

‘ದೇಶವೊಂದು ಎಷ್ಟೇ ಸಂಪದ್ಭರಿತ ನೈಸರ್ಗಿಕ ಸಂಪನ್ಮೂಲ, ಐತಿಹಾಸಿಕ ಚರಿತ್ರೆ ಹೊಂದಿದ್ದರೂ; ಅಲ್ಲಿ ವಾಸಿಸುವ ಜನರು ಸಮಾಜಕ್ಕೆ ಸಮರ್ಪಣಾ ಮನೋಭಾವದಿಂದ ಸೇವೆ ಸಲ್ಲಿಸದಿದ್ದರೆ, ಎಂದಿಗೂ ಆ ರಾಷ್ಟ್ರ ಪ್ರಗತಿ ಹೊಂದಲು ಸಾಧ್ಯವಿಲ್ಲ’ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು.

### ಮಹಾಕಾಲೇಶ್ವರ ದೇವಾಲಯಕ್ಕೆ ಡಿಕೆಶಿ ಭೇಟಿ

ಉಜ್ಜೈನಿ (ಪಿಟಿಐ): ‘ಮಧ್ಯಪ್ರದೇಶದಲ್ಲಿ ವರ್ಷಾಂತ್ಯಕ್ಕೆ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ’ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿನ ಮಹಾಕಾಲೇಶ್ವರ ದೇವಸ್ಥಾನದಲ್ಲಿ ಬೆಳಗಿನ ಜಾವ ನಡೆದ ‘ಭಸ್ಮ ಆರತಿ’ಯಲ್ಲಿ ಶಿವಕುಮಾರ್ ಅವರು ಪಾಲ್ಗೊಂಡರು. ಬಳಿಕ ಕೆಲ ಹೊತ್ತು ಧ್ಯಾನ ಮಾಡಿದರು. ನಂತರ ಕಾಲಭೈರವ ದೇವಾಲಯಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ವೇಳೆ ಪತ್ರಕರ್ತರ ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

‘ಹಿಂದುತ್ವ, ದೇವಸ್ಥಾನ ಮತ್ತು ದೇವರು ಬಿಜೆಪಿ ಅವರ ಆಸ್ತಿಯಲ್ಲ. ಅವುಗಳು ಇರುವುದು ಎಲ್ಲರಿಗಾಗಿ. ಸಮಾಜದ ಎಲ್ಲ ವರ್ಗ, ಎಲ್ಲ ಸಂಸ್ಕೃತಿ, ಭಾಷೆ ಹಾಗೂ ಎಲ್ಲ ಧರ್ಮಗಳಲ್ಲಿ ಕಾಂಗ್ರೆಸ್‌ಗೆ ನಂಬಿಕೆ ಇದೆ’ ಎಂದರು.

### ‘ಮಣಿಪುರ: 346 ಶಿಬಿರಗಳಲ್ಲಿ ನಿರಾಶ್ರಿತರಿಗೆ ಆಶ್ರಯ’

ಇಂಫಾಲ್ (ಪಿಟಿಐ): ‘ಹಿಂಸಾಚಾರದಿಂದ ನೆಲೆ ಕಳೆದುಕೊಂಡಿದ್ದ 50 ಸಾವಿರ ಮಂದಿ ರಾಜ್ಯದಾದ್ಯಂತ ನಿರ್ಮಿಸಲಾಗಿರುವ 349 ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ’ ಎಂದು ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಡಾ. ಆರ್‌.ಕೆ. ರಂಜನ್ ಅವರು ಭಾನುವಾರ ಮಾಹಿತಿ ನೀಡಿದರು.

‘ಮಹಿಳೆಯರು, ವೃದ್ಧರು ಹಾಗೂ ಮಕ್ಕಳಿಗಾಗಿ ವಿಶೇಷವಾಗಿ ನಿರ್ಮಿಸಿರುವ ಶಿಬಿರಗಳ ಬಗ್ಗೆ ಹೆಚ್ಚಿನ ನಿಗಾ ಇರಿಸುವಂತೆ ನೋಡಲ್ ಅಧಿಕಾರಿಗಳಿಗೆ ಹೇಳಲಾಗಿದೆ’ ಎಂದರು.

ಅಂತರ್ಜಾಲ ಸೇವೆ ನಿಷೇಧವನ್ನು ಜೂನ್ 15 ಮಧ್ಯಾಹ್ನ 3 ಗಂಟೆಯವರೆಗೂ ಮಣಿಪುರ ಸರ್ಕಾರ ಮುಂದುವರೆಸಿದೆ.

### ‘80 ಕ್ಷೇತ್ರಗಳಲ್ಲೂ ಬಿಜೆಪಿ ಸೋಲಿಸಿ’

ಲಖನೌ (ಪಿಟಿಐ): ‘80 ಕ್ಷೇತ್ರಗಳಲ್ಲೂ ಸೋಲಿಸಿ; ಬಿಜೆಪಿಯನ್ನು ತೊಲಗಿಸಿ’... ಎಂಬ ಹೊಸ ಘೋಷಣೆಯನ್ನು ಭಾನುವಾರ ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್ ಮೊಳಗಿಸಿದರು.

‘2024ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಬೇಕು’ ಎಂದು ಕರೆ ನೀಡಿದರು.

### ಕಾಂಗ್ರೆಸ್, ಡಿಎಂಕೆ 2ಜಿ, 3ಜಿ, 4ಜಿ ಪಕ್ಷಗಳು: ಶಾ

ವೆಲ್ಲೂರು (ತಮಿಳುನಾಡು) (ಪಿಟಿಐ): ಕುಟುಂಬ ರಾಜಕಾರಣವನ್ನು ಉಲ್ಲೇಖಿಸಿ ಕಾಂಗ್ರೆಸ್ ಮತ್ತು ಡಿಎಂಕೆಯನ್ನು ಟೀಕಿಸಿದ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು, ಆ ಪಕ್ಷಗಳನ್ನು 2ಜಿ, 3ಜಿ, 4ಜಿ ಪಕ್ಷಗಳು ಎಂದು ಲೇವಡಿ ಮಾಡಿದ್ದಾರೆ.

ಇಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ತಮಿಳುನಾಡಿನಲ್ಲಿ ಈ ಪಕ್ಷಗಳನ್ನು ಕಿತ್ತೆಸೆಯುವ ಕಾಲ ಬರಲಿದೆ ಮತ್ತು ‘ಮಣ್ಣಿನ ಮಗನಿಗೆ’ ಅಧಿಕಾರ ಲಭಿಸಲಿದೆ’ ಎಂದಿದ್ದಾರೆ.

‘ನಾನು 2ಜಿ ಹಗರಣದ ಬಗ್ಗೆ ಮಾತನಾಡುತ್ತಿಲ್ಲ. 2ಜಿ ಎಂದರೆ ಎರಡು ತಲೆಮಾರು, 3ಜಿ ಎಂದರೆ ಮೂರು ತಲೆಮಾರು ಹಾಗೂ 4ಜಿ ಎಂದರೆ ನಾಲ್ಕು ತಲೆಮಾರು’ ಎಂದಿದ್ದಾರೆ.

**ಭವಿಷ್ಯದಲ್ಲಿ ತಮಿಳು ಪ್ರಧಾನಿ (ಚೆನ್ನೈ ವರದಿ):** ಭವಿಷ್ಯದಲ್ಲಿ ತಮಿಳರೊಬ್ಬರನ್ನು ಪ್ರಧಾನಿಯಾಗಿಸುವ ಬಗ್ಗೆ ಅಮಿತ್ ಶಾ ಅವರು ಆಶಯ ವ್ಯಕ್ತಪಡಿಸಿರುವುದಾಗಿ ಪಕ್ಷದ ಮೂಲಗಳು ತಿಳಿಸಿವೆ.

### ‘ಮದರಸಾಗಳೇ ಲವ್ ಜಿಹಾದ್ ಕೇಂದ್ರ’

ಬರೇಲಿ (ಉತ್ತರ ಪ್ರದೇಶ)(ಪಿಟಿಐ): ‘ಮದರಸಾಗಳೇ ಲವ್ ಜಿಹಾದ್ ಕೇಂದ್ರಗಳಾಗಿವೆ. ಇವುಗಳೇ ಜಾಗತಿಕ ಸಂಘರ್ಷಕ್ಕೂ ಕಾರಣ. ಹೀಗಾಗಿ ದೇಶದಲ್ಲಿರುವ ಎಲ್ಲ ಮದರಸಾಗಳನ್ನು ಮುಚ್ಚಬೇಕು’ ಎಂದು ವಿಶ್ವ ಹಿಂದೂ ಪರಿಷತ್ ನಾಯಕಿ ಸಾಧ್ವಿ ಪ್ರಾಚಿ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಿಂದೂಗಳು ಸಂಪತ್ತು ಗಳಿಸುವ ಬಗ್ಗೆ ಮಾತ್ರ ಯೋಚಿಸುತ್ತಾರೆ. ಆದರೆ, ಒಂದು ವಿಶೇಷ ಸಮುದಾಯ ಇಡೀ ಭಾರತವನ್ನು ಆಳಬೇಕು ಎಂದು ಯೋಚಿಸುತ್ತದೆ. ಸಾವಿರಾರು ವರ್ಷಗಳಿಂದಲೂ ಇದು ಅವರ ಕಾರ್ಯಸೂಚಿಯಾಗಿದೆ’ ಎಂದರು.

‘ಲವ್ ಜಿಹಾದ್ ಬಗ್ಗೆ ಮದರಸಾಗಳಲ್ಲಿ ಮಾಹಿತಿ ನೀಡಲಾಗುತ್ತದೆ. ಈ ಕಾರಣಕ್ಕಾಗಿಯೇ ಲವ್ ಜಿಹಾದ್ ಪ್ರಕರಣಗಳು ಹೆಚ್ಚುತ್ತಿವೆ. ಮದರಸಾಗಳನ್ನು ಮುಚ್ಚಿದ ದಿನವೇ ಲವ್ ಜಿಹಾದ್ ಕೂಡ ನಿಲ್ಲುತ್ತದೆ ಎಂದರು.

# 15ರಂದು ಸೌರಾಷ್ಟ್ರ–ಕಛ್ ದಾಟಲಿರುವ ‘ಬಿಪರ್‌ಜಾಯ್’

ಅಹಮದಾಬಾದ್ (ಪಿಟಿಐ): ‘ಬಿಪರ್‌ಜಾಯ್’ ಚಂಡಮಾರುತ ತೀವ್ರತೆ ಪಡೆದುಕೊಂಡಿದೆ. ವೇಗವಾಗಿ ಸಾಗುತ್ತಿರುವ ಈ ಚಂಡಮಾರುತ, ಜೂನ್ 15ರ ಮಧ್ಯಾಹ್ನದ ವೇಳೆಗೆ ಗುಜರಾತ್‌ನ ಸೌರಾಷ್ಟ್ರ–ಕಛ್ ಹಾಗೂ ಪಾಕಿಸ್ತಾನದ ಕರಾವಳಿಯನ್ನು ದಾಟುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಭಾನುವಾರ ಹೇಳಿದೆ.

ಜೂನ್ 15ರ ವರೆಗೆ ಅರಬ್ಬಿ ಸಮುದ್ರ ಮಧ್ಯ ಭಾಗದಲ್ಲಿ ಮೀನುಗಾರಿಕೆಗೆ ತೆರಳದಂತೆ ಇಲಾಖೆಯು ಮೀನುಗಾರರಿಗೆ ಮುನ್ನಚ್ಚರಿಕೆ ನೀಡಿದೆ. ಜೂನ್ 12ರಿಂದ 15ರ ವರೆಗೆ ಉತ್ತರ ಭಾಗದಲ್ಲಿ ಹಾಗೂ ಜೂನ್ 15ರ ವರೆಗೆ ಸೌರಾಷ್ಟ್ರ–ಕಛ್ ಕರಾವಳಿಯಲ್ಲಿ ಮೀನುಗಾರಿಕೆ ನಡೆಸದಂತೆ ಸೂಚಿಸಿದೆ.

ಹಗಲಿನ ವೇಳೆ ಮಾರುತವು ಗಂಟೆಗೆ 40–50 ಕಿ.ಮೀ. ವೇಗ ಪಡೆದುಕೊಳ್ಳಲಿದ್ದು, ಸೌರಾಷ್ಟ್ರ ಮತ್ತು ಕಛ್ ಕರಾವಳಿಯನ್ನು ತಲುಪುವ ವೇಳೆಗೆ ಈ ವೇಗವು ಗಂಟೆಗೆ 60 ಕಿ.ಮೀ. ನಷ್ಟಾಗಲಿದೆ. ಸೋಮವಾರ ಮತ್ತೆ ತನ್ನ ಜೋಗಾಗಿ ಬೀಸಲಿರುವ ಮಾರುತವು ಗಂಟೆಗೆ 65 ಕಿ.ಮೀ. ವೇಗದಲ್ಲಿ ಚಲಿಸಲಿದೆ ಎಂದು ಇಲಾಖೆ ಹೇಳಿದೆ.

ಮಂಗಳವಾರ ಮತ್ತು ಬುಧವಾರದ ವೇಳೆಗೆ ಗಂಟೆಗೆ 70 ಕಿ.ಮೀ.ನಷ್ಟು ವೇಗದೊಂದಿಗೆ ಸಾಗಲಿದೆ ಎಂದಿದೆ.

ರಾಜ್ಯ ಸರ್ಕಾರಗಳು ತಮಗೆ ಸಂಬಂಧಿಸಿದ ಕರಾವಳಿ ಪ್ರದೇಶಗಳಲ್ಲಿನ ಪರಿಸ್ಥಿತಿ ಕುರಿತು ನಿಗಾವಹಿಸಿ, ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಇಲಾಖೆ ಸಲಹೆ ನೀಡಿದೆ.



ಬಿಪರ್‌ಜಾಯ್ ಚಂಡಮಾರುತ ವೇಗವಾಗಿ ಮುನ್ನುಗ್ಗುತ್ತಿರುವ ಹಿನ್ನೆಲೆಯಲ್ಲಿ ಗುಜರಾತ್‌ನ ಪೋರಬಂದರ್‌ನಲ್ಲಿ ಮೀನುಗಾರಿಕೆ ದೋಣಿಗಳನ್ನು ಭಾನುವಾರ ನಿಲುಗಡೆ ಮಾಡಲಾಗಿತ್ತು —ಪಿಟಿಐ ಚಿತ್ರ

**ಕ್ರಮ ಸಮರ್ಥಿಸಿಕೊಂಡ ರೈಲ್ವೆ ಇಲಾಖೆ**

# ‘ಸೇವಾಸೌಲಭ್ಯಗಳಿಗೆ ಹಣ ವ್ಯಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲು ಪ್ರಯಾಣಿಕರಿಗೆ ಅಗತ್ಯ ಸೇವೆ ಒದಗಿಸಲು ಪಿಂಗಾಣಿ ವಸ್ತುಗಳು, ಪೀಠೋಪಕರಣಗಳ, ಪಾದವನ್ನು ನೀವುವ ಯಂತ್ರಗಳ ಮೇಲೆ ಹಣ ವ್ಯಯಿಸುತ್ತಿರುವ ಕ್ರಮವನ್ನು ರೈಲ್ವೆ ಇಲಾಖೆಯು ಬಲವಾಗಿ ಸಮರ್ಥಿಸಿಕೊಂಡಿದೆ.

ಸುರಕ್ಷತಾ ನಿಧಿ ಬಳಕೆ ಕುರಿತಂತೆ ಹಣಕಾಸು ಸಚಿವಾಲಯವು ಬಿಡುಗಡೆ ಮಾಡಿರುವ ಮಾರ್ಗದರ್ಶಿ ಸೂತ್ರಗಳಿಗೆ ಅನುಸಾರವಾಗಿಯೇ ಇವುಗಳಿಗೆ ಹಣ ವ್ಯಯಿಸಲಾಗುತ್ತಿದೆ. ವಿವಿಧ ರೈಲ್ವೆ ವಲಯಗಳು ಕೂಡಾ ನಾಗರಿಕರಿಗೆ ಪ್ರಯಾಣದ ಅವಧಿಯಲ್ಲಿ ಅಗತ್ಯ ಸೌಲಭ್ಯ ಒದಗಿಸಲು ಕ್ರಮವಹಿಸಿವೆ ಎಂದಿದೆ.

ಒಡಿಶಾದ ಬಾಲೇಶ್ವರದಲ್ಲಿ ನಡೆದ ರೈಲು ಅಪಘಾತದ ಬಳಿಕ ರೈಲ್ವೆ ಇಲಾಖೆಯು ಸುರಕ್ಷತಾ ಕ್ರಮಗಳನ್ನು ಕಡೆಗಣಿಸಿದೆ ಎಂದು ವಿರೋಧಪಕ್ಷಗಳು ದಾಳಿ ನಡೆಸಿದ್ದವು. ಈ ಹಿನ್ನೆಲೆಯಲ್ಲಿ ಇಲಾಖೆಯು ಈ ಸಮರ್ಥನೆ ನೀಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಮಹಾಲೇಖಪಾಲರ 2021ರ ವರದಿಯ ಅಂಶಗಳನ್ನು ಟ್ವೀಟ್ ಮಾಡಿದ್ದು, ಪಿಂಗಾಣಿ ವಸ್ತುಗಳು, ಲ್ಯಾಪ್‌ಟಾಪ್, ಪೀಠೋಪಕರಣ ಖರೀದಿಗೆ ಹಣ ವ್ಯಯಿಸಿ ದುರ್ಬಳಕೆ ಮಾಡಲಾಗಿದೆ‘ ಎಂದಿದ್ದರು.

ರೈಲ್ವೆ ಸುರಕ್ಷತೆಗಾಗಿ ಇರುವ ಹಣವನ್ನು ಹೀಗೇ ವ್ಯಯಿಸಲಾಗಿದೆ. ಮೋದಿ ನೇತೃತ್ವದ ಸರ್ಕಾರ ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶ (ಆರ್‌ಆರ್‌ಎಸ್‌ಕೆ) ನಿಧಿಯನ್ನು ವಿವಿಧ ವಸ್ತುಗಳ ಖರೀದಿಗೆ ಬಳಕೆ ಮಾಡಿದೆ ಎಂದು ಟೀಕಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ರೈಲ್ವೆ ಅಧಿಕಾರಿಯೊಬ್ಬರು, ಸುರಕ್ಷತಾ ಕ್ರಮಗಳ ಜೊತೆಗೆ ಕೆಲಸ ವಾತಾವರಣ ಉತ್ತಮಪಡಿಸಲು, ತರಬೇತಿ ಕಾರ್ಯಗಳಿಗೂ ಹಣ ನಿಗದಿಯಾಗಿರುತ್ತದೆ ಎಂದು ಹೇಳಿದ್ದಾರೆ.

### ‘ನ್ಯೂನತೆ ಪತ್ತೆ ಹಚ್ಚಿ, ಸರಿಪಡಿಸಿ’

ವಲಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರದೇಶಗಳಿಗೆ ನಿಯಮಿತವಾಗಿ ಭೇಟಿ ನೀಡಬೇಕು. ವಾಸ್ತವ ಸಂಗತಿಗಳನ್ನು ಅರಿಯುವ ಜೊತೆಗೆ ರೈಲ್ವೆ ವ್ಯವಸ್ಥೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ರೈಲ್ವೆ ಮಂಡಳಿ ಸೂಚಿಸಿದೆ.

ಮಂಡಳಿಯ ಅಧ್ಯಕ್ಷ ಅರುಣಕುಮಾರ್ ಲಾಹೋಟಿ ಅವರು ಇತ್ತೀಚೆಗೆ ನಡೆಸಿದ ರೈಲ್ವೆ ವಲಯ ಪ್ರಧಾನ ವ್ಯವಸ್ಥಾಪಕರು ಹಾಗೂ ವಿಭಾಗೀಯ ವ್ಯವಸ್ಥಾಪಕರ ಸಭೆಯಲ್ಲಿ ಈ ಸೂಚನೆ ನೀಡಿದ್ದಾರೆ.

### ಟೆನಿಸ್: ಸರ್ಬಿಯ ಆಟಗಾರ 23 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ

# ಜೊಕೊವಿಚ್ ಐತಿಹಾಸಿಕ ಸಾಧನೆ

ಪ್ಯಾರಿಸ್ (ಎಎಫ್‌ಪಿ/ ರಾಯಿಟರ್ಸ್): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗುವ ಮೂಲಕ ಸರ್ಬಿಯಾದ ನೊವಾಕ್ ಜೊಕೊವಿಚ್, 23ನೇ ಗ್ರ್ಯಾನ್‌ಸ್ಲಾಮ್ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.

ರೋಲಂಡ್ ಗ್ಯಾರೋಸ್‌ನ ಫಿಲಿಪ್ ಶಾಟ್ರಿಯೆರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಜೊಕೊವಿಚ್ 7–6, 6–3, 7–5 ರಲ್ಲಿ ನಾರ್ವೆಯ ಕ್ಯಾಸ್ಪರ್ ರೂಡ್ ಅವರನ್ನು ಮಣಿಸಿದರು. ಈ ಮೂಲಕ ರಫೆಲ್ ನಡಾಲ್ ಅವರನ್ನು ಹಿಂದಿಕ್ಕಿ, ಅತಿಹೆಚ್ಚು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ ಎನಿಸಿಕೊಂಡರು.

22 ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಸ್ಪೇನ್‌ನ ನಡಾಲ್ ಎರಡನೇ ಸ್ಥಾನದಲ್ಲಿದ್ದರೆ, 20 ಟ್ರೋಫಿ ಜಯಿಸಿರುವ ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ಮೂರನೇ ಸ್ಥಾನದಲ್ಲಿದ್ದಾರೆ. ಫ್ರೆಂಚ್ ಓಪನ್ ಗೆದ್ದ ಅತಿ ಹಿರಿಯ ಆಟಗಾರ ಎಂಬ ಗೌರವ ಜೊಕೊವಿಚ್ ಪಾಲಾಯಿತು. ಎಲ್ಲ ನಾಲ್ಕು ಗ್ರ್ಯಾನ್ ಸ್ಲಾಮ್‌ಗಳನ್ನು ಕನಿಷ್ಠ ಮೂರು ಸಲ ಗೆದ್ದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆಯೂ ಒಲಿಯಿತು. ಅವರು ಈ ಹಿಂದೆ 2016 ಮತ್ತು 2021 ರಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದರು.

3 ಗಂಟೆ 13 ನಿಮಿಷ ನಡೆದ ಫೈನಲ್ ಪಂದ್ಯದ ಮೊದಲ ಸೆಟ್‌ನಲ್ಲಿ ಇಬ್ಬರೂ ಪಟ್ಟುಬಿಡದೆ ಹೋರಾಡಿದ್ದರಿಂದ 6–6 ರಲ್ಲಿ ಸಮಬಲ ಕಂಡುಬಂತು. ಆದರೆ ಟೈಬ್ರೇಕರ್‌ನಲ್ಲಿ ಅಮೋಘ ಲಯದಲ್ಲಿ ಆಡಿದ ಜೊಕೊವಿಚ್ 7–1 ರಲ್ಲಿ ಗೆದ್ದು ಮೊದಲ ಸೆಟ್ ಕೈವಶ ಮಾಡಿಕೊಂಡರು.

ಎರಡನೇ ಸೆಟ್‌ನಲ್ಲಿ ಜೊಕೊವಿಚ್ ಅವರ ನಿಖರ ರಿಟರ್ನ್‌ಗಳಿಗೆ ತಕ್ಕ ಉತ್ತರ ನೀಡಲು ರೂಡ್ ವಿಫಲರಾದರು. ನಿರಾಯಾಸವಾಗಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 6–3 ರಲ್ಲಿ ಸೆಟ್ ಗೆದ್ದು 2–0 ರಲ್ಲಿ ಮುನ್ನಡೆ ಗಳಿಸಿದರು.

ಮೂರನೇ ಸೆಟ್‌ನ ಮೊದಲ 10 ಗೇಮ್‌ಗಳವರೆಗೆ ಇಬ್ಬರೂ ತಮ್ಮ ಸರ್ವ್‌ಗಳನ್ನು ಉಳಿಸಿಕೊಂಡದ್ದರಿಂದ 5–5 ರಲ್ಲಿ ಸಮಬಲ ಕಂಡುಬಂತು. 11ನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಜೊಕೊವಿಚ್ ನಿರ್ಣಾಯಕ ಮುನ್ನಡೆ ಸಾಧಿಸಿದರು. ಮುಂದಿನ ಗೇಮ್ ಗೆದ್ದು ಚಾಂಪಿಯನ್ ಆದರು.

**₹ 20.60 ಕೋಟಿ ಬಹುಮಾನ:** ಜೊಕೊವಿಚ್ ₹ 20.60 ಕೋಟಿ ನಗದು ಬಹುಮಾನ ಗೆದ್ದುಕೊಂಡರೆ, ರೂಡ್ ₹ 10.28 ಕೋಟಿ ಗಳಿಸಿದರು.



ಗೆಲುವಿನ ಸಂಭ್ರಮದಲ್ಲಿ ಜೊಕೊವಿಚ್ —ಎಎಫ್‌ಪಿ ಚಿತ್ರ

**ಜೊಕೊವಿಚ್ ಗೆದ್ದ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ**

| ಟೂರ್ನಿ | ಗೆದ್ದ ವರ್ಷ |
|---|---|
| ಆಸ್ಟ್ರೇಲಿಯಾ ಓಪನ್ (10) | 2008, 2011, 2012, 2013, 2015, 2016, 2019, 2020, 2021, 2023 |
| ಫ್ರೆಂಚ್ ಓಪನ್ (3) | 2016, 2021, 2023 |
| ವಿಂಬಲ್ಡನ್ (7) | 2011, 2014, 2015, 2018, 2019, 2021, 2022 |
| ಅಮೆರಿಕ ಓಪನ್ (3) | 2011, 2015, 2018 |

**ಹೆಚ್ಚು ಗ್ರ್ಯಾನ್‌ಸ್ಲಾಮ್ ಗೆದ್ದವರು**

| ಆಟಗಾರ | ಒಟ್ಟು ಪ್ರಶಸ್ತಿ |
|---|---|
| ನೊವಾಕ್ ಜೊಕೊವಿಚ್ | 23 |
| ರಫೆಲ್ ನಡಾಲ್ | 22 |
| ರೋಜರ್ ಫೆಡರರ್ | 20 |
| ಪೀಟ್ ಸಾಂಪ್ರಾಸ್ | 14 |
| ಬ್ಯೋನ್ ಬೋರ್ಗ್ | 11 |

### ‘ಹೈಬ್ರಿಡ್ ಮಾದರಿ’ಗೆ ಒಪ್ಪಿಗೆ ಸಾಧ್ಯತೆ

ನವದೆಹಲಿ (ಪಿಟಿಐ): ಏಷ್ಯಾಕಪ್ ಕ್ರಿಕೆಟ್ ಟೂರ್ನಿಯ ಆಯೋಜನೆಗೆ ಸಂಬಂಧಿಸಿದಂತೆ ಪಾಕಿಸ್ತಾನವು ಮುಂದಿಟ್ಟಿರುವ ‘ಹೈಬ್ರಿಡ್ ಮಾದರಿ’ಯನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಒಪ್ಪಿಕೊಳ್ಳುವ ಸಾಧ್ಯತೆಯಿದೆ.

ಅದರಂತೆ ಲೀಗ್ ಹಂತದ ನಾಲ್ಕು ಪಂದ್ಯಗಳು ಪಾಕಿಸ್ತಾನದಲ್ಲಿ ನಡೆಯಲಿದ್ದು, ಭಾರತದ ಎಲ್ಲ ಲೀಗ್ ಪಂದ್ಯಗಳು ಮತ್ತು ಸೂಪರ್ ಫೋರ್ ಹಂತದ ಪಂದ್ಯಗಳು ಶ್ರೀಲಂಕಾದಲ್ಲಿ ಆಯೋಜನೆಯಾಗಲಿವೆ. ಏಷ್ಯಾ ಕಪ್ ಟೂರ್ನಿ ಸೆಪ್ಟೆಂಬರ್‌ನಲ್ಲಿ ನಡೆಯುವ ಸಾಧ್ಯತೆಯಿದೆ.

ಎಸಿಸಿಯು ಮಂಗಳವಾರ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಡಿಸುವ ನಿರೀಕ್ಷೆಯಿದೆ. ‘ಹೈಬ್ರಿಡ್ ಮಾದರಿ’ಗೆ ಒಪ್ಪಿಗೆ ಲಭಿಸಿದರೆ, ಪಾಕಿಸ್ತಾನ ತಂಡವು ಮುಂಬರುವ ಏಕದಿನ ವಿಶ್ವಕಪ್ ಟೂರ್ನಿಗೆ ಭಾರತಕ್ಕೆ ಬರುವುದು ಕೂಡ ಖಚಿತವಾಗಲಿದೆ.

# ಹಾಕಿ: ಭಾರತಕ್ಕೆ ಕಿರೀಟ

ಕಾಕಾಮಿಗಾರಾ, ಜಪಾನ್ (ಪಿಟಿಐ): ಸಾಂಘಿಕ ಪ್ರದರ್ಶನ ನೀಡಿದ ಭಾರತ ತಂಡ, ಮಹಿಳೆಯರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಫೈನಲ್‌ನಲ್ಲಿ ಪ್ರಬಲ ದಕ್ಷಿಣ ಕೊರಿಯಾ ತಂಡದ ಮೇಲೆ ಭಾನುವಾರ 2–1 ಗೋಲುಗಳ ಜಯಗಳಿಸಿ ಮೊದಲ ಬಾರಿ ಪ್ರಶಸ್ತಿ ಗೆದ್ದುಕೊಂಡಿತು.

ಅನು ಮತ್ತು ನೀಲಂ ಅವರು ಭಾರತ ತಂಡದ ಪರ ಗೋಲುಗಳನ್ನು ಗಳಿಸಿದರೆ, ನಾಲ್ಕು ಬಾರಿಯ ಚಾಂಪಿಯನ್ ಕೊರಿಯಾ ಪರ ಏಕೈಕ ಗೋಲನ್ನು ಪಾರ್ಕ್ ಸಿಯೊ ಯೊನ್ ಗಳಿಸಿದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಜಪಾನ್ ತಂಡವನ್ನು 1–0 ಯಿಂದ ಸೋಲಿಸಿದ ಭಾರತ ಫೈನಲ್ ಪ್ರವೇಶಿಸಿತ್ತು. ಆ ಮೂಲಕ ವರ್ಷಾಂತ್ಯಕ್ಕೆ ನಡೆಯುವ ಜೂನಿಯರ್ ಮಹಿಳಾ ವಿಶ್ವಕಪ್‌ಗೂ ಅರ್ಹತೆ ಪಡೆದಿತ್ತು.

2012ರಲ್ಲಿ ಫೈನಲ್‌ಗೆ ತಲುಪಿದ್ದೇ ಈ ಟೂರ್ನಿಯಲ್ಲಿ ಭಾರತ ತಂಡದ ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು.

ಪಂದ್ಯದ ಆರಂಭದಲ್ಲಿ ಭಾರತ ದಾಳಿಗಳನ್ನು ನಡೆಸಿತು. ಮೊದಲ ನಿಮಿಷವೇ ಪೆನಾಲ್ಟಿ ಕಾರ್ನರ್ ಅವಕಾಶ ದೊರಕಿತ್ತು. ಇದರಲ್ಲಿ ವಿಫಲವಾಯಿತು. ಕೆಲಹೊತ್ತಿನ ನಂತರ ಕೊರಿಯಾ ತಂಡವೂ ಪ್ರತಿದಾಳಿ ನಡೆಸಿತ್ತು. ಒಮ್ಮೆ ಕೊರಿಯಾ ತಂಡದ ಯತ್ನವನ್ನು ನೀಲಂ ಗೋಲುಗೆರೆಯಲ್ಲಿ ತಡೆದರು. ಮೊದಲ ಕ್ವಾರ್ಟರ್ ಗೋಲುರಹಿತವಾಯಿತು. ಆದರೆ ಪಂದ್ಯದ 22ನೇ ನಿಮಿಷ ಪೆನಾಲ್ಟಿ ಕಾರ್ನರ್‌ನಲ್ಲಿ ಅನು ಭಾರತಕ್ಕೆ ಮುನ್ನಡೆ ದೊರಕಿಸಿಕೊಟ್ಟರು.

ಎದುರಾಳಿ ತಂಡದ ಪಾರ್ಕ್ ಸಿಯೊ ಯೆನ್ (24ನೇ ನಿ.) ‘ಡಿ’ ಆವರಣದೊಳಗಿಂದ ಗೋಲು ಗಳಿಸಿ ಸಮಬಲ ಸಾಧಿಸಿದರು. ವಿರಾಮದ ವೇಳೆ ಸ್ಕೋರ್ 1–1ರಲ್ಲಿ ಸಮನಾಗಿತ್ತು. 41ನೇ ನಿಮಿಷ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ನೀಲಂ ಅವರು ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಕಳಿಸಿ ಭಾರತದ ಗೆಲುವಿಗೆ ಕಾರಣರಾದರು.

### ಎಫ್‌ಐಎಚ್ ಹಾಕಿ: ಭಾರತಕ್ಕೆ ಗೆಲುವು

ಐಂಡ್‌ಹೋವನ್, ನೆದರ್ಲೆಂಡ್ಸ್ (ಪಿಟಿಐ): ಭಾರತ ತಂಡದವರು ಭಾನುವಾರ ನಡೆದ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ 2–1 ಗೋಲುಗಳಿಂದ ಅರ್ಜೆಂಟೀನಾ ತಂಡವನ್ನು ಮಣಿಸಿದರು.

ಆಕಾಶ್‌ದೀಪ್ ಸಿಂಗ್ (1ನೇ ನಿ.) ಮತ್ತು ಸುಖ್‌ಜೀತ್ ಸಿಂಗ್ (13) ಅವರು ಭಾರತದ ಪರ ಗೋಲು ಗಳಿಸಿದರು. ಅರ್ಜೆಂಟೀನಾ ತಂಡದ ಟೊಸ್ಕಾನಿ ಲುಕಾಸ್ ಅವರು 57ನೇ ನಿ.ದಲ್ಲಿ ಗಳಿಸಿದರು.

ಶನಿವಾರ ನಡೆದಿದ್ದ ಪಂದ್ಯದಲ್ಲಿ ಭಾರತ ತಂಡ 2–3 ಗೋಲುಗಳಿಂದ ನೆದರ್ಲೆಂಡ್ಸ್ ಎದುರು ಸೋತಿತ್ತು. ಆದರೆ ಅರ್ಜೆಂಟಿನಾ ವಿರುದ್ಧ ಸಾಂಘಿಕ ಪ್ರದರ್ಶನ ನೀಡಿತು.

# ಟೆಸ್ಟ್ ಕ್ರಿಕೆಟ್‌ಗೆ ಆಸ್ಟ್ರೇಲಿಯಾ ದೊರೆ

## ಡಬ್ಲ್ಯುಟಿಸಿ ಫೈನಲ್‌ನಲ್ಲಿ ರೋಹಿತ್ ಬಳಗಕ್ಕೆ 209 ರನ್ ಸೋಲು; ಬೊಲಾಂಡ್, ಲಯನ್ ಮಿಂಚು



ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಗೆದ್ದ ಆಸ್ಟ್ರೇಲಿಯಾ ತಂಡದ ಆಟಗಾರರು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಲಂಡನ್ (ಪಿಟಿಐ/ ಎಎಫ್‌ಪಿ): ಹತ್ತು ವರ್ಷಗಳಿಂದ ಐಸಿಸಿ ಟ್ರೋಫಿಯ ಬರ ಎದುರಿಸುತ್ತಿರುವ ಭಾರತ ತಂಡಕ್ಕೆ ಮತ್ತೆ ನಿರಾಸೆ ಕಾಡಿದೆ. ಓವಲ್ ಕ್ರೀಡಾಂಗಣದಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ರೋಹಿತ್ ಶರ್ಮಾ ಬಳಗವನ್ನು 209 ರನ್‌ಗಳಿಂದ ಮಣಿಸಿದ ಆಸ್ಟ್ರೇಲಿಯಾ ತಂಡ, ಟೆಸ್ಟ್ ಕ್ರಿಕೆಟ್‌ನ ನೂತನ ದೊರೆ ಎನಿಸಿಕೊಂಡಿತು.

ಸ್ಕಾಟ್ ಬೊಲಾಂಡ್ ಒಳಗೊಂಡಂತೆ ಆಸ್ಟ್ರೇಲಿಯಾದ ಬೌಲರ್‌ಗಳ ಶಿಸ್ತಿನ ದಾಳಿಗೆ ನಲುಗಿದ ಭಾರತ ತಂಡ, ಭಾನುವಾರ ಎರಡನೇ ಇನಿಂಗ್ಸ್‌ನಲ್ಲಿ 234 ರನ್‌ಗಳಿಗೆ ಆಲೌಟಾಯಿತು. ಅಂತಿಮ ದಿನ 70 ರನ್ ಗಳಿಸುವಷ್ಟರಲ್ಲಿ ಏಳು ವಿಕೆಟ್‌ಗಳ ಪತನಗೊಂಡವು. ಭೋಜನ ವಿರಾಮಕ್ಕೂ ಮುನ್ನವೇ ಪ್ಯಾಟ್ ಕಮಿನ್ಸ್ ಬಳಗ ಗೆದ್ದು ಬೀಗಿತು.

ಮಹೇಂದ್ರಸಿಂಗ್ ಧೋನಿ ಬಳಗವು 2013ರಲ್ಲಿ ಇಂಗ್ಲೆಂಡ್‌ನಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿದ ಬಳಿಕ ಭಾರತವು ಐಸಿಸಿ ಟೂರ್ನಿಯನ್ನು ಗೆದ್ದೇ ಇಲ್ಲ. ಇದೀಗ ಕಾಯುವಿಕೆ ಮತ್ತೆ ಮುಂದುವರಿದಿದೆ. ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತಕ್ಕೆ ಎದುರಾದ ಸತತ ಎರಡನೇ ಸೋಲು ಇದು. ಎರಡು ವರ್ಷಗಳ ಹಿಂದೆ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು 8 ವಿಕೆಟ್‌ಗಳಿಂದ ಮುಗ್ಗರಿಸಿತ್ತು.

ಪ್ರಮುಖ ಬ್ಯಾಟರ್‌ಗಳ ವೈಫಲ್ಯ ಭಾರತದ ಸೋಲಿಗೆ ಕಾರಣವಾಯಿತು ಎಂದು ವಿಶ್ಲೇಷಿಸಲಾಗುತ್ತಿದೆ. ಸ್ಪಿನ್ನರ್ ಆರ್.ಅಶ್ವಿನ್ ಅವರನ್ನು ಕೈಬಿಟ್ಟದ್ದು, ಪಂದ್ಯದ ಮೊದಲ ದಿನದಿಂದಲೇ ಚರ್ಚೆಗೆ ಗ್ರಾಸವೊದಗಿಸಿತ್ತು. ರೋಹಿತ್ ಶರ್ಮಾ, ಶುಭಮನ್ ಗಿಲ್, ಚೇತೇಶ್ವರ ಪೂಜಾರ ಹಾಗೂ ವಿರಾಟ್ ಕೊಹ್ಲಿ ಅವರು ಮಹತ್ವದ ಪಂದ್ಯದಲ್ಲಿ ಎಡವಿದರು.

ಗೆಲುವಿಗೆ 444 ರನ್‌ಗಳ ದಾಖಲೆ ಗುರಿ ಬೆನ್ನಟ್ಟಿದ್ದ ರೋಹಿತ್ ಬಳಗ, ನಾಲ್ಕನೇ ದಿನದಾಟದ ಅಂತ್ಯಕ್ಕೆ 3 ವಿಕೆಟ್‌ಗಳಿಗೆ 164 ರನ್ ಗಳಿಸಿತ್ತು. ಅಂತಿಮ ದಿನ ಇನ್ನುಳಿದ ಏಳು ವಿಕೆಟ್‌ಗಳಿಂದ 280 ರನ್ ಗಳಿಸಬೇಕಿತ್ತು. ಅನುಭವಿ ಆಟಗಾರರಾದ ಕೊಹ್ಲಿ ಮತ್ತು ಅಜಿಂಕ್ಯ ರಹಾನೆ ಕ್ರೀಸ್‌ನಲ್ಲಿದ್ದ ಕಾರಣ ಭಾರತದ ಆಸೆ ಜೀವಂತವಾಗುಳಿದಿತ್ತು.

ಓವಲ್ ಕ್ರೀಡಾಂಗಣದಲ್ಲಿ ನೆರೆದಿದ್ದ ಸಾವಿರಾರು ಪ್ರೇಕ್ಷಕರ ಚಪ್ಪಾಳೆ, ಪ್ರೋತ್ಸಾಹದೊಂದಿಗೆ ಇವರಿಬ್ಬರು ಬೆಳಿಗ್ಗೆ ಇನಿಂಗ್ಸ್ ಮುಂದುವರಿಸಿದರು. ಆದರೆ ದಿನದ ಏಳನೇ ಓವರ್‌ನಲ್ಲಿ ಸ್ಕಾಟ್ ಬೊಲಾಂಡ್ (46ಕ್ಕೆ 3) ಅವರು ಕೊಹ್ಲಿ ಮತ್ತು ರವೀಂದ್ರ ಜಡೇಜ ಅವರ ವಿಕೆಟ್‌ಗಳನ್ನು ಪಡೆದು ಭಾರತದ ಗೆಲುವಿನ ಬಾಗಿಲು ಮುಚ್ಚಿದರು.

ಕೊಹ್ಲಿ (49) ಹಿಂದಿನ ದಿನದ ಮೊತ್ತಕ್ಕೆ ಕೇವಲ ಐದು ರನ್ ಸೇರಿಸಿ ಪೆವಿಲಿಯನ್‌ಗೆ ಮರಳಿದರು. ಬೊಲಾಂಡ್ ಬೌಲಿಂಗ್‌ನಲ್ಲಿ ಆಫ್ ಸ್ಟಂಪ್‌ನಿಂದ ಹೊರಹೋಗುತ್ತಿದ್ದ ಚೆಂಡನ್ನು ಡ್ರೈವ್ ಮಾಡಲು ಮುಂದಾಗಿ ಎರಡನೇ ಸ್ಲಿಪ್‌ನಲ್ಲಿ ಸ್ಟೀವ್ ಸ್ಮಿತ್‌ಗೆ ಕ್ಯಾಚಿತ್ತರು. ಸ್ಮಿತ್ ಅವರು ಬಲಭಾಗಕ್ಕೆ ಡೈವ್ ಹೊಡೆದು ಆಕರ್ಷಕವಾಗಿ ಚೆಂಡನ್ನು ಹಿಡಿತಕ್ಕೆ ಪಡೆದುಕೊಂಡರು.

ಇದಾದ ಎರಡು ಎಸೆತಗಳ ಬಳಿಕ ಜಡೇಜ ಶೂನ್ಯಕ್ಕೆ ಔಟಾದರು. ಬೊಲಾಂಡ್ ಎಸೆತದ ಲೈನ್ ಮತ್ತು ಲೆಂಗ್ತ್ ಅಂದಾಜಿಸುವಲ್ಲಿ ವಿಫಲರಾಗಿ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿಗೆ ಕ್ಯಾಚಿತ್ತರು. 179 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡ ಭಾರತ ಒತ್ತಡಕ್ಕೆ ಸಿಲುಕಿತು.

ರಹಾನೆ ಅವರಿಗೆ ಜತೆಯಾದ ಕೆ.ಎಸ್.ಭರತ್, ಮಿಷೆಲ್ ಸ್ಟಾರ್ಕ್ ಬೌಲಿಂಗ್‌ನಲ್ಲಿ ಎರಡು ಸೊಗಸಾದ ಬೌಂಡರಿ ಹೊಡೆದು ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿದರು. ಇವರಿಬ್ಬರು ಆರನೇ ವಿಕೆಟ್‌ಗೆ 33 ರನ್ ಸೇರಿಸಿದರು. ಆದರೆ ರಹಾನೆ (46) ವಿಕೆಟ್ ಪಡೆದ ಸ್ಟಾರ್ಕ್ ಈ ಜತೆಯಾಟ ಮುರಿದರು.

ಮೊದಲ ಇನಿಂಗ್ಸ್‌ನಲ್ಲಿ 89 ರನ್ ಗಳಿಸಿದ ಮುಂಬೈನ ಬ್ಯಾಟರ್, ಅನಗತ್ಯ ಹೊಡೆತಕ್ಕೆ ಮುಂದಾಗಿ ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ಕೆಟ್ಟ ಹೊಡೆತಕ್ಕೆ ವಿಕೆಟ್ ತೆತ್ತ ಹತಾಶೆಯಿಂದ ಅವರು ತಲೆತಗ್ಗಿಸಿಕೊಂಡು ಪೆವಿಲಿಯನ್‌ನತ್ತ ಹೆಜ್ಜೆಯಿಟ್ಟರು.

ಕೊನೆಯಲ್ಲಿ ಮೋಡಿ ಮಾಡಿದ ಸ್ಪಿನ್ನರ್ ನೇಥನ್ ಲಯನ್ (41ಕ್ಕೆ 4), ಭಾರತದ ಇನಿಂಗ್ಸ್‌ಗೆ ಬೇಗನೇ ತೆರೆ ಎಳೆದರು. ಭಾರತದ ವಿಕೆಟ್‌ಗಳು ಬೇಗನೇ ಬಿದ್ದದ್ದರಿಂದ ಭೋಜನ ವಿರಾಮವನ್ನು ವಿಸ್ತರಿಸಲಾಯಿತು. ಆಸ್ಟ್ರೇಲಿಯಾ ಈ ಅವಧಿಯಲ್ಲಿ ಗೆಲುವಿನ ವಿಧಿಯನ್ನು ಪೂರೈಸಿತು.

ಕೊನೆಯ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದ ಮೊಹಮ್ಮದ್ ಸಿರಾಜ್ ಅವರು ಲಯನ್ ಎಸೆತವನ್ನು ರಿವರ್ಸ್ ಸ್ವೀಪ್ ಮಾಡಲು ಪ್ರಯತ್ನಿಸಿದರು. ಮೇಲಕ್ಕೆ ಚಿಮ್ಮಿದ ಚೆಂಡು ಬೊಲಾಂಡ್ ಅವರ ಕೈಸೇರುತ್ತಿದ್ದಂತೆಯೇ ಕಮಿನ್ಸ್ ಬಳಗ ಗೆಲುವಿನ ಸಂಭ್ರಮ ಆಚರಿಸಿತು.

### 3 ಮಾದರಿಗಳಲ್ಲೂ ವಿಶ್ವ ಚಾಂಪಿಯನ್

ಡಬ್ಲ್ಯುಟಿಸಿ ಫೈನಲ್ ಗೆದ್ದ ಆಸ್ಟ್ರೇಲಿಯಾ ತಂಡ ಕ್ರಿಕೆಟ್‌ನ ಎಲ್ಲ ಮೂರು ಮಾದರಿಗಳಲ್ಲೂ ವಿಶ್ವ ಚಾಂಪಿಯನ್ ಆದ ಮೊದಲ ತಂಡ ಎಂಬ ಗೌರವಕ್ಕೆ ಪಾತ್ರವಾಯಿತು.

ಕಾಂಗರೂ ನಾಡಿನ ತಂಡ ಏಕದಿನ ವಿಶ್ವಕಪ್‌ನಲ್ಲಿ ಐದು ಸಲ (1987, 1999, 2003, 2007, 2015) ಮತ್ತು ಟಿ20 ವಿಶ್ವಕಪ್‌ನಲ್ಲಿ ಒಮ್ಮೆ (2021) ಚಾಂಪಿಯನ್ ಆಗಿದೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಎರಡು ಸಲ (2006, 2009) ಜಯಿಸಿದೆ.

### ಮೂರು ಪಂದ್ಯಗಳ ಫೈನಲ್: ಸಲಹೆ

ಲಂಡನ್: ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ಮೂರು ಪಂದ್ಯಗಳ (ಬೆಸ್ಟ್ ಆಫ್ ತ್ರೀ) ಮಾದರಿಯಲ್ಲಿದ್ದರೆ ಉತ್ತಮ ಎಂದು ರೋಹಿತ್ ಶರ್ಮಾ ಸಲಹೆ ನೀಡಿದ್ದಾರೆ. ಜೊತೆಗೆ, ತಂಡ ಮೂರನೇ ಬಾರಿ ಫೈನಲ್ ತಲುಪಿದರೆ ಕಡೇಪಕ್ಷ ತಯಾರಿಗೆ 20 ರಿಂದ 25 ದಿನ ಬಿಡುವು ಇರಬೇಕು ಎಂದಿದ್ದಾರೆ.

ಎರಡು ವರ್ಷಗಳ ಹಿಂದೆ ಸೌತಾಂಪ್ಟನ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಡಬ್ಲ್ಯುಟಿಸಿ ಫೈನಲ್ ಸೋತಾಗ ಆಗಿನ ಮುಖ್ಯ ಕೋಚ್ ರವಿ ಶಾಸ್ತ್ರಿ ಮತ್ತು ನಾಯಕ ವಿರಾಟ್ ಕೊಹ್ಲಿ ಅವರು ಇಂಥದ್ದೇ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಒಂದು ತಿಂಗಳ ಅವಧಿಯೊಳಗೆ ಈ ಮೂರೂ ಪಂದ್ಯಗಳನ್ನು ಮುಗಿಸಬೇಕು. ಈಗಿನ ಬಿಡುವಿಲ್ಲದ ಕಾರ್ಯಕ್ರಮ ಪಟ್ಟಿಯಲ್ಲಿ ಇದಕ್ಕೆ ಸಮಯ ಹೊಂದಿಸುವುದು ಕಷ್ಟ ಎಂದೂ ಅವರು ಹೇಳಿದರು.

**ನಮ್ಮ ಬೌಲಿಂಗ್ ಚೆನ್ನಾಗಿರಲಿಲ್ಲ:** ಮೊದಲ ಇನಿಂಗ್ಸ್‌ನಲ್ಲಿ ಕಳಪೆ ಬೌಲಿಂಗ್ ನಮ್ಮ ಸೋಲಿಗೆ ಕಾರಣವಾಯಿತು ಎಂದು ರೋಹಿತ್ ದೂರಿದರು. ಆದರೆ ಎರಡು ವರ್ಷಗಳ ಅವಧಿಯಲ್ಲಿ ತಂಡ ತೋರಿದ ಉತ್ತಮ ಸಾಧನೆಯ ಶ್ರೇಯಸ್ಸನ್ನು ಕಸಿದುಕೊಳ್ಳಲು ಯಾರಿಗೂ ಆಗದು ಎಂದೂ ಹೇಳಿದರು.

‘ಸೋಲು ಅರಗಿಸಿಕೊಳ್ಳುವುದು ಕಷ್ಟ. ನಾವು ಉತ್ತಮ ಆರಂಭ ಮಾಡಿದೆವು. ಟಾಸ್ ಗೆದ್ದ ಮೇಲೆ, ಅನುಕೂಲಕರ ವಾತಾವರಣದಲ್ಲಿ ನಾವು ಮೊದಲ ಅವಧಿಯಲ್ಲಿ ಚೆನ್ನಾ ಗಿಯೇ ಬೌಲ್ ಮಾಡಿದ್ದೆವು. ಆದರೆ ನಂತರ ಬೌಲ್ ಮಾಡಿದ ರೀತಿಯಿಂದ ಹಿನ್ನಡೆ ಅನುಭವಿಸಿದೆವು’ ಎಂದು ರೋಹಿತ್ ಟ್ರೋಫಿ ಪ್ರದಾನ ಸಮಾರಂಭದಲ್ಲಿ ಪ್ರತಿಕ್ರಿಯಿಸಿದರು.

‘ಆಸ್ಟ್ರೇಲಿಯಾದ ಬ್ಯಾಟರ್‌ಗಳಿಗೆ ಶ್ರೇಯ ಸಲ್ಲಬೇಕು. ವಿಶೇಷವಾಗಿ ಟ್ರಾವಿಸ್ ಹೆಡ್ ಅತ್ಯುತ್ತಮ ಇನಿಂಗ್ಸ್ ಆಡಿದರು‘ ಎಂದರು

### ಮುಖ್ಯಾಂಶಗಳು

- ಮತ್ತೆ ಭಾರತದ ಕೈತಪ್ಪಿದ ಐಸಿಸಿ ಟ್ರೋಫಿ
- 10 ವರ್ಷಗಳಿಂದ ಯಾವುದೇ ಐಸಿಸಿ ಟೂರ್ನಿ ಗೆದ್ದಿಲ್ಲ
- ಅಂತಿಮ ದಿನ 70 ರನ್‌ಗಳಿಗೆ ಏಳು ವಿಕೆಟ್ ಪತನ

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್**
**ಆಸ್ಟ್ರೇಲಿಯಾ 469 (121.3 ಓವರ್‌ಗಳಲ್ಲಿ)**
**ಭಾರತ 296 (69.4 ಓವರ್‌ಗಳಲ್ಲಿ)**
**ಎರಡನೇ ಇನಿಂಗ್ಸ್**
**ಆಸ್ಟ್ರೇಲಿಯಾ 8ಕ್ಕೆ 270 ಡಿಕ್ಲೇರ್ಡ್ (84.3 ಓವರ್‌ಗಳಲ್ಲಿ)**
**ಭಾರತ 234 (63.3 ಓವರ್‌ಗಳಲ್ಲಿ)**
**(ಶನಿವಾರ: 3 ವಿಕೆಟ್‌ಗೆ 164)**

ಕೊಹ್ಲಿ ಸಿ ಸ್ಮಿತ್ ಬಿ ಬೊಲಾಂಡ್ 49 (78ಎ, 4x7)
ರಹಾನೆ ಸಿ ಕ್ಯಾರಿ ಬಿ ಸ್ಟಾರ್ಕ್ 46 (108 ಎ, 4x7)
ಜಡೇಜಾ ಸಿ ಕ್ಯಾರಿ ಬಿ ಬೊಲಾಂಡ್ 0 (2ಎ)
ಭರತ್ ಸಿ ಮತ್ತು ಬಿ ಲಯನ್ 23 (41 ಎ, 4x2)
ಶಾರ್ದೂಲ್ ಎಲ್‌ಬಿಡಬ್ಲ್ಯು ಬಿ ಲಯನ್ 0 (5ಎ)
ಯಾದವ್ ಸಿ ಕ್ಯಾರಿ ಬಿ ಸ್ಟಾರ್ಕ್ 1 (12 ಎ)
ಶಮಿ ಔಟಾಗದೇ 13 (8ಎ, 4x3)
ಸಿರಾಜ್ ಸಿ ಬೊಲಾಂಡ್ ಬಿ ಲಯನ್ 1 (6ಎ)

**ಇತರೆ:** 13 (ಲೆಗ್‌ಬೈ 2, ನೋಬಾಲ್ 5, ವೈಡ್ 6)

**ವಿಕೆಟ್ ಪತನ:** 4–179 (ವಿರಾಟ್ ಕೊಹ್ಲಿ, 46.3), 5–179 (ರವೀಂದ್ರ ಜಡೇಜಾ, 46.5), 6–212 (ಅಜಿಂಕ್ಯ ರಹಾನೆ, 56.2), 7–213 (ಶಾರ್ದೂಲ್ ಠಾಕೂರ್, 57.4), 8–220 (ಉಮೇಶ್ ಯಾದವ್, 60.2), 9–224 (ಶ್ರೀಕರ್ ಭರತ್, 61.5), 10–234 (ಮೊಹಮ್ಮದ್ ಸಿರಾಜ್, 63.3)

**ಬೌಲಿಂಗ್:** ಪ್ಯಾಟ್ ಕಮಿನ್ಸ್ 13–1–55–1, ಸ್ಕಾಟ್ ಬೊಲಾಂಡ್ 16–2–46–3, ಮಿಚೆಲ್ ಸ್ಟಾರ್ಕ್ 14–1–77–2, ಕ್ಯಾಮೆರಾನ್ ಗ್ರೀನ್ 5–0–13–0, ನೇಥನ್ ಲಯನ್ 15.3–2–41–4

**ಫಲಿತಾಂಶ: ಆಸ್ಟ್ರೇಲಿಯಾಕ್ಕೆ 209 ರನ್ ಗೆಲುವು**

# ಅಂತಿಮ ಏಕದಿನ: ನಮೀಬಿಯಾಕ್ಕೆ ಜಯ

ವಿಂಡ್‌ಹಾಕ್ (ನಮೀಬಿಯಾ): ಆತಿಥೇಯ ನಮೀಬಿಯಾ ತಂಡ ಐದನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಿತು. ಆದರೆ ಕರ್ನಾಟಕ ಸರಣಿಯನ್ನು 3–2 ರಿಂದ ಗೆದ್ದುಕೊಂಡಿತು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಕರ್ನಾಟಕ 48.1 ಓವರುಗಳಲ್ಲಿ 231 ರನ್‌ಗಳಿಗೆ ಆಲೌಟ್ ಆಯಿತು. ನಿಕಿನ್ ಜೋಸ್ 55 ಎಸೆತಗಳಲ್ಲಿ ಒಂದು ಸಿಕ್ಸರ್, ನಾಲ್ಕು ಬೌಂಡರಿಗಳಿದ್ದ 61 ರನ್ ಹೊಡೆದರು.

ಉತ್ತರವಾಗಿ ನಮೀಬಿಯಾ ತಂಡ 39.1 ಓವರುಗಳಲ್ಲಿ (5 ವಿಕೆಟ್‌ಗೆ 236 ರನ್) ಗುರಿತಲುಪಿತು. ಆರಂಭ ಆಟಗಾರ ಸ್ಟೀಫನ್ ಬಾರ್ಡ್ (59), ಮೈಕೆಲ್ ವಾನ್ ಲಿಂಜೆನ್ (56) ಮತ್ತು ನಾಯಕ ಗೆರಾರ್ಡ್ ಎರಾಸ್ಮಸ್ (ಔಟಾಗದೇ 59) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

**ಸ್ಕೋರುಗಳು:** ಕರ್ನಾಟಕ: 48.1 ಓವರುಗಳಲ್ಲಿ 231 (ಕಿಶನ್ ಬೇದ್ರೆ 43, ಕೃತಿಕ್ ಕೃಷ್ಣ 25, ನಿಕಿನ್ ಜೋಸ್ 61, ಅನೀಶ್ವರ್ ಗೌತಮ್ 29; ಯಾನ್ ಫ್ರಿಲಿಂಕ್ 28ಕ್ಕೆ2, ಬರ್ನಾರ್ಡ್ ಶೋಲ್ಜ್ 33ಕ್ಕೆ3, ಹಂಡ್ರೆ ಕ್ಲಾಝಿಂಗೆ 56ಕ್ಕೆ3); ನಮೀಬಿಯಾ: 39.1 ಓವರುಗಳಲ್ಲಿ 5 ವಿಕೆಟ್‌ಗೆ 236 (ಸ್ಟೀಫನ್ ಬಾರ್ಡ್ 59, ಮೈಕೆಲ್ ವಾನ್ ಲಿಂಜೆನ್ 56, ಗೆರಾರ್ಡ್ ಎರಾಸ್ಮಸ್ ಔಟಾಗದೇ 59, ಮಿಕಾವ್ ಡುಪ್ರೀಝ್ 38; ಕಿಶನ್ ಬೇದ್ರೆ 52ಕ್ಕೆ2).